"JANAPADA" Monthly - March 2017
"ಜನಪದ" ಮಾಸಿಕ - ಮಾರ್ಚ್ 2017

Page No. -52
RNI No. KAR/KAN/2010/20676

Regd No. KA/BG/GPO-2526/2015-2017 License to post without prepayment WPP 34, Published on 27th
Dt. 29th & 30th Posted at (Every month), Bangalore PSO, Mysore Road, Bangalore - 26


ಮಾರ್ಚ್ 22

## ವಿಶ್ವ ಜಲ ದಿನ



## ಜಲ ಉಳಿಸಿ;
## ಜೀವ ಉಳಿಸಿ

World Water Day



ವಾರ್ಷಿಕ ಚಂದಾ ರೂ.25/-


# ಜನಪದ

ಮಾರ್ಚ್ 2017



ಬೆಂಗಳೂರಿನಲ್ಲಿ ವಿಧಾನಸೌಧದ ಮುಂದೆ 9ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಉದ್ಘಾಟನಾ ಸಮಾರಂಭ ಭವ್ಯವಾಗಿ ನೆರವೇರಿತು.
ಮಾನ್ಯ ಮುಖ್ಯಮಂತ್ರಿಗಳು ಸೇರಿದಂತೆ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಗಣ್ಯರು, ಕನ್ನಡ ಚಲನಚಿತ್ರರಂಗ ಸಮಾರಂಭದಲ್ಲಿ ಪಾಲ್ಗೊಂಡಿತ್ತು.






# ಭಾರತ ಸಂವಿಧಾನ
## ಮೂಲಭೂತ ಕರ್ತವ್ಯಗಳು

1. ಪ್ರತಿಯೊಬ್ಬರು ಸಂವಿಧಾನಕ್ಕೆ ನಿಷ್ಠರಾಗಿರಬೇಕು. ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು ಹಾಗೂ ರಾಷ್ಟ್ರ ಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸಬೇಕು. ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆ ಭಾರತ ದೇಶದ ಪ್ರತಿಷ್ಠೆಯ ದ್ಯೋತಕಗಳು. ಇವುಗಳನ್ನು ಯಾವುದೇ ಕಾರಣಕ್ಕೂ ವಾಣಿಜ್ಯ ಉದ್ದೇಶಗಳಿಗೆ ಬಳಕೆ ಮಾಡುವಂತಿಲ್ಲ. ಅಲ್ಲದೆ ರಾಷ್ಟ್ರಧ್ವಜಕ್ಕೆ ಮತ್ತು ರಾಷ್ಟ್ರಗೀತೆಗೆ ಅವಮಾನ ಮಾಡುವುದು ಶಿಕ್ಷಾರ್ಹ ಅಪರಾಧವಾಗುತ್ತದೆ.
2. ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ಕೊಟ್ಟ ಉದಾತ್ತ ಆದರ್ಶಗಳನ್ನು ಮನನಗೊಳಿಸುವುದು ಮತ್ತು ಅದರಂತೆ ನಡೆದುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. (ಉದಾಹರಣೆ: 1857ರ ಸಿಪಾಯಿದಂಗೆ, ಗಾಂಧೀಜಿಯವರ ದಂಡಿ ಸತ್ಯಾಗ್ರಹ, ಜಲಿಯನ್ ವಾಲಾಬಾಗ್ ಮಾರಣ ಹೋಮ, ಸ್ವದೇಶಿ ಚಳುವಳಿ, ಭಾರತ ಬಿಟ್ಟು ತೊಲಗಿ ಚಳುವಳಿ, ಅಸಹಕಾರ ಚಳುವಳಿ ಇತ್ಯಾದಿ)
3. ಎಲ್ಲ ಭಾರತೀಯರು ರಾಷ್ಟ್ರದ ಸಾರ್ವಭೌಮತ್ವ, ಏಕತೆ, ಅಖಂಡತೆ ಮತ್ತು ನಿಷ್ಠೆಯನ್ನು ಎತ್ತಿ ಹಿಡಿಯಬೇಕು.
4. ದೇಶದ ರಕ್ಷಣೆಗೆ ಸಂಬಂಧಿಸಿದಂತೆ ಅವಶ್ಯಕತೆ ಬಿದ್ದಾಗ ರಾಷ್ಟ್ರದ ಸೇವೆಯಲ್ಲಿ ತೊಡಗಿಸಿಕೊಳ್ಳುವುದು.
5. ಭಾರತೀಯರು ಅವರು ಯಾವುದೇ ಧರ್ಮದವರಾಗಿರಲೀ, ಯಾವುದೇ ಭಾಷಿಕರಾಗಿರಲೀ, ಅಥವಾ ಪ್ರದೇಶದವರಾಗಿರಲೀ, ಪ್ರತಿಯೊಬ್ಬರು ಸಾಮರಸ್ಯವನ್ನು ಮತ್ತು ಭಾತೃತ್ವವನ್ನು ಪ್ರೇರೇಪಿಸಬೇಕು. (ಮಹಿಳೆಯರ ಆತ್ಮಗೌರವಕ್ಕೆ ಚ್ಯುತಿ ಬರುವಂಥ ಎಲ್ಲಾ ಆಚರಣೆಗಳನ್ನು ತ್ಯಜಿಸುವುದು; ಮಹಿಳೆಯರ ಅಪಹರಣ, ವರದಕ್ಷಿಣೆ ಕಿರುಕುಳ, ಸಜೀವ ದಹನ, ಮಹಿಳೆಯರ ಬಗ್ಗೆ ತಿರಸ್ಕಾರ ಭಾವ ಇತ್ಯಾದಿ ಆಚರಣೆಗಳು ನಿಲ್ಲಬೇಕು.)
6. ನಮ್ಮ ಸಮಷ್ಟಿ ಸಂಸ್ಕೃತಿಯ ಚಾರಿತ್ರಿಕ ಮೌಲ್ಯಗಳನ್ನು ಗೌರವಿಸುವುದರ ಜತೆಗೆ ಅವುಗಳನ್ನು ಕಾಪಾಡಿಕೊಂಡು ಬರುವುದು (ನಮ್ಮ ಸಂಸ್ಕೃತಿ, ನಮ್ಮ ಭಾಷೆ, ನಮ್ಮ ಸಂಗೀತ, ನಮ್ಮ ಉಡುಗೆ ತೊಡುಗೆಗಳ ಕುರಿತಾಗಿ ಗೌರವ, ಪಾಶ್ಚಿಮಾತ್ಯ ಸಂಸ್ಕೃತಿಯ ಅಂಧಾನುಕರಣೆಯನ್ನು ತ್ಯಜಿಸಿ, ನಮ್ಮ ಜೀವನ ಕ್ರಮದ ಮೌಲ್ಯಗಳನ್ನು ಎತ್ತಿ ಹಿಡಿಯುವುದು
7. ಅರಣ್ಯಗಳು, ಜಲ ರಾಶಿಗಳು, ಅಂದರೆ ಕೆರೆ, ಕಟ್ಟೆ, ನದಿ, ಸರೋವರಗಳು, ಅರಣ್ಯ ಜೀವಿಗಳು ಇವುಗಳನ್ನೆಲ್ಲ ಒಳಗೊಂಡಂತೆ ಪರಿಸರವನ್ನು ಕಾಪಾಡಿಕೊಳ್ಳುವುದಲ್ಲದೆ, ಅದನ್ನು ಉಳಿಸಿ ಬೆಳೆಸುವುದು (ಉದಾಹರಣೆಗೆ; ದಂತಕ್ಕಾಗಿ ಆನೆಗಳನ್ನು ಬೇಟೆಯಾಡುವುದು, ಚರ್ಮಕ್ಕಾಗಿ ಕಾಡು ಮೃಗಗಳನ್ನು ಕೊಲ್ಲುವುದು, ಪಶು ಪಕ್ಷಿಗಳನ್ನು ಬೇಟೆಯಾಡುವುದು, ಪರಿಸರಕ್ಕೆ ಹಾನಿ ಮಾಡುವುದು ಇತ್ಯಾದಿ)
8. ವೈಜ್ಞಾನಿಕ ಮನೋಧರ್ಮವನ್ನು, ಮಾನವೀಯತೆಯನ್ನು, ಅನ್ವೇಷಿಕ ಪ್ರವೃತ್ತಿ ಮತ್ತು ಸುಧಾರಣೆಯ ಮನೋಭಾವವನ್ನು ಬೆಳೆಸಿಕೊಳ್ಳಬೇಕು.
9. ಸಾರ್ವಜನಿಕ ಆಸ್ತಿಯನ್ನು ಕಾಪಾಡುವುದು ಮತ್ತು ಹಿಂಸಾ ಪ್ರವೃತ್ತಿಯನ್ನು ತ್ಯಜಿಸುವುದು. (ಇತ್ತೀಚಿನ ದಿನಗಳಲ್ಲಿ ಯಾವುದೇ ಚಳವಳಿಯಾಗಲೀ, ಯಾರ ಮೇಲೆ ಸಿಟ್ಟಿರಲಿ, ಬಸ್ಸುಗಳಿಗೆ ಬೆಂಕಿ ಹಚ್ಚುವುದು, ಕಟ್ಟಡಗಳ ಗಾಜುಗಳನ್ನು ಪುಡಿ ಮಾಡುವುದು, ಹಿಂಸಾಚಾರದಲ್ಲಿ ತೊಡಗುವುದು ಕಂಡು ಬರುತ್ತದೆ. ಇಂಥ ಕೃತ್ಯಗಳು ಸಭ್ಯವಲ್ಲ)
10. ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳ ಪರಿಧಿಯಲ್ಲಿ ಉತ್ಕೃಷ್ಟತೆ ಅಥವಾ ಮೇಲ್ಮೆಯನ್ನು ಸಾಧಿಸುವುದಕ್ಕೆ ಶ್ರಮಿಸುವುದು. ಇದರಿಂದ, ರಾಷ್ಟ್ರ ನಿರಂತರವಾಗಿ ಉದ್ಯಮಶೀಲತೆಯ ಮತ್ತು ಸಾಧನೆಯ ಮಟ್ಟಗಳನ್ನು ಎತ್ತರೆತ್ತರಕ್ಕೆ ತೆಗೆದುಕೊಂಡು ಹೋಗಲು ಅನುವಾಗುತ್ತದೆ.
11. ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ನೀಡುವುದು ತಂದೆ– ತಾಯಿಗಳು ಅಥವಾ ಪೋಷಕರಾದವರ ಕರ್ತವ್ಯ. 6 ರಿಂದ 14ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವುದು ಕಡ್ಡಾಯವಾಗಿದೆ.

**ಮೂಲಭೂತ ಕರ್ತವ್ಯಗಳನ್ನು ಪಾಲಿಸೋಣ; ಸಂವಿಧಾನದ ಆಶಯವನ್ನು ಎತ್ತಿಹಿಡಿಯೋಣ**



# ಜನಪದ

ಸಂಪುಟ–59
ಸಂಚಿಕೆ–12
ಮಾರ್ಚ್ 2017

05 'ಪ್ರಗತಿಪರ ಸಮಾಜ ನಿರ್ಮಾಣವೇ ಗುರಿ'

11 ಭಾರತ ಭಾಗ್ಯ ವಿಧಾತ
• ಜಡಿಯಪ್ಪ ಗೆದ್ಲಗಟ್ಟಿ

15 9ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ
• ಡಾ॥ ಹೆಚ್. ವೀರಭದ್ರಪ್ಪ

21 ಕನ್ನಡ ಕ್ರೀಡಾಳುಗಳಲ್ಲಿ ಸ್ಫೂರ್ತಿ ತುಂಬಿದ ಕ್ರೀಡಾಹಬ್ಬ
• ಮಂಜುನಾಥ ಡಿ. ಡೊಳ್ಳಿನ

26 ಹುಬ್ಬಳ್ಳಿ ಬಾಲಕಿಗೆ ರಾಷ್ಟ್ರೀಯ ಶೌರ್ಯ ಪ್ರಶಸ್ತಿ
• ಪಿ. ಎಸ್. ಪರ್ವತಿ

28 ಮಹಿಳಾ ಸಬಲೀಕರಣ
ಸವಾಲುಗಳು ಹಾಗೂ ಪರಿಹಾರಗಳು
• ಪಾರ್ವತಿ ಪಿಟಗಿ

32 ಅನಕ್ಷರಸ್ಥ ಜಾನಪದ ಕೋಗಿಲೆ
ಸುಕ್ರಜ್ಜಿಗೊಲಿದ ಪದ್ಮಶ್ರೀ
• ಬನ್ನೂರು ಕೆ ರಾಜು

35 ಭಾರತೀಯ ಸೇನೆಯಲ್ಲಿ ಮಹಿಳೆಯರ ವಿಶಿಷ್ಟ ಸೇವೆ
• ಕೆ. ಎಸ್. ಸೋಮೇಶ್ವರ

36 ಸ್ವಚ್ಛತೆ, ಶುಚಿತ್ವಕ್ಕೆ
ವಿಜಯಪುರ ಜಿಲ್ಲಾಸ್ಪತ್ರೆಗೆ ಪ್ರಶಸ್ತಿಯ ಗರಿ
• ಗುರುರಾಜ ಬ. ಕನ್ನೂರ

41 ಶುಚಿತ್ವದಲ್ಲಿ ಶಿವಮೊಗ್ಗ ಸರ್ಕಾರಿ
ಮೆಗ್ಗಾನ್ ಆಸ್ಪತ್ರೆಗೆ 2ನೇ ಸ್ಥಾನ
• ಬಿ. ರೇಣುಕೇಶ್

42 ಯುಗಾದಿ ಮರಳಿ ಬರುತಿದೆ..
• ಗುರುರಾಜ ಪೋಶೆಟ್ಟಿಹಳ್ಳಿ

44 ವಿಶ್ವ ಜಲದಿನ ಮತ್ತು ನೀರಿನ ಮಹತ್ವ
• ಕೆ. ಎಸ್. ಶ್ರೀನಿವಾಸಯ್ಯ

46 ವಿಶ್ವ ಕ್ಷಯರೋಗ ದಿನಾಚರಣೆ – 2017
• ಡಾ॥ ಹೆಚ್. ಎಸ್. ರುದ್ರೇಶ್

48 ವಿಶ್ವ ಧೂಮಪಾನ ವಿರೋಧಿ ದಿನ
• ಡಾ॥ ಗುರುಲಿಂಗಪ್ಪ ಅಂಕದ

ಪ್ರಧಾನ ಸಂಪಾದಕರು
ಎನ್. ಆರ್. ವಿಶುಕುಮಾರ್
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಎಂ. ರವಿಕುಮಾರ್
ಜಂಟಿ ನಿರ್ದೇಶಕರು
ಬಸವರಾಜ ಕಂಬಿ
ಉಪ ನಿರ್ದೇಶಕರು

ಉಪ ಸಂಪಾದಕರು
ಸಿ. ರೂಪಾ
ಸಹಾಯಕ ನಿರ್ದೇಶಕರು

ಪ್ರಕಾಶಕರು
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in

ಮುದ್ರಕರು
ಲಾವಣ್ಯ ಮುದ್ರಣ
#19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು – 50

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

'ಜನಪದ' ಮಾಸಿಕ ಈಗ
www.kanaja.inನಲ್ಲಿ ಲಭ್ಯ

# ಓದುಗರಿಂದ...

ಜನಪ್ರತಿನಿಧಿಯೊಳಗೊಬ್ಬ ಕಾಯಕಯೋಗಿ .. ಲೇಖನ ಮಾರ್ಮಿಕವಾಗಿತ್ತು. ಎಲ್ಲರಿಗೂ ಈ ಲೇಖನ ಮಾದರಿಯಂತಿದೆ. ಜೀವನಾಧಾರವಾದ ಇಟ್ಟಿಗೆ ಬಟ್ಟಿ ಕಾಯಕವನ್ನು ಜಿ.ಪಂ ಸದಸ್ಯೆಯಾದ ನಂತರವೂ ಮುಂದುವರೆಸಿಕೊಂಡು ಹೋದ ಹಂಪಮ್ಮಳ ಸರಳತೆ ಆದರ್ಶಪ್ರಾಯವಾದುದು.

**– ಬಸವರಾಜ ಹೂಗಾರ,**
ಹಿರೇಸಿಂಗನಗುತ್ತಿ

ಫೆಬ್ರವರಿ ಸಂಚಿಕೆಯಲ್ಲಿ ಪ್ರಕಟವಾದ ಭರತನಹಳ್ಳಿಯ ಪ್ರೌಢಶಾಲೆ ಲೇಖನ ನಿಜಕ್ಕೂ ಮಾದರಿಯಾಗಿದೆ. ಈ ಹಳ್ಳಿ ಶಾಲೆ ಬೋಧನೆಗೆ ಮಾತ್ರ ಸೀಮಿತವಾಗದೆ ಮಕ್ಕಳಿಗೆ ಕೃಷಿ ಪಾಠವನ್ನು ತಿಳಿಸುತ್ತಾ ಕೃಷಿ ಚಟುವಟಿಕೆಯಲ್ಲಿಯೂ ಉತ್ತಮ ಪ್ರಗತಿ ಹೊಂದುತ್ತಿರುವುದು ಹೆಮ್ಮೆ ಎನಿಸಿತು. ಹಿಂಬದಿಯ ರಕ್ಷಾಪುಟದಲ್ಲಿ ಲಾಲಾಬಾಗ್‌ನಲ್ಲಿ ಅರಳಿದ ಗೋಲಗುಂಬಜ್ ಚಿತ್ರ ಆಕರ್ಷಣೀಯವಾಗಿದ್ದು ಮನಸೆಳೆಯಿತು.

**– ವಿ ಹೇಮಂತ್ ಕುಮಾರ್,**
ಬೆಂಗಳೂರು

ಇಂಚು ನೀರಲ್ಲಿ ಖಾರ ಹಾಗೂ ಭರತನಹಳ್ಳಿಯ ಮಾದರಿ ಪ್ರೌಢಶಾಲೆಯ ಕುರಿತಾದ ಲೇಖನಗಳು ಬಹಳ ಮೆಚ್ಚುಗೆಯಾದವು. ನಮ್ಮೂರಿನ ಗ್ರಂಥಾಲಯದಲ್ಲಿ 'ಜನಪದ' ಓದಿದೆ. ಬಹಳ ಸಂತೋಷವಾಯಿತು. ಅತ್ಯುತ್ತಮ ಲೇಖನಗಳು ಪ್ರಕಟವಾಗಿವೆ. ಈ ಪತ್ರಿಕೆಗೆ ಚಂದಾದಾರನಾಗಲು ಬಯಸುತ್ತೇನೆ. ಧನ್ಯವಾದಗಳು.

**– ಬಸವರಾಜ ಕೆ ವಾರಿ**
ಬಂಡಿಹಾಳ (ಕೊಪ್ಪಳ ಜಿಲ್ಲೆ)




## 'ಮಾತೃದೇಶದ ಪ್ರೀತಿ ಅಮೂಲ್ಯ'

ಫೆಬ್ರವರಿ ಜನಪದ ಸಂಚಿಕೆಯಲ್ಲಿ 'ಪ್ರವಾಸಿ ಭಾರತ ದಿವಸ'ದ ಲೇಖನ ಅರ್ಥಪೂರ್ಣವಾಗಿದೆ. ನಮ್ಮ ಭಾರತೀಯರು ವಿಶ್ವದೆಲ್ಲೆಡೆ ಹಂಚಿಹೋಗಿದ್ದಾರೆ. ಹೊರದೇಶದಲ್ಲಿ ಅವರು ಎಷ್ಟೆಲ್ಲಾ ಸಾಧನೆಗಳನ್ನು ಮಾಡಿದರೂ ಅವರ ಮಾತೃದೇಶದ ಮೇಲಿನ ಪ್ರೀತಿ ಅಮೂಲ್ಯವಾದದ್ದು. ಬೇರೆ ದೇಶಗಳಿಗೆ ವಲಸೆ ಹೋಗಿ ಅಲ್ಲಿ ಉನ್ನತ ಸಾಧನೆ ಮಾಡಿಯೂ ಮಾತೃದೇಶಕ್ಕಾಗಿ ಮಿಡಿಯುತ್ತಿರುವ ಅವರ ಹೃದಯಕ್ಕೆ ನಮ್ಮ ಅಭಿನಂದನೆಗಳು.

**–ಕೆ ಶ್ರೀನಿವಾಸ**
ಬಂಗಾರಪೇಟೆ

**'ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ ಡಿ.ಡಿ. ಮುಖಾಂತರವೇ ಕಳಿಸಬೇಕು. ಮನಿ ಆರ್ಡರ್ ಹಣವನ್ನು ಸ್ವೀಕರಿಸುವುದಿಲ್ಲ.**

ವಾರ್ಷಿಕ ಚಂದಾ ರೂ.25/–

ಪ್ರವಾಸಿ ಭಾರತೀಯ ದಿವಸದ ಆತಿಥ್ಯ ವಹಿಸಿದ ಕರ್ನಾಟಕ ಸರ್ಕಾರ ಅಭಿನಂದನೀಯ. ಅನಿವಾಸಿ ಭಾರತೀಯರಿಗಾಗಿ ಕರ್ನಾಟಕ ಸರ್ಕಾರ ಪ್ರಕಟಿಸಿರುವ ನೀತಿ– ನಿಯಮಗಳು ನವೋದ್ಯಮಗಳ ಸೃಷ್ಟಿಗೆ ತಳಹದಿಯಾಗಿ ಉದ್ಯೋಗ ಸೃಷ್ಟಿಗೆ ನಾಂದಿ ಹಾಡುತ್ತದೆ ಎಂದು ಆಶಿಸುತ್ತೇವೆ.
ಫೆಬ್ರವರಿ ಸಂಚಿಕೆ ಲೇಖನ ವೈವಿಧ್ಯಗಳಿಂದ ಗಮನ ಸೆಳೆಯಿತು. ಸಚಿವ ಬಸವರಾಜ ರಾಯರಡ್ಡಿಯವರು ಉನ್ನತ ಶಿಕ್ಷಣಕ್ಕೆ ಪೂರಕವಾಗಿ ಜಾರಿಗೆ ತಂದಿರುವ ಸುಧಾರಣೆಗಳು ಮೆಚ್ಚುಗೆಯಾದವು. ಬೆಳಗಾವಿಯ ಗಸ್ತು ವ್ಯವಸ್ಥೆ ವಿನೂತನವಾಗಿದೆ.

**–ಡಿ. ರಮೇಶ್**, ದಾವಣಗೆರೆ

ಬೆಳಗಾವಿಯಲ್ಲಿ ನೂತನ ರೀತಿಯ ಗಸ್ತು ವ್ಯವಸ್ಥೆ ಓದಿ ಅಚ್ಚರಿಯಾಯಿತು. ಈ ಬಗೆಯ ವ್ಯವಸ್ಥೆ ಸಮಾಜದಲ್ಲಿ ಕಳ್ಳ ಕಾಕರ ಉಪಟಳವನ್ನು ಕಡಿಮೆ ಮಾಡಿ ಪೊಲೀಸ್ ಇಲಾಖೆ ಮತ್ತಷ್ಟು ಜನಸ್ನೇಹಿಯಾಗಲು ಸಹಕಾರಿಯಾಗುತ್ತದೆ. ಇಂಥದೊಂದು ವ್ಯವಸ್ಥೆ ಜಾರಿಗೆ ತಂದ ಬೆಳಗಾವಿ ವಿಭಾಗದ ಪೊಲೀಸ್ ಅಧಿಕಾರಿಗಳು ಅಭಿನಂದನಾರ್ಹರು. ಈ ಬಗೆಯ ವ್ಯವಸ್ಥೆ ಎಲ್ಲ ಜಿಲ್ಲೆಗಳಿಗೂ ವ್ಯಾಪಿಸಲಿ.

**– ಎಸ್. ಮಂಜುನಾಥ,**
ಹೊಳೆನರಸೀಪುರ

ಜಾಂಬೂರಿ ಕುರಿತ ಲೇಖನ ಓದಿ, ನನ್ನ ಶಾಲಾದಿನಗಳು ನೆನಪಾದವು. ನಾನು ನನ್ನ ಸಹಪಾಠಿಗಳು ಶಾಲೆಯಲ್ಲಿ ಗೈಡ್ಸ್‌ಗೆ ಸೇರಿಕೊಂಡು ಅದರಲ್ಲಿನ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದೆವು. ಲೇಖನ ಓದಿ ಅವನ್ನೆಲ್ಲ ಮತ್ತೊಮ್ಮೆ ಮೆಲುಕು ಹಾಕುವಂತಾಯಿತು. 'ಜನಪದ'ದ ಎಲ್ಲ ಲೇಖನಗಳು ಆಸಕ್ತಿಯಿಂದ ಓದಿಸಿಕೊಂಡು ಹೋದವು. ಸಂಚಿಕೆ ಹೀಗೇ ಮೂಡಿ ಬರಲಿ.

**–ಕೆ.ಎನ್. ಲಕ್ಷ್ಮಿ**, ಮಾಗಡಿ






# 'ಪ್ರಗತಿಪರ ಸಮಾಜ ನಿರ್ಮಾಣವೇ ಗುರಿ'

## (ಕರ್ನಾಟಕ ವಿಧಾನ ಮಂಡಲದ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣ)

ಕರ್ನಾಟಕ ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾಪತಿಗಳೇ,
ಕರ್ನಾಟಕ ವಿಧಾನ ಸಭೆಯ ಸನ್ಮಾನ್ಯ ಸಭಾಧ್ಯಕ್ಷರೇ,
ಸನ್ಮಾನ್ಯ ಮುಖ್ಯಮಂತ್ರಿಯವರೇ,
ಸನ್ಮಾನ್ಯ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರೇ,
ಸನ್ಮಾನ್ಯ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರೇ,
ಸನ್ಮಾನ್ಯ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರೇ,
ಸನ್ಮಾನ್ಯ ಸಚಿವರೇ ಹಾಗೂ ಕರ್ನಾಟಕ ವಿಧಾನ ಮಂಡಲದ ಸನ್ಮಾನ್ಯ ಸದಸ್ಯರೇ,

- ಕರ್ನಾಟಕ ವಿಧಾನ ಮಂಡಲದ ಈ ಜಂಟಿ ಅಧಿವೇಶನಕ್ಕೆ ತಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.
- ನನ್ನ ಸರ್ಕಾರವು, ಬಡವರು, ದುರ್ಬಲ ವರ್ಗದವರು ಮತ್ತು ಅವಕಾಶ ವಂಚಿತರ ಕಲ್ಯಾಣ ಮತ್ತು ಅಭಿವೃದ್ಧಿಗೆ ಬದ್ಧವಾಗಿದೆ ಎಂಬುದು ತಮ್ಮೆಲ್ಲರಿಗೂ ತಿಳಿದ ವಿಚಾರವಾಗಿದೆ. ಕಳೆದ 4 ವರ್ಷಗಳಲ್ಲಿ ನನ್ನ ಸರ್ಕಾರವು, ಸಂಪತ್ತು, ಅವಕಾಶ ಮತ್ತು ಅಧಿಕಾರದಲ್ಲಿ ಸರ್ವರಿಗೂ ಸಮಪಾಲು ಸಿಗಬೇಕೆಂಬ ಸರ್ವೋದಯದ ಆಶಯದ ಮೇಲೆ ಅಭಿವೃದ್ಧಿಯನ್ನು ಸಾಕಾರಗೊಳಿಸುವುದಕ್ಕೆ ಅತ್ಯಂತ ಖಚಿತ, ನಿರ್ಣಾಯಕ ಮತ್ತು ಸಮರ್ಥ ಕ್ರಮಗಳನ್ನು ಕೈಗೊಂಡಿದೆ.
- ಕಾವೇರಿ ಮತ್ತು ಮಹದಾಯಿ ಜಲ ವಿವಾದಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶಗಳು ಒಡ್ಡಿರುವ ಗಂಭೀರವಾದ ಸವಾಲುಗಳನ್ನು ಎದುರಿಸಿ, ರಾಜ್ಯದ ನೆಲ, ಜಲ ಮತ್ತು ಭಾಷೆಯನ್ನು ಸಂರಕ್ಷಿಸಲು ರಾಜ್ಯದ ಜನತೆಯೊಂದಿಗೆ ಅಚಲವಾಗಿ ನಿಂತಿದೆ. ಕಾವೇರಿ, ಕೃಷ್ಣಾ ಮತ್ತು ಮಹದಾಯಿ ನದಿಗಳ ನೀರು ಹಂಚಿಕೆಯಲ್ಲಿ ಕರ್ನಾಟಕ ಜನತೆಯ ನ್ಯಾಯಬದ್ಧ ಪಾಲನ್ನು



**ಜನಪರ, ಪಾರದರ್ಶಕ ಮತ್ತು ಪರಿಣಾಮಕಾರಿ ಆಡಳಿತ ನೀಡುವುದಕ್ಕೆ ಅನುವಾಗುವಂತೆ ಭ್ರಷ್ಟಾಚಾರ ನಿಗ್ರಹ ಮತ್ತು ವಿಚಕ್ಷಣಾ ಸಿಬ್ಬಂದಿಯನ್ನು ಬಲಪಡಿಸುವ ದೃಷ್ಟಿಯಿಂದ ಒಂದು ಸ್ವಾಯತ್ತ ಭ್ರಷ್ಟಾಚಾರ ನಿಗ್ರಹದಳವನ್ನು ಸರ್ಕಾರ ಸ್ಥಾಪಿಸಿದೆ. ಅತ್ಯಂತ ಕಡಿಮೆ ಅವಧಿಯಲ್ಲಿ, ಭ್ರಷ್ಟಾಚಾರ ನಿಗ್ರಹದಳವು ಸ್ವೀಕರಿಸಿದ 3401 ಅರ್ಜಿಗಳ ಪೈಕಿ 2294 ಅರ್ಜಿಗಳನ್ನು ವಿಲೇ ಮಾಡಿದೆ. 100 ಪತ್ತೆ ಮಾಡಿದ ಪ್ರಕರಣಗಳು, 32 ದಾಳಿ ಪ್ರಕರಣಗಳು ಮತ್ತು 21 ಶೋಧನೆ ಮಾಡಿದ ಪ್ರಕರಣಗಳೂ ಸೇರಿದಂತೆ 153 ಪ್ರಕರಣಗಳನ್ನು ದಾಖಲು ಮಾಡಿಕೊಂಡಿದೆ. ಮಾನವ ಸಂಪನ್ಮೂಲ ಹಾಗೂ ಇತರೆ ಅಗತ್ಯ ಸೌಲಭ್ಯಗಳೊಂದಿಗೆ ಎಲ್ಲಾ ಜಿಲ್ಲೆಗಳಲ್ಲಿ ಭ್ರಷ್ಟಾಚಾರ ನಿಗ್ರಹದಳದ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ. ಹೆಚ್ಚುವರಿಯಾಗಿ ಎಲ್ಲಾ ಇಲಾಖೆಗಳಲ್ಲಿ ವಿಚಕ್ಷಣಾ ಕೋಶಗಳನ್ನು ಸ್ಥಾಪಿಸಿದೆ.**

ಪಡೆಯುವುದಕ್ಕೆ ಬದ್ಧವಾಗಿದೆ. ಪ್ರತಿಭಟನೆ ಸಂದರ್ಭದಲ್ಲಿ ಉಂಟಾದ ಒಂದೆರಡು ಕಾನೂನುಭಂಗ ಘಟನೆಗಳನ್ನು ಕೂಡಾ ಸಮರ್ಥವಾಗಿ ನಿರ್ವಹಿಸಿ ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದಿದೆ.

- ಪೊಲೀಸ್ ಇಲಾಖೆಯನ್ನು ಬಲಗೊಳಿಸಲು ಹಾಗೂ ಆಧುನಿಕ ರೀತಿಯಲ್ಲಿ ಸಜ್ಜುಗೊಳಿಸುವ ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಇಲಾಖೆಯ ಆಧುನೀಕರಣಕ್ಕಾಗಿ 475 ಕೋಟಿ ರೂ.ಗಳ ವೆಚ್ಚದಲ್ಲಿ 72 ಪೋಲೀಸ್ ಠಾಣೆಗಳನ್ನು, 5 ಪೋಲೀಸ್ ತರಬೇತಿ ಶಾಲೆಗಳನ್ನು, 10 ಪೋಲೀಸ್ ಔಟ್–ಪೋಸ್ಟ್‌ಗಳನ್ನು, 13 ಬ್ಯಾರಕ್‌ಗಳನ್ನು, 87 ವಸತಿಯೇತರ ಕಟ್ಟಡಗಳನ್ನು ಹಾಗೂ 72 ಇತರೆ ಕಾಮಗಾರಿಗಳನ್ನು ಪೂರ್ಣಗೊಳಿಸಿದೆ. 2015–16ನೇ ಸಾಲಿನಲ್ಲಿ, 282 ಪೊಲೀಸ್ ಸಬ್‌ಇನ್ಸ್‌ಪೆಕ್ಟರ್‌ಗಳು ಹಾಗೂ 5653 ಪೊಲೀಸ್ ಕಾನ್ಸ್‌ಟೇಬಲ್‌ಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಅಲ್ಲದೆ ಪ್ರಸಕ್ತ ಸಾಲಿನಲ್ಲಿ 8585 ಹೆಚ್ಚುವರಿ ಪೋಲೀಸ್ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಆರಂಭಿಸಿದೆ.
- ಹೈದರಾಬಾದ್ – ಕರ್ನಾಟಕ ಪ್ರದೇಶದ ಜನರ ಅಭಿವೃದ್ಧಿಗೆ ಬದ್ಧವಾಗಿದೆ. ಸಂವಿಧಾನದ ಅನುಚ್ಛೇದ 371(ಜೆ) ಅನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ತೆಗೆದುಕೊಂಡಿರುವ ಕ್ರಮಗಳು ಇದಕ್ಕೆ ಸಾಕ್ಷಿಯಾಗಿವೆ. ಪ್ರಾದೇಶಿಕ ಅಸಮತೋಲನೆಗಳ ನಿವಾರಣೆಗಾಗಿ ಡಾ. ನಂಜುಂಡಪ್ಪ ಸಮಿತಿಯು ನೀಡಿದ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ವಿಶೇಷ ಅಭಿವೃದ್ಧಿ ಯೋಜನೆ ಸಿದ್ಧಪಡಿಸಿ, ಇದಕ್ಕಾಗಿ ಪ್ರಸ್ತುತ ವರ್ಷದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಗೆ 3000 ಕೋಟಿ ರೂ.ಗಳನ್ನು ಮತ್ತು ಹೈದರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 1000 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ. ಆ ಭಾಗದ ಪ್ರಾದೇಶಿಕ ಅಸಮತೋಲನವನ್ನು ಕಡಿಮೆ ಮಾಡಲು ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕಾಗಿ ನೇಮಕಾತಿಗಳಲ್ಲಿ ಮೀಸಲಾತಿ) ಆದೇಶ, 2013ರ ಅಡಿಯಲ್ಲಿ ಇಲಾಖೆಗಳು ಮತ್ತು ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಆ ಪ್ರದೇಶದ ಸ್ಥಳೀಯ ಜನರಿಗಾಗಿ 50,301 ಹುದ್ದೆಗಳನ್ನು ಮೀಸಲಿರಿಸಲಾಗಿದೆ. ಇವುಗಳ ಪೈಕಿ, 12,326 ಹುದ್ದೆಗಳನ್ನು ಕಾರ್ಯನಿರತ ಸಿಬ್ಬಂದಿಗಳ ಮಿತಿಯಲ್ಲಿ ಭರ್ತಿ ಮಾಡಿಕೊಳ್ಳಲಾಗಿದೆ ಮತ್ತು 13,135 ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಿಕೊಳ್ಳಲಾಗಿದೆ.
- ಕರ್ನಾಟಕದಲ್ಲಿ ಕಳೆದ 6 ವರ್ಷಗಳಿಂದ ಹಿಂದೆಂದೂ ಕಾಣದ ಭೀಕರ ಬರಗಾಲದಿಂದ ರೈತರ ಬದುಕು ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ಪ್ರಸಕ್ತ ವರ್ಷದಲ್ಲಿ ಮುಂಗಾರು ಅವಧಿಯಲ್ಲಿ 139 ತಾಲ್ಲೂಕುಗಳನ್ನು ಮತ್ತು ಹಿಂಗಾರು ಅವಧಿಯಲ್ಲಿ 160 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದೆ. ನಿಗದಿತ ಸಮಯದಲ್ಲಿ ಬೆಳೆ ಸಹಾಯಧನ ವಿತರಿಸುವ ಮೂಲಕ ಬರಗಾಲವನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದೆ. ಉದ್ಯೋಗ ಸೃಷ್ಟಿ ಕಾರ್ಯಕ್ರಮಗಳನ್ನು ಹೆಚ್ಚಿಸಿದೆ. ಜಾನುವಾರುಗಳಿಗೆ ಮೇವನ್ನು ಒದಗಿಸುವುದು ಮತ್ತು ಗ್ರಾಮಗಳು ಮತ್ತು ಪಟ್ಟಣಗಳಿಗೆ ಕುಡಿಯುವ ನೀರಿನ ಪೂರೈಕೆಯನ್ನು ಖಾತ್ರಿಪಡಿಸಿಕೊಂಡಿದೆ. ಬರ ಪರಿಹಾರಕ್ಕೆ ಮತ್ತು ಬರ ಪರಿಸ್ಥಿತಿಯನ್ನು ಕಡಿಮೆ ಮಾಡುವುದಕ್ಕೆ ಹೆಚ್ಚುವರಿ ಪೂರಕ ಕ್ರಮಗಳಿಗೆ ಏಪ್ರಿಲ್ 2016 ರಿಂದ ಇಲ್ಲಿಯವರೆಗೆ 1195 ಕೋಟಿ ರೂ.ಗಳನ್ನು ಬಿಡುಗಡೆಗೊಳಿಸಿದೆ.
- ಆಲ ಸಂರಕ್ಷಣೆ ಮತ್ತು ಜಲಾನಯನ ಪ್ರದೇಶ ನಿರ್ವಹಣೆಗೆ ವಿಶೇಷವಾಗಿ ಒತ್ತು ನೀಡುವುದರ ಮೂಲಕ ಮಾತ್ರ ಕೃಷಿಯ ದೀರ್ಘಾವಧಿ ಸುಸ್ಥಿರತೆ ಸಾಧ್ಯವಾಗುವುದು. ಕೃಷಿ ಭಾಗ್ಯ ಯೋಜನೆ ಅಡಿಯಲ್ಲಿ 1 ಲಕ್ಷ ಕೃಷಿ ಹೊಂಡಗಳನ್ನು ಮತ್ತು 2450 ಶೆಡ್‌ನೆಟ್‌ಗಳು/ಪಾಲಿಗೃಹಗಳನ್ನು ನಿರ್ಮಿಸಿದೆ. ಪ್ರಕೃತಿ ವಿಕೋಪದಿಂದ ರೈತರಿಗೆ ಆಗುವ ತೊಂದರೆಗಳನ್ನು ಎದುರಿಸಲು ಬೆಳೆ ವಿಮೆ ನೆರವಾಗುತ್ತಿದೆ. ಮುಂಗಾರು ಅವಧಿಯಲ್ಲಿ ಬೆಳೆವಿಮೆ ಯೋಜನೆ ಅಡಿಯಲ್ಲಿ 10.5 ಲಕ್ಷ ರೈತರನ್ನು ಆ ಪೆಟ್ಟಿಗೆ ಸೇರಿಸಿದೆ. ಈ ಉದ್ದೇಶಕ್ಕಾಗಿ 675 ಕೋಟಿ ರೂ.ಗಳನ್ನು ಮೀಸಲಿರಿಸಿದೆ. ದೇಶದಲ್ಲಿ ಮೊದಲ ಬಾರಿಗೆ ಕ್ಲೇಮುಗಳನ್ನು ನಿಗದಿತ ಸಮಯದಲ್ಲಿ ಇತ್ಯರ್ಥಗೊಳಿಸುವುದಕ್ಕಾಗಿ ಬೆಳೆ ಕಟಾವಿನ ಪ್ರಯೋಗಗಳನ್ನು ನಡೆಸಲು ಒಂದು ಹೊಸ ವಿಧಾನದ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ.
- ನಿರಂತರ ಬರಗಾಲದಿಂದ ತತ್ತರಿಸಿರುವುದರಿಂದ, 2.25 ಲಕ್ಷ ರೈತರಿಗೆ ಅವರು ಪಡೆದ ಕೃಷಿ ಸಾಲದ ಅಸಲು ಮೊತ್ತವನ್ನು 31.03.2017ಕ್ಕಿಂತ ಮುಂಚೆ ಪಾವತಿಸಿದ್ದಲ್ಲಿ, ಬಾಕಿ ಇರುವ ಬಡ್ಡಿಯನ್ನು ಮನ್ನಾ ಮಾಡಿದೆ. ಕೃಷಿ ಉತ್ಪನ್ನಗಳ ಮೇಲಿನ ಬೆಲೆ ಕುಸಿತದಿಂದ ರೈತರನ್ನು ಕಾಪಾಡಲು ಮಾರುಕಟ್ಟೆ ಮಧ್ಯಪ್ರವೇಶವನ್ನು ಮಾಡಲಾಗಿದೆ. ಅದರಲ್ಲಿ 65.43 ಕೋಟಿ ರೂ.ಗಳ ವೆಚ್ಚದಲ್ಲಿ ಕನಿಷ್ಟ ಬೆಂಬಲ ಬೆಲೆಯಲ್ಲಿ ಈರುಳ್ಳಿ ಸಂಗ್ರಹಣೆ, 155 ಕೋಟಿ ರೂ.ಗಳ ವೆಚ್ಚದಲ್ಲಿ ತೆಂಗು ಬೆಳೆಗಾರರಿಗೆ ಕನಿಷ್ಠ ಬೆಂಬಲ ಬೆಲೆ, ಕನಿಷ್ಠ ಬೆಂಬಲ ಬೆಲೆಯ ಮೇಲೆ ಪ್ರತಿ ಕ್ವಿಂಟಾಲ್ ತೊಗರಿಬೇಳೆಗೆ 450 ರೂ.ಗಳ ಬೋನಸ್ ಮತ್ತು ಪ್ರತಿ ಕ್ವಿಂಟಾಲ್ ಭತ್ತಕ್ಕೆ ಕನಿಷ್ಟ ಬೆಂಬಲ ಬೆಲೆಯ ಮೇಲೆ 100 ರೂ. ಬೋನಸ್‌ನೊಂದಿಗೆ ಸಂಗ್ರಹಣೆ ಮಾಡುವುದು ಸೇರಿದೆ.



- ತೋಟಗಾರಿಕೆಯು ಮತ್ತೊಂದು ಆದ್ಯತೆಯ ಕ್ಷೇತ್ರವಾಗಿದೆ. 57 ರೈತ ಉತ್ಪನ್ನಗಳ ಸಂಸ್ಥೆಗಳು ಕಂಪನಿಗಳಾಗಿ ನೋಂದಾಯಿಸಿದೆ. ಪ್ರತಿಯೊಂದು ಕಂಪನಿಗೆ ಕಾರ್ಯೋಪಯುಕ್ತ ಬಂಡವಾಳವಾಗಿ ಗರಿಷ್ಟ 25 ಲಕ್ಷ ರೂ.ಗಳನ್ನು ಮತ್ತು ಮೂಲಭೂತ ಸೌಕರ್ಯವನ್ನು ಒದಗಿಸುವುದಕ್ಕೆ ಗರಿಷ್ಟ 1 ಕೋಟಿ ರೂ.ಗಳ ಸಹಾಯಧನ ಒದಗಿಸಲಾಗಿದೆ.. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಯೋಜನೆಯನ್ನು ಬಳಸಿಕೊಳ್ಳುವ ಮೂಲಕ 7436 ಹೆಕ್ಟೇರ್‌ಗಳಷ್ಟು ಪ್ರದೇಶವನ್ನು ತೋಟಗಾರಿಕಾ ಪ್ರದೇಶವಾಗಿ ವಿಸ್ತರಿಸಲಾಗಿದೆ.
- ಪಶುಸಂಗೋಪನೆ ಮತ್ತು ಮೀನುಗಾರಿಕೆ ಕ್ಷೇತ್ರಗಳು ರೈತರ ಆದಾಯಕ್ಕೆ ಮತ್ತು ರಾಜ್ಯದ ಆರ್ಥಿಕತೆಗೆ ಮಹತ್ವದ ಕೊಡುಗೆ ನೀಡಿವೆ. ಪ್ರಮುಖವಾದ ಸಾಂಕ್ರಾಮಿಕ ರೋಗಗಳು ಹಠಾತ್ ಆಗಿ ಹರಡುವುದನ್ನು ತಡೆಯಲು ಪ್ರಸಕ್ತ ಸಾಲಿನಲ್ಲಿ 645 ಲಕ್ಷ ಔಷಧ ಲಸಿಕೆಗಳನ್ನು ಹಾಕಲಾಗಿದೆ. 3.62 ಲಕ್ಷ ಕುಟುಂಬಗಳು ವಿಮಾ ಕಂತಿನ ಮೇಲೆ ಶೇಕಡಾ 70ರಷ್ಟು ಸಹಾಯ ಧನದೊಂದಿಗೆ ಪಶು ವಿಮಾ ಕಂತಿನ ಮೇಲೆ ಶೇಕಡಾ 70ರಷ್ಟು ಸಹಾಯ ಧನದೊಂದಿಗೆ ಪಶು ವಿಮಾ ಸೌಲಭ್ಯಗಳನ್ನು ಪಡೆದಿವೆ. 200ಕ್ಕೂ ಹೆಚ್ಚಿನ ಕುರಿಗಾಹಿ ಸಹಕಾರ ಸಂಘಗಳಿಗೆ ತಲಾ 5 ಲಕ್ಷ ರೂ.ಗಳ ನೆರವನ್ನು ಒದಗಿಸಲಾಗಿದೆ. ಅನಿರೀಕ್ಷಿತವಾಗಿ ಸಾವಿಗೀಡಾದ ಕುರಿ ಮತ್ತು ಮೇಕೆಗಳ ಮಾಲೀಕರಿಗೆ 10 ಕೋಟಿ ರೂ.ಗಳನ್ನು ಪರಿಹಾರದ ರೂಪದಲ್ಲಿ ವಿತರಿಸಲಾಗಿದೆ. 8.61 ಲಕ್ಷ ಹಾಲು ಉತ್ಪಾದಕರಿಗೆ ಪ್ರಯೋಜನವಾಗಲು ಪ್ರಸಕ್ತ ಸಾಲಿನಲ್ಲಿ ಪ್ರತಿ ಲೀಟರ್‌ಗೆ 4 ರೂ.ಗಳಿಂದ 5 ರೂ.ಗಳವರೆಗೆ ಹಾಲಿನ ಸಹಾಯಧನವನ್ನು ಹೆಚ್ಚಿಸಲಾಗಿದೆ.
- ರಾಜ್ಯದಲ್ಲಿ ಅದರಲ್ಲೂ ನಿರ್ದಿಷ್ಟವಾಗಿ ಕೃಷ್ಣಾ ಮೇಲ್ದಂಡೆ ಜಲಾನಯನ ಪ್ರದೇಶದಲ್ಲಿ ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ 5 ವರ್ಷಗಳಲ್ಲಿ ನೀರಾವರಿಗಾಗಿ 50,000 ಕೋಟಿ ರೂ.ಗಳನ್ನು ವಿನಿಯೋಗಿಸುವ ಭರವಸೆ ನೀಡಿತ್ತು. ಕಳೆದ 4 ವರ್ಷಗಳಲ್ಲಿ, ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ 42,540 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಎತ್ತಿನಹೊಳೆ ಮತ್ತು ಭದ್ರಾ ಮೇಲ್ದಂಡೆ ಯೋಜನೆಗಳ ಅನುಷ್ಠಾನಕ್ಕಾಗಿ "ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ" ಎಂಬ ಹೊಸ ನಿಗಮವನ್ನು ಸ್ಥಾಪಿಸಲಾಗಿದೆ. ಕೇಂದ್ರ ಜಲ ಆಯೋಗವು ಆಲಮಟ್ಟಿ ಮತ್ತು ನಾರಾಯಣಪುರ ಅಣೆಕಟ್ಟುಗಳ ಪುನಃಶ್ಚೇತನ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗಾಗಿ ರಾಜ್ಯಕ್ಕೆ "ಅತ್ಯುತ್ತಮ ನಿರ್ವಹಣೆಯ ಗೌರವ ಪ್ರಶಸ್ತಿ"ಯನ್ನು ಪ್ರದಾನ ಮಾಡಿದೆ.
- ಸುಮಾರು 8 ಕೋಟಿ ಸಸಿಗಳನ್ನು ನೆಡುವುದರ ಜೊತೆಗೆ, ಸೂಕ್ಷ್ಮ ಅರಣ್ಯ ಪ್ರದೇಶಗಳಲ್ಲಿ ಮತ್ತು ಆ ಪ್ರದೇಶಕ್ಕೆ ಹತ್ತಿರದಲ್ಲಿ ವಾಸ ಮಾಡುವ ಕುಟುಂಬಗಳಿಗೆ ಅನುಕೂಲವಾಗುವಂತೆ



ಉಚಿತ ಎಲ್‌ಪಿಜಿ ಸಂಪರ್ಕಗಳನ್ನು ಕಲ್ಪಿಸಿದೆ. ವನ್ಯಜೀವಿಗಳಿಂದ ಬೆಳೆಗಳಿಗೆ ಉಂಟಾಗಿರುವ ಹಾನಿಗಾಗಿ ಮತ್ತು ಜನರಿಗೆ ಉಂಟಾಗಿರುವ ಶಾಶ್ವತವಾದ ಮತ್ತು ಭಾಗಶಃ ಅಂಗವಿಕಲತೆಗಾಗಿ ನೀಡುವ ನಷ್ಟ ಪರಿಹಾರದ ಪ್ರಮಾಣವನ್ನು ದುಪ್ಪಟ್ಟುಗೊಳಿಸಿದೆ. ಬೆಂಗಳೂರಿನ ಮಡಿವಾಳ, ಹೆಣ್ಣೂರು ಮತ್ತು ಪುಟ್ಟೇನಹಳ್ಳಿ ಕೆರೆಗಳ ಸಮಗ್ರವಾದ ಅಭಿವೃದ್ಧಿಯನ್ನು ಕೈಗೊಳ್ಳಲಾಗಿದೆ.

- ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ನಿರಂತರವಾಗಿ ಶ್ರಮಿಸುತ್ತಿದೆ. ಪ್ರಸಕ್ತ ಸಾಲಿನಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಕಾರ್ಯಕ್ರಮಗಳಿಗೆ 19,543 ಕೋಟಿ ರೂ.ಗಳನ್ನು ಒದಗಿಸಿದ್ದೇವೆ. ಡಾ. ಬಿ.ಆರ್. ಅಂಬೇಡ್ಕರ್‌ರವರ 125ನೇ ಜನ್ಮ ದಿನಾಚರಣೆಯ ಅಂಗವಾಗಿ, 125 ಹೊಸ ವಸತಿ ಶಾಲೆಗಳು ಹಾಗೂ 100 ಹೊಸ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ಸಹ ಮಂಜೂರು ಮಾಡಿದೆ. ಡಾ.ಬಿ.ಆರ್. ಅಂಬೇಡ್ಕರ್‌ರವರ 125ನೇ ಜನ್ಮ ದಿನಾಚರಣೆಯನ್ನು ಜಾಗತಿಕ ಸಮ್ಮೇಳನದೊಂದಿಗೆ "ಜ್ಞಾನ ದರ್ಶನ ದಿನ"ವನ್ನಾಗಿ ಆಚರಿಸಲು ಉದ್ದೇಶಿಸಿದೆ.
- ಹೊಸದಾಗಿ ರಚಿಸಿದ ಭೋವಿ ಮತ್ತು ತಾಂಡಾ ಅಭಿವೃದ್ಧಿ ನಿಗಮಗಳೂ ಸೇರಿದಂತೆ, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ರಚಿಸಿರುವ ಅಭಿವೃದ್ಧಿ ನಿಗಮಗಳ ಮೂಲಕ 30,000 ಫಲಾನುಭವಿಗಳಿಗೆ ನೆರವನ್ನು ನೀಡುವುದಕ್ಕಾಗಿ 1475 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಡಾ.ಬಿ.ಆರ್. ಅಂಬೇಡ್ಕರ್ ಆವಾಸ್ ಯೋಜನೆ ಅಡಿಯಲ್ಲಿ ವಸತಿ ರಹಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳಿಗೆ 2.5 ಲಕ್ಷ ಮನೆಗಳನ್ನು ನಿರ್ಮಿಸಲಾಗಿದೆ.
- ಹಿಂದುಳಿದ ವರ್ಗಗಳಿಂದ ಬಂದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವುದಕ್ಕಾಗಿ, 12 ಲಕ್ಷ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು ಮತ್ತು 4.5 ಲಕ್ಷ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ನೀಡಲಾಗಿದೆ.
- 13 ಲಕ್ಷ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು, 10,000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ

ವಸತಿನಿಲಯಗಳನ್ನು, 4 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮತ್ತು 8 ಮೊರಾರ್ಜಿ ದೇಸಾಯಿ ಪದವಿಪೂರ್ವ ಕಾಲೇಜುಗಳನ್ನು ಮಂಜೂರು ಮಾಡಿದೆ. ಬೆಂಗಳೂರಿನಲ್ಲಿ ನೂತನ ಹಜ್‌ಭವನವನ್ನು ಪ್ರಾರಂಭಿಸಿದೆ.

- "ಪ್ರತಿಯೊಂದು ಮಗುವು ಶಾಲೆಗೆ ಹೋಗಬೇಕು ಹಾಗೂ ಚೆನ್ನಾಗಿ ಕಲಿಯಬೇಕು" ಎಂಬ ಧ್ಯೇಯ ಹೊಂದಿದ್ದು, ರಾಜ್ಯ ನೀತಿ ನಿರ್ದೇಶಕ ತತ್ವಗಳ ಅಡಿಯಲ್ಲಿ ಶಿಕ್ಷಣವು ಸಂವಿಧಾನ ನಮಗೆ ನೀಡಿದ ಹಕ್ಕು ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡುವ ನಿಟ್ಟಿನಲ್ಲಿ ಶ್ರಮಿಸುತ್ತಿದೆ. ಇದರ ಫಲಶೃತಿಗಾಗಿ, 62.59 ಲಕ್ಷ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳನ್ನು, 47.45 ಲಕ್ಷ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರಗಳನ್ನು, 8ನೇ ತರಗತಿಯ 4.92 ಲಕ್ಷ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್‌ಗಳನ್ನು ನೀಡಿದೆ ಹಾಗೂ ಪ್ರಸಕ್ತ ಸಾಲಿನಲ್ಲಿ ಹಾಲಿನೊಂದಿಗೆ ಮಧ್ಯಾಹ್ನದ ಬಿಸಿಯೂಟದ ಜೊತೆಗೆ ಪುಷ್ಟಿದಾಯಕ ಅನ್ನವನ್ನು ಪೂರೈಸುತ್ತಿದೆ. 2 ಜಿಲ್ಲೆಗಳಲ್ಲಿ "ವಿದ್ಯಾರ್ಥಿಗಳ ಉತ್ತೇಜಕ ಕಾರ್ಯಕ್ರಮ", 12 ಜಿಲ್ಲೆಗಳಲ್ಲಿ "ಗಣಿತ ಕಲಿಕಾ ಕಾರ್ಯಕ್ರಮ", ಬೋಧನಾ ಕಲಿಕಾ ಕಾರ್ಯಕ್ರಮ", 3 ಜಿಲ್ಲೆಗಳಲ್ಲಿ ಸಾಕ್ಷರತೆ ಹಾಗೂ ಗಣಿತದ ಮೂಲ ಸೂತ್ರಗಳಿಗಾಗಿ ಪೂರಕ ಬೋಧನೆಯ ಕಾರ್ಯಕ್ರಮಗಳಿಗೂ ಸಹ ಒಳಗೊಂಡಿವೆ. ಈ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಹೆಸರಾಂತ ನಾಗರಿಕ ಸಮಾಜ ಸಂಸ್ಥೆಗಳು ಸಹಭಾಗಿತ್ವ ನೀಡಿವೆ. "ಶಿಕ್ಷಣ ಕಿರಣ" ಎಂಬ ಪತ್ತೆ ವ್ಯವಸ್ಥೆಯ ಮೂಲಕ ಕಡಿಮೆ ಕಲಿಕಾ ಸಾಮರ್ಥ್ಯದ ವಿದ್ಯಾರ್ಥಿಗಳನ್ನು ಗುರುತಿಸಲಾಗುತ್ತಿದೆ.
- ಕಳೆದ 3 ವರ್ಷಗಳ ಅವಧಿಯಲ್ಲಿ, ಬಡಕುಟುಂಬಗಳಿಂದ ಬಂದಿರುವ 4.5 ಲಕ್ಷ ಮಕ್ಕಳನ್ನು 'ಶಿಕ್ಷಣದ ಹಕ್ಕು ಅಧಿನಿಯಮ'ದ ಅಡಿಯಲ್ಲಿ ಖಾಸಗಿ ಅನುದಾನರಹಿತ ಶಾಲೆಗಳಿಗೆ ಸೇರಿಸಲಾಗಿದೆ ಮತ್ತು ಸರ್ಕಾರವು ಇವರ ಶಿಕ್ಷಣಕ್ಕಾಗಿ ಶುಲ್ಕವನ್ನು ಭರಿಸಿದೆ.
- ಕರ್ನಾಟಕ ರಾಜ್ಯವು, ಉನ್ನತ ಶಿಕ್ಷಣ ನೀಡಿಕೆಯಲ್ಲಿ ಶೇಕಡಾ 26.6 ರಷ್ಟು ಒಟ್ಟು ದಾಖಲಾತಿ ಪ್ರಮಾಣ ಹೊಂದಿದ್ದು, ಅತೀ ಹೆಚ್ಚಿನ ಸಾಧನೆ ಮಾಡಿರುವ ರಾಜ್ಯಗಳಲ್ಲಿ ಒಂದಾಗಿದೆ. ಪ್ರಸಕ್ತ ಸಾಲಿನಲ್ಲಿ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಕಲಿಕಾ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಲು ಪ್ರೋತ್ಸಾಹದಾಯಕ ಕ್ರಮಗಳಿಂದಾಗಿ 71 ಕಾಲೇಜುಗಳು ಓಂಂಅ ಮನ್ನಣೆಗೆ ಪಾತ್ರವಾಗಿವೆ. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ ಸಹಯೋಗದೊಂದಿಗೆ ಬೆಂಗಳೂರಿನಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ್ನು ಪ್ರಾರಂಭಿಸುವುದಕ್ಕಾಗಿ ಸಕ್ರಿಯಾತ್ಮಕ ಕ್ರಮಗಳನ್ನು ಕೈಗೊಂಡಿರುತ್ತದೆ. ಶಿಕ್ಷಕರಿಗೆ ಜಾಗತಿಕ ಮಾನದಂಡಗಳಿಗನುಸಾರವಾಗಿ ತರಬೇತಿಯನ್ನು ನೀಡುವುದಕ್ಕಾಗಿ ಮೂಲಭೂತ ಸೌಕರ್ಯದೊಂದಿಗೆ ಉನ್ನತ ಶಿಕ್ಷಣ ಅಕಾಡೆಮಿಯನ್ನು ಬಲಪಡಿಸಿದೆ.
- ಆತ್ಮಹತ್ಯೆ ಮಾಡಿಕೊಂಡ ರೈತರನ್ನು ಅವಲಂಬಿಸಿರುವ ಕುಟುಂಬದ ಸದಸ್ಯರಿಗೆ ನೆರವು ನೀಡುವುದಕ್ಕಾಗಿ ಸುವರ್ಣ ಆರೋಗ್ಯ ಟ್ರಸ್ಟ್ ಅಡಿ "ಇಂದಿರಾ ಸುರಕ್ಷಾ" ಯೋಜನೆಯನ್ನು ಪ್ರಾರಂಭಿಸಿದೆ. ಸಕಾಲದಲ್ಲಿ ಗಾಯಾಳುಗಳಿಗೆ ಸಹಾಯ ಮಾಡುವಂಥವರಿಗೆ ಯಾವುದೇ ರೀತಿಯಲ್ಲಿ ಕಿರುಕುಳ ನೀಡಬಾರದು ಎನ್ನುವುದನ್ನು ಖಚಿತಪಡಿಸುವುದಕ್ಕೆ ಸಂಬಂಧಿಸಿದಂತೆ "ಉತ್ತಮ ಪರೋಪಕಾರಿ ಅಧಿನಿಯಮ"ವನ್ನು ಜಾರಿಗೊಳಿಸಲಾಗಿದೆ.

**ಮಹಿಳಾ ಮತ್ತು ಮಕ್ಕಳ ಕಲ್ಯಾಣವು ಪ್ರಮುಖ ಆದ್ಯತೆಯಾಗಿದೆ. ಮಗುವಿನ ಬಾಲ್ಯ ಪೂರ್ವದ ಪಾಲನೆ ಮಾಡಲು ಮತ್ತು ಮಗುವಿಗೆ ಶಿಕ್ಷಣವನ್ನು ನೀಡಲು ಪ್ರಸಕ್ತ ಸಾಲಿನಲ್ಲಿ 1400 ಹೊಸ ಅಂಗನವಾಡಿಗಳನ್ನು ಪ್ರಾರಂಭಿಸಿದೆ. ಇದರಿಂದ ರಾಜ್ಯದ ಅಂಗನವಾಡಿಗಳ ಸಂಖ್ಯೆ 66,000 ಕ್ಕೆ ಏರಿದೆ. ಪ್ರಸಕ್ತ ಸಾಲಿನಲ್ಲಿ 11,500 ಅಂಗನವಾಡಿ ಶೌಚಾಲಯಗಳ ನಿರ್ಮಾಣಕ್ಕೆ ವಿಶೇಷ ಕ್ರಮ ಕೈಗೊಳ್ಳಲಾಗಿದೆ. "ಕ್ಷೀರ ಭಾಗ್ಯ" ಯೋಜನೆ ಅಡಿಯಲ್ಲಿ 6 ತಿಂಗಳಿಂದ 6 ವರ್ಷಗಳ ನಡುವಿನ 38 ಲಕ್ಷಕ್ಕಿಂತಲೂ ಹೆಚ್ಚು ಮಕ್ಕಳಿಗೆ ಒಂದು ವಾರದಲ್ಲಿ 3 ಸಲ 150 ಮಿಲಿ ಲೀಟರ್ ಕೆನೆಭರಿತ ಹಾಲನ್ನು ನೀಡಲಾಗುತ್ತಿದೆ. ಅಪೌಷ್ಟಿಕತೆಯನ್ನು ಹೋಗಲಾಡಿಸಲು, ವರ್ಷದಲ್ಲಿ 300 ದಿನಗಳ ಕಾಲ ಬಡ ಗರ್ಭಿಣಿ ಮಹಿಳೆಯರು ಮತ್ತು ಬಾಣಂತಿಯರಿಗೆ ಸಿದ್ಧಪಡಿಸಿದ ಬಿಸಿಯೂಟ ನೀಡುವುದಕ್ಕೆ "ಮಾತೃಪೂರ್ಣ" ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಿದೆ.**

- ಕಲಬುರ್ಗಿ, ಗದಗ, ಕೊಪ್ಪಳ, ಕಾರವಾರ, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ನೂತನ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಿರುವುದರ ಪರಿಣಾಮವಾಗಿ, ರಾಜ್ಯದಲ್ಲಿ ಹೆಚ್ಚುವರಿ 900 ಎಂಬಿಬಿಎಸ್ ಸೀಟುಗಳು ಸೃಜನೆಯಾಗಿವೆ. ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿ 4 ಹೊಸ ಶಸ್ತ್ರಚಿಕಿತ್ಸಾ ವಿಭಾಗಗಳನ್ನು ಮತ್ತು 198 ಹೆಚ್ಚುವರಿ ಹಾಸಿಗೆಗಳ ಸೌಲಭ್ಯದ ವಿಭಾಗಗಳನ್ನು ಪ್ರಾರಂಭಿಸಿದೆ.
- ಕಳೆದ 3 ವರ್ಷಗಳಲ್ಲಿ, ಸರ್ಕಾರಿ ಬೋಧನೆ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಹೆಚ್ಚುವರಿ 2708 ಹಾಸಿಗೆಗಳ ಸೌಲಭ್ಯವನ್ನು ಒದಗಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಮೈಸೂರಿನಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ಘಟಕವನ್ನು ಕಾರ್ಯಾರಂಭ ಮಾಡಲಾಗುವುದು.
- ಪಹಣಿಯಂತಹ ಪ್ರಮುಖ ಭೂದಾಖಲೆ, ನಿರಾಕ್ಷೇಪಣ ಪತ್ರಗಳು, ಪರವಾನಗಿ ಮತ್ತು ತೆರಿಗೆ ನಿರ್ಧರಣ ಪಟ್ಟಿಗಳು ಇತ್ಯಾದಿ 100 ಬಗೆಯ ಸೇವೆಗಳನ್ನು ಒದಗಿಸುವ ಬಾಪೂಜಿ ಸೇವಾ ಕೇಂದ್ರಗಳನ್ನು ಗ್ರಾಮ ಪಂಚಾಯತ್ ಕಛೇರಿಯಲ್ಲಿಯೇ ಸ್ಥಾಪಿಸಿ ಜನಸ್ನೇಹಿ ಆಡಳಿತಕ್ಕೆ ಕರೆ ನೀಡಿದೆ.
- ಶುದ್ಧ ಕುಡಿಯುವ ನೀರನ್ನು ಒದಗಿಸಲು 2016ರ ಅಂತ್ಯದಲ್ಲಿ ಸುಮಾರು 8500 ಶುದ್ಧ ಕುಡಿಯುವ ನೀರಿನ ಘಟಕಗಳು ಕಾರ್ಯಾರಂಭಿಸಿವೆ. ತನ್ಮೂಲಕ ರಾಜ್ಯದ 1 ಕೋಟಿಗೂ ಹೆಚ್ಚು ಗ್ರಾಮೀಣ ಜನತೆಗೆ ಕುಡಿಯುವ ನೀರನ್ನು ಲಭ್ಯಗೊಳಿಸಿದ ಸಾಧನೆ ನಮ್ಮದಾಗಿದೆ. ಮಾರ್ಚ್ 2017ರವರೆಗೆ ಇನ್ನೂ 1000 ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆ ಮಾಡಲಾಗುವುದು.
- ವೈಯಕ್ತಿಕ ಶೌಚಾಲಯಗಳ ನಿರ್ಮಾಣ ಕಾರ್ಯದಲ್ಲಿ ಬಹುದೊಡ್ಡ ಕ್ರಾಂತಿಕಾರಕ ಬದಲಾವಣೆಯನ್ನು ನನ್ನ ಸರ್ಕಾರವು ಸಾಧಿಸಿದೆ. 2016ರ ಅಂತ್ಯಕ್ಕೆ ಈ ಸರ್ಕಾರದ ಅವಧಿಯಲ್ಲಿ ಒಟ್ಟು 26 ಲಕ್ಷಕ್ಕೂ ಹೆಚ್ಚು ಶೌಚಾಲಯಗಳನ್ನು ನಿರ್ಮಿಸಿದೆ. ರಾಜ್ಯದ 1035 ಗ್ರಾಮ ಪಂಚಾಯತಿಗಳು, 4954 ಗ್ರಾಮಗಳು, 26 ತಾಲ್ಲೂಕುಗಳು ಹಾಗೂ 5 ಜಿಲ್ಲೆಗಳನ್ನು ಸಂಪೂರ್ಣ ಬಯಲು ಬಹಿರ್ದೆಸೆ ಮುಕ್ತ



ಎಂದು ಘೋಷಿಸಲಾಗಿದೆ. ಪ್ರಸ್ತುತ ಹಣಕಾಸು ವರ್ಷದ ಅಂತ್ಯದ ವೇಳೆಗೆ ಇನ್ನೂ 2 ಜಿಲ್ಲೆಗಳನ್ನು 20 ತಾಲ್ಲೂಕುಗಳನ್ನು 500 ಗ್ರಾಮ ಪಂಚಾಯತಿಗಳನ್ನು ಮತ್ತು 3000 ಗ್ರಾಮಗಳನ್ನು ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಲಾಗುವುದು.

- ಗ್ರಾಮೀಣ ಉದ್ಯೋಗ ಸೃಜನೆ ಮಾಡುವಲ್ಲಿ ದಾಪುಗಾಲು ಹಾಕಿದೆ. ಪ್ರಸ್ತುತ ವರ್ಷದ ಗುರಿಯನ್ನು 6 ಕೋಟಿಯಿಂದ 10 ಕೋಟಿ ಮಾನವ ದಿನಗಳಿಗೆ ಹೆಚ್ಚಿಸಲು ಕೇಂದ್ರ ಸರ್ಕಾರದ ಅನುಮೋದನೆ ಪಡೆದುಕೊಂಡಿದೆ. ಕೇಂದ್ರ ಸರ್ಕಾರದಿಂದ ಮಹಾತ್ಮಾಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಹಣ ಬಿಡುಗಡೆ ವಿಳಂಬಗೊಳ್ಳುತ್ತಿರುವುದರಿಂದ ಪ್ರಸ್ತುತ ಸಾಲಿನಲ್ಲಿ 900 ಕೋಟಿ ರೂ.ಗಳನ್ನು ಮಜೂರಿ ಪಾವತಿಗೆ ರಾಜ್ಯ ಸರ್ಕಾರದ ಖಜಾನೆಯಿಂದ ಬಿಡುಗಡೆ ಮಾಡಿದೆ.
- ಶೇ.50ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಯನ್ನು ಹೊಂದಿರುವ ಗ್ರಾಮಗಳ ಪೈಕಿ 150 ಗ್ರಾಮಗಳಲ್ಲಿ "ಮುಖ್ಯಮಂತ್ರಿ ಮಾದರಿ ಗ್ರಾಮ ಯೋಜನೆ" ಅಡಿ ಸಮಗ್ರವಾಗಿ ಅಭಿವೃದ್ಧಿಪಡಿಸುವ ಯೋಜನೆಯನ್ನು ಅನುಷ್ಠಾನಗೊಳಿಸುತ್ತದೆ.
- ಸರ್ಕಾರ ಕರ್ನಾಟಕವನ್ನು "ಹಸಿವು ಮುಕ್ತ" ರಾಜ್ಯವನ್ನಾಗಿ ಮಾಡುವುದಕ್ಕೆ ಶ್ರಮಿಸುತ್ತಿದೆ. "ಅನ್ನಭಾಗ್ಯ" ಯೋಜನೆಯ 1 ಕೋಟಿಗೂ ಹೆಚ್ಚಿ ಆದ್ಯತಾ ಕುಟುಂಬಗಳನ್ನು ಗುರುತಿಸಿದ್ದು, ಇದು ನಮ್ಮ ಸರ್ಕಾರದ ಗರಿಮೆಯನ್ನು ಹೆಚ್ಚಿಸಿದೆ. ಪ್ರಸಕ್ತ ಸಾಲಿನಲ್ಲಿ, ಕಬ್ಬಿಣಾಂಶಯುಕ್ತ ಉಪ್ಪು ಹಾಗೂ ವಿಟಮಿನ್ ಎ ಮತ್ತು ಡಿ ಯುಕ್ತ ತಾಳೆ ಎಣ್ಣೆಯನ್ನು ನೀಡಲಾಗುತ್ತಿದೆ. ಫೆಬ್ರವರಿ 2017 ರಿಂದ ಪ್ರಾರಂಭಿಸಿ ಎಲ್ಲಾ ಆದ್ಯತಾ ಮತ್ತು ಅಂತ್ಯೋದಯ ಕುಟುಂಬಗಳಿಗೆ ಅರ್ಧ ಬೆಲೆಯಲ್ಲಿ ತಿಂಗಳಿಗೆ 1 ಕೆ.ಜಿ. ದ್ವಿದಳ ಧಾನ್ಯವನ್ನು ಹೆಚ್ಚುವರಿಯಾಗಿ ನೀಡಲಾಗುತ್ತಿದೆ. ಹೊಸ ಪಡಿತರ ಚೀಟಿಗಳ ವಿತರಣೆಯನ್ನು 7 ಕೆಲಸದ ದಿನಗಳ ಕಾಲಮಿತಿಯನ್ನು ಮಂಜೂರು ಮಾಡುವ ಗಡುವಿನೊಂದಿಗೆ ಇದನ್ನು "ಸಕಾಲ"ದಡಿ ತರಲಾಗಿದೆ.
- ಕರ್ನಾಟಕವನ್ನು "ಗುಡಿಸಲು ಮುಕ್ತ ರಾಜ್ಯ"ವನ್ನಾಗಿ ಮಾಡುವುದು ನನ್ನ ಸರ್ಕಾರದ ಪ್ರಮುಖ ಗುರಿಯಾಗಿದೆ. ಪ್ರತಿ ವರ್ಷ 3 ಲಕ್ಷ ಮನೆಗಳನ್ನು ನಿರ್ಮಾಣ ಮಾಡುವ ಗುರಿಯಂತೆ ಪ್ರಸಕ್ತ ಸಾಲಿನಲ್ಲಿ 1.93 ಲಕ್ಷ ಮನೆಗಳೊಂದಿಗೆ 2013–14 ರಿಂದ 10.42 ಲಕ್ಷ ಮನೆಗಳನ್ನು ನಿರ್ಮಾಣ ಮಾಡುವ ಗುರಿಯನ್ನು ಹೊಂದಿದೆ. ಫಲಾನುಭವಿಗಳ ಆಯ್ಕೆಯು ಪ್ರಗತಿಯಲ್ಲಿದೆ. ನಗರ ಪ್ರದೇಶಗಳಲ್ಲಿ 893 ಕೋಟಿ ರೂ.ಗಳ ವೆಚ್ಚದಲ್ಲಿ 98 ಕೊಳಚೆ ಪ್ರದೇಶಗಳಲ್ಲಿ ಮೂಲ ಸೌಕರ್ಯ ಸೌಲಭ್ಯಗಳೊಂದಿಗೆ 16,522 ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ.



- ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ 2000 ಮೆಗಾವ್ಯಾಟ್ ಸೋಲಾರ್ ಪಾರ್ಕ್ ಅನ್ನು ಸ್ಥಾಪಿಸುವ ಕಾರ್ಯ ತೀವ್ರ ಪ್ರಗತಿಯಲ್ಲಿದೆ. "ವಿಕೇಂದ್ರೀಕೃತ ಹಂಚಿಕೆ ಮಾಡಲ್ಪಟ್ಟ ಉತ್ಪಾದನೆ" ಯೋಜನೆ ಅಡಿಯಲ್ಲಿ, ಹಿಂದುಳಿದ 60 ತಾಲ್ಲೂಕುಗಳಲ್ಲಿ ಸೋಲಾರ್ ಯೋಜನೆಗಳನ್ನು ಸ್ಥಾಪಿಸಲು ಕ್ರಮವನ್ನು ಕೈಗೊಳ್ಳಲಾಗಿದೆ.
- ರಾಜ್ಯದಲ್ಲಿ ರೈಲ್ವೆ ಮಾರ್ಗಗಳ ಕಾರ್ಯಜಾಲ ಮತ್ತು ವಿಮಾನ ನಿಲ್ದಾಣಗಳ ಅಭಿವೃದ್ಧಿಯ ಬಗ್ಗೆ ವಿಶೇಷ ಒತ್ತುನೀಡಿದೆ. ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ 2ನೇ ರನ್‌ವೇ ಹಾಗೂ 2ನೇ ಟರ್ಮಿನಲ್ ಕಟ್ಟಡ ನಿರ್ಮಾಣದ ಮೊದಲ ಹಂತದ ಕಾಮಗಾರಿ ಪ್ರಗತಿಯಲ್ಲಿದೆ. ಬೆಳಗಾವಿ ಮತ್ತು ಹುಬ್ಬಳ್ಳಿಯಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ವಿಮಾನ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲು ಭಾರತದ ವಿಮಾನ ನಿಲ್ದಾಣಗಳ ಪ್ರಾಧಿಕಾರ ಕ್ರಮ ಕೈಗೊಂಡಿದೆ. ಕಲಬುರಗಿ ವಿಮಾನ ನಿಲ್ದಾಣ ಕಾಮಗಾರಿಯನ್ನು ಪ್ರಾರಂಭಿಸಿದೆ. ರಾಜ್ಯದಲ್ಲಿ 10 ಬೃಹತ್ ರೈಲ್ವೆ ಯೋಜನೆಗಳಲ್ಲಿ ರಾಮನಗರ–ಮೈಸೂರು, ಹಾಸನ–ಬೆಂಗಳೂರು, ಬೀದರ್–ಕಲಬುರಗಿ, ಬಾಗಲಕೋಟೆ–ಕುಡಚಿ ವಿಭಾಗದ ಬಾಗಲಕೋಟೆ–ಕಜ್ಜಿದೋಣಿಯಲ್ಲಿ ಸುರಂಗ ಮಾರ್ಗಗಳು ಮತ್ತು ಯಾದಗಿರಿಯಲ್ಲಿ ರೈಲ್ವೆ ಯೋಗಿ ಕಾರ್ಖಾನೆ ಯೋಜನೆಗಳು ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳ್ಳುವುದೆಂದು ನಿರೀಕ್ಷಿಸಲಾಗಿದೆ.
- ರಾಜ್ಯದಲ್ಲಿ ರಸ್ತೆ ಸಂಪರ್ಕ ಜಾಲವನ್ನು ಮೇಲ್ದರ್ಜೆಗೇರಿಸುವ ಬಗ್ಗೆ ನಾವು ವಿಶೇಷ ಒತ್ತುನೀಡಿದ್ದೇವೆ. ಕಳೆದ 3 ವರ್ಷಗಳಲ್ಲಿ 8927 ಕಿ.ಮೀ. ರಾಜ್ಯ ಹೆದ್ದಾರಿಗಳು ಮತ್ತು 17,163 ಕಿ.ಮೀ. ಪ್ರಮುಖ ಜಿಲ್ಲಾ ರಸ್ತೆಗಳನ್ನು ಅಭಿವೃದ್ಧಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಲೋನಿಗಳಲ್ಲಿ 1992 ಕಿ.ಮೀ. ಮತ್ತು 786 ಕಿ.ಮೀ. ಕಾಂಕ್ರೀಟ್ ರಸ್ತೆಗಳ ಸುಧಾರಣೆಗೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಪ್ರಸಕ್ತ ಸಾಲಿನಲ್ಲಿ ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ 717 ಕಿ.ಮೀ. ರಾಜ್ಯ ಹೆದ್ದಾರಿಗಳು ಮತ್ತು 3570 ಕಿ.ಮೀ. ಪ್ರಮುಖ ಜಿಲ್ಲಾ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುತ್ತಿದ್ದೇವೆ. ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ 3ನೇ ಹಂತದ ಮೇರೆಗೆ 3500 ಕೋಟಿ ರೂ.ಗಳ ವೆಚ್ಚದಲ್ಲಿ 2795 ಕಿ.ಮೀ. ರಾಜ್ಯ ಹೆದ್ದಾರಿಗಳು ಮತ್ತು 1520 ಕಿ.ಮೀ. ಪ್ರಮುಖ ಜಿಲ್ಲಾ ಹೆದ್ದಾರಿಗಳನ್ನು ಸಹ ನಾವು ಅಭಿವೃದ್ಧಿಪಡಿಸುತ್ತೇವೆ.
- ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಲಯಗಳಲ್ಲಿ ಕರ್ನಾಟಕ, ದೇಶದಲ್ಲಿ ಮೊದಲ ಸ್ಥಾನ ಹೊಂದಿದೆ. ಈ ಕ್ಷೇತ್ರ ಪ್ರತಿ ವರ್ಷ ಹೊಸ ಉದ್ಯೋಗಗಳನ್ನು ಸೃಜಿಸುವುದರ ಜೊತೆಗೆ ಇದರ ಬೆಳವಣಿಗೆಯ ಪ್ರಮಾಣ ವಾರ್ಷಿಕ ಶೇ.10 ರಿಂದ 12ಕ್ಕೆ ಹೆಚ್ಚಳವಾಗಿದೆ. ಹೊಸ ನವೋದ್ಯಮ ನೀತಿಯನ್ನು ಆರಂಭಿಸುವುದರೊಂದಿಗೆ ರಾಜ್ಯವು ವಿಶ್ವದ ನವೋದ್ಯಮ ಕ್ಷೇತ್ರದಲ್ಲಿ ಅಗ್ರಸ್ಥಾನವನ್ನು ಉಳಿಸಿಕೊಂಡಿದೆ. 4000ಕ್ಕಿಂತ ಹೆಚ್ಚಿನ ನವೋದ್ಯಮಗಳಲ್ಲಿ



ಕಳೆದ 2 ವರ್ಷದಲ್ಲಿ 1 ಬಿಲಿಯನ್ ಡಾಲರ್‌ಗಿಂತಲೂ ಹೆಚ್ಚು ಬಂಡವಾಳ ಹೂಡಿಕೆಯನ್ನು ಸ್ವೀಕರಿಸಿದೆ.

- ಬೆಂಗಳೂರು ಮೆಟ್ರೋ ರೈಲು ನಿಗಮವು ಏಪ್ರಿಲ್ 2017 ರಿಂದ ಬೆಂಗಳೂರು ಮೆಟ್ರೋದ 1ನೇ ಹಂತದ 42.38 ಕಿ.ಮೀ. ಅನ್ನು ಪೂರ್ಣಗೊಳಿಸುವುದಕ್ಕೆ ಸಿದ್ಧವಾಗಿದೆ. 2ನೇ ಹಂತದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಶೀಘ್ರಗತಿಯಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ. ರೈಲ್ವೆ ಇಲಾಖೆಯ ಸಹಯೋಗದಲ್ಲಿ ಬೆಂಗಳೂರು ಮೆಟ್ರೊಪಾಲಿಟನ್ ಪ್ರದೇಶಕ್ಕಾಗಿ ಉಪ-ನಗರ ರೈಲ್ವೆ ಕಾಮಗಾರಿ ಪ್ರಾರಂಭಿಸಲು ರೈಲ್ವೆ ಮಂತ್ರಾಲಯದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.
- ಪ್ರಸಕ್ತ ಸಾಲಿನಲ್ಲಿ ಮತ್ತು ಮುಂದಿನ ಸಾಲಿನ ಅವಧಿಯಲ್ಲಿ, ಬೆಂಗಳೂರಿನಲ್ಲಿ 7300 ಕೋಟಿ ರೂ.ಗಳಷ್ಟು ಪ್ರಮಾಣದ ವಿವಿಧ ರಸ್ತೆ ಮತ್ತು ಮೂಲಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾಗಿರುವ 110 ಗ್ರಾಮಗಳಿಗೆ ಕಾವೇರಿ ನೀರನ್ನು ಒದಗಿಸಲಾಗುವುದು.
- ರಾಜ್ಯದ ಇತರ ನಗರ ಅದರಲ್ಲೂ ವಿಶೇಷವಾಗಿ ಪಟ್ಟಣಗಳಲ್ಲಿ 427 ಕೋಟಿ ರೂ.ಗಳಷ್ಟು ಪ್ರಮಾಣದ 11 ನೀರು ಸರಬರಾಜು ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. 18 ಪಟ್ಟಣಗಳಲ್ಲಿ ಅಮೃತ ಯೋಜನೆ ಅಡಿಯಲ್ಲಿ 1279 ಕೋಟಿ ರೂ.ಗಳ ವೆಚ್ಚದಲ್ಲಿ ನೀರು ಸರಬರಾಜು ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ
- ಕೈಗಾರಿಕಾ ನೀತಿ ಮತ್ತು ಪ್ರವರ್ಧನೆ ಇಲಾಖೆಯ ಪ್ರಕಾರ ಉದ್ದೇಶಿತ ಬಂಡವಾಳ ಹೂಡಿಕೆಯಲ್ಲಿ ಕರ್ನಾಟಕ ರಾಜ್ಯವು ಮೊದಲ ಸ್ಥಾನದಲ್ಲಿದೆ. 2016ನೇ ಸಾಲಿನಲ್ಲಿ 1,49,587 ಕೋಟಿ ರೂ.ಗಳ ಉದ್ದೇಶಿತ ಬಂಡವಾಳ ಹೂಡಿಕೆಯನ್ನು ಸ್ವೀಕರಿಸಲಾಗಿದೆ.
- ಬೆಂಗಳೂರಿನಲ್ಲಿ ವಿದೇಶಾಂಗ ವ್ಯವಹಾರ ಸಚಿವಾಲಯದ ಸಹಯೋಗದೊಂದಿಗೆ "ಪ್ರವಾಸಿ ಭಾರತೀಯ ದಿವಸ-2017"ನ್ನು ಯಶಸ್ವಿಯಾಗಿ ನಡೆಸಿದೆ. ಕರ್ನಾಟಕದಲ್ಲಿ ನೇರ ಬಂಡವಾಳ ಹೂಡಿಕೆಗೆ ಪ್ರೋತ್ಸಾಹ ನೀಡಲು ಹೊಸ ಅನಿವಾಸಿ ಭಾರತೀಯ ನೀತಿಯನ್ನು ಸಹ ಪ್ರಕಟಿಸಿದೆ.
- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಕಾರ್ಯಾರಂಭ ಮಾಡಿದಾಗಿನಿಂದ ಇಲ್ಲಿಯವರೆಗೆ 164 ಪ್ರಶಸ್ತಿಗಳನ್ನು ಪಡೆದಿದೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು 100 ಪ್ರಶಸ್ತಿಗಳನ್ನು ಪಡೆದಿದೆ. ಇತ್ತೀಚೆಗೆ ಮೈಸೂರು ಚತುರ ಸಾರಿಗೆ ವ್ಯವಸ್ಥೆ ಯೋಜನೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ರಾಷ್ಟ್ರೀಯ ಇ-ಆಡಳಿತ ಪ್ರಶಸ್ತಿಯನ್ನು ಸಹ ತನ್ನದಾಗಿಸಿಕೊಂಡಿದೆ.
- ಕ್ರೀಡೆಗಳನ್ನು ಪ್ರೋತ್ಸಾಹಿಸಲು ರಾಜ್ಯದಲ್ಲಿ 13 ಕ್ರೀಡಾಂಗಣಗಳಲ್ಲಿ ಸಿಂಥೆಟಿಕ್ ಅಥ್ಲೆಟಿಕ್ ಪಥ ಸೌಲಭ್ಯ ಒದಗಿಸುವುದರ ಜೊತೆಗೆ, ಬೆಳಗಾವಿಯಲ್ಲಿ ವಿವಿಧೋದ್ದೇಶದ ಒಳಾಂಗಣ ಕ್ರೀಡಾಂಗಣ ಮತ್ತು ವಿಜಯಪುರದಲ್ಲಿ ಸೈಕ್ಲಿಂಗ್‌ಗಾಗಿ ಆಧುನಿಕ ಸೌಲಭ್ಯವುಳ್ಳ ಪಥವನ್ನು ನಿರ್ಮಿಸಿದೆ. ಬೆಂಗಳೂರಿನ ಹಾಕಿ ಕ್ರೀಡಾಂಗಣವನ್ನು ಮೇಲ್ದರ್ಜೆಗೇರಿಸಲಾಗಿದೆ.
- ಅಂತಿಮವಾಗಿ, ಪ್ರಗತಿಪರ ಮತ್ತು ಸರ್ವರನ್ನೊಳಗೊಂಡ ಸಮಾಜದ ನಿರ್ಮಾಣ ಮಾಡುವ ಆಶಯದೊಂದಿಗೆ ಕರ್ನಾಟಕವನ್ನು ಪ್ರಗತಿಯ ಹಾದಿಯಲ್ಲಿ ಮುನ್ನಡೆಸಲು ಬದ್ಧವಾಗಿದೆ. ತತ್ವಾಧಾರಿತವಾದ ಸಮಾಜವು ಸಮಾನತೆ ಮತ್ತು ನ್ಯಾಯ ಪಾಲನೆಯ ಉದ್ದೇಶ ಮಾತ್ರವಲ್ಲದೇ, ಅನುಕಂಪ ಮತ್ತು ಸಹನೆಯನ್ನೂ ಒಳಗೊಂಡಿರಬೇಕು. ಕರ್ನಾಟಕದ ವೈಭವಯುತ ಇತಿಹಾಸ ಮತ್ತು ಪರಂಪರೆಯನ್ನು ಸ್ಮರಿಸಿಕೊಂಡು ರಾಜ್ಯದ ಉಜ್ವಲ ಭವಿಷ್ಯ ನಿರ್ಮಾಣಕ್ಕಾಗಿ ನನ್ನೊಂದಿಗೆ ಕೈಜೋಡಿಸಲು ಈ ಸದನದ ಸದಸ್ಯರನ್ನು ನಾನು ಕೋರುತ್ತೇನೆ.

**ಜೈಹಿಂದ್; ಜೈಕರ್ನಾಟಕ**





# ಭಾರತ ಭಾಗ್ಯ ವಿಧಾತ

## ಧ್ವನಿ-ಬೆಳಕು; ದೃಶ್ಯ ವೈಭವಗಳ ರೂಪಕ

**ಜಡಿಯಪ್ಪ ಗೆದ್ಲಗಟ್ಟಿ**
ವಾರ್ತಾ ಸಹಾಯಕರು

**ಡಾ.ಬಿ.ಆರ್. ಅಂಬೇಡ್ಕರ್ ಒಂದು ಜಗತ್ತು ಇದ್ದಂತೆ, ಅವರೊಬ್ಬ ಸಮಾಜ ಸುಧಾರಕ, ಆರ್ಥಿಕ ತಜ್ಞ, ಶಿಕ್ಷಣ ತಜ್ಞ, ರಾಜಕೀಯ ವಿಶ್ಲೇಷಕ, ಅಧ್ಯಾಪಕ, ಹೋರಾಟಗಾರ, ಭಾರತ ಸಂವಿಧಾನ ಶಿಲ್ಪಿ ಹೀಗೆ ಹತ್ತು ಹಲವಾರು ಪ್ರತಿಭೆಗಳ ಮೇರು ಶಿಖರ. ಅವರ ಬಹುಮುಖಿ ಪ್ರತಿಭೆಗಳನ್ನು ಪಟ್ಟಿ ಮಾಡುತ್ತಾ ಹೋದರೆ ಬಹುಶಃ ಜಗತ್ತಿನಲ್ಲಿ ಅವರಂತ ಬಹುಮುಖಿ ಜ್ಞಾನಿ ಇನ್ನೊಬ್ಬರಿಲ್ಲ ಎನಿಸುತ್ತದೆ.**

ಕರ್ನಾಟಕ ಸರ್ಕಾರ ಆಚರಿಸುತ್ತಿರುವ ಸಂವಿಧಾನ ಶಿಲ್ಪಿ ಡಾ: ಬಿ.ಆರ್. ಅಂಬೇಡ್ಕರ್ ಅವರ 125 ನೇ ಜನ್ಮದಿನಾಚರಣೆಯ (14 ಏಪ್ರಿಲ್ 1891) ವರ್ಷಾಚರಣೆ (14 ಏಪ್ರಿಲ್ 2016 ರಿಂದ 14 ಏಪ್ರಿಲ್ 2017) ಅಂಗವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಮ್ಮಿಕೊಂಡಿರುವ ಅಂಬೇಡ್ಕರ್ ಅವರ ಜೀವನ ಸಾಧನೆಗಳನ್ನು ಬಿಂಬಿಸುವ ವಿನೂತನ ಧ್ವನಿ-ಬೆಳಕು 'ಭಾರತ ಭಾಗ್ಯ ವಿಧಾತ' ಕಾರ್ಯಕ್ರಮ.

ಫೆಬ್ರವರಿ 1 ರಂದು ಬೆಂಗಳೂರಿನಲ್ಲಿ ಆರಂಭಗೊಂಡು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಮಾರ್ಚ್ 3 ರವರೆಗೆ ಒಂದು ತಿಂಗಳ ಕಾಲ ಜರುಗಲಿದೆ.



"ಭಾರತ ಭಾಗ್ಯ ವಿಧಾತ" – ಇದು ಭಾರತದ ತಳ ಸಮುದಾಯಗಳ ಆತ್ಮಸ್ಥೈರ್ಯವನ್ನು ನೂರ್ಮಡಿಗೊಳಿಸಿದ ಮಹಾ ಚೇತನದ ಜೀವನ ಚರಿತೆ. ನೊಂದವರ ನೋವಿಗೆ ದನಿಯಾಗಿ ನಿಂತ ಧೀಮಂತ ನಾಯಕನ ಆತ್ಮಕತೆ. ತನ್ನ ಪ್ರತಿಭೆ, ಪರಿಶ್ರಮಗಳಿಂದ ಜಗತ್ತಿನ ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ಪದವಿ ಪುರಸ್ಕಾರ ಗಳಿಸಿದ ಆರ್ಥಿಕ ತಜ್ಞನ ಯಶೋಗಾಥೆ. ಭಾರತ ಸಂವಿಧಾನದ ಶಿಲ್ಪಿಯೆಂದೇ ಖ್ಯಾತರಾದ ಮಹಾ ಮಾನವತಾವಾದಿಯ ಜೀವನಗಾಥೆ.

ಡಾ.ಬಿ.ಆರ್. ಅಂಬೇಡ್ಕರ್ ಒಂದು ಜಗತ್ತು ಇದ್ದಂತೆ, ಅವರೊಬ್ಬ ಸಮಾಜ ಸುಧಾರಕ, ಆರ್ಥಿಕ ತಜ್ಞ, ಶಿಕ್ಷಣ ತಜ್ಞ, ರಾಜಕೀಯ ವಿಶ್ಲೇಷಕ, ಅಧ್ಯಾಪಕ, ಹೋರಾಟಗಾರ, ಭಾರತ ಸಂವಿಧಾನ ಶಿಲ್ಪಿ ಹೀಗೆ ಹತ್ತು ಹಲವಾರು ಪ್ರತಿಭೆಗಳ ಮೇರು ಶಿಖರ. ಅವರ ಬಹುಮುಖ ಪ್ರತಿಭೆಗಳನ್ನು ಪಟ್ಟಿ ಮಾಡುತ್ತಾ ಹೋದರೆ ಬಹುಶಃ ಜಗತ್ತಿನಲ್ಲಿ ಅವರಂತ ಬಹುಮುಖಿ ಜ್ಞಾನಿ ಇನ್ನೊಬ್ಬರಿಲ್ಲ ಎನಿಸುತ್ತದೆ.



ಇಂತಹ ಬಹುಮುಖಿ ಜ್ಞಾನಿಯನ್ನು ಒಂದೂವರೆ ಗಂಟೆಯ ಈ ರೂಪಕದಲ್ಲಿ ಹಿಡಿದಿಡಲು ಮತ್ತು ಒಟ್ಟಾರೆ ರೂಪಕದಲ್ಲಿ ಯಾವ ಯಾವ ಅಂಶಗಳನ್ನು ಪರಿಗಣಿಸಬೇಕು ಹಾಗೂ ಯಾವುದೇ ವಿಷಯದಲ್ಲಿ ಚ್ಯುತಿ ಕಾಣಿಸದಂತೆ ರೂಪಿಸುವಲ್ಲಿ ರಾಜ್ಯ ಸರ್ಕಾರ ಮೊದಲು ಅಂಬೇಡ್ಕರ್ ಬಗ್ಗೆ ಅಧ್ಯಯನ ಮಾಡಿರುವ ಮತ್ತು ಅಪಾರ ಜ್ಞಾನವಿರುವ ಪರಿಣಿತ ಸಲಹಾ ಸಮಿತಿಯನ್ನು ರಚಿಸಿತ್ತು.

ಅದರಲ್ಲಿ ದಲಿತ ಕವಿ ಡಾ: ಸಿದ್ಧಲಿಂಗಯ್ಯ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮಾಜಿ ಅಧ್ಯಕ್ಷ ಹಾಗೂ ಸಾಹಿತಿ ಎಲ್. ಹನುಮಂತಯ್ಯ, ಸಾಹಿತಿ ಶ್ರೀಮತಿ ಬಿ.ಟಿ.ಜಾಹ್ನವಿ, ಅಂಬೇಡ್ಕರ್ ಪ್ರಶಸ್ತಿ ವಿಜೇತ ಚಿನ್ನಸ್ವಾಮಿ, ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ.ಎಸ್.ನರೇಂದ್ರ ಕುಮಾರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆ ನಿರ್ದೇಶಕರುಗಳು ಮತ್ತು ಕ್ಷೇತ್ರ ಪ್ರಚಾರ ಶಾಖೆಯ ಜಂಟಿ ನಿರ್ದೇಶಕರು ಸದಸ್ಯರಾಗಿದ್ದರು.

ಇದರ ಮೇಲೆ ಮನರಂಜನೆ ಮತ್ತು ಸಾಂಸ್ಕೃತಿಕ ಹಾಗೂ ಸಂಗೀತದ ಗುಣಮಟ್ಟವನ್ನು ಕಾಯ್ದುಕೊಳ್ಳಲು ವಾರ್ತಾ ಇಲಾಖೆಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮದ ಸಲಹಾ ಸಮಿತಿಯನ್ನು ರಚಿಸಿಲಾಗಿತ್ತು. ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ, ರಾಷ್ಟ್ರೀಯ ನಾಟಕ ಶಾಲೆಯ





ಜ್ಞಾನದ ಇನ್ನೊಂದು ಹೆಸರು ಡಾ.ಬಿ.ಆರ್.ಅಂಬೇಡ್ಕರ್, ಅವರ ಸಾಧನೆ ಮತ್ತು ಜೀವನ ಮನುಕುಲಕ್ಕೆ ಎಂದೆಂದಿಗೂ ಮಾದರಿ. ಇಂದಿನ ಯುವ ಜನತೆಗೆ ಅಂಬೇಡ್ಕರ್ ಅವರ ಸಾಧನೆ ಮತ್ತು ಜೀವನವನ್ನು ತೋರಿಸುವ ಈ ಬೃಹತ್ ಕಾರ್ಯಕ್ರಮ ಯಶಸ್ವಿಯಾಗಿರುವುದು ಸಂತಸ ತಂದಿದೆ.

**ಎನ್.ಆರ್. ವಿಶುಕುಮಾರ್**
ನಿರ್ದೇಶಕರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ.



ನಾನೂ ಕೂಡ ಬಹುತೇಕರಂತೆ ಸರ್ಕಾರಿ ಯೋಜನೆ, ಕಾರ್ಯಕ್ರಮಗಳ ಬಗೆಗೆ ಉಡಾಫೆ ಮತ್ತು ತಿರಸ್ಕಾರ ಭಾವ ಹೊಂದಿದವನಾಗಿದ್ದೆ. ಆದರೆ ಈ ಕಾರ್ಯಕ್ರಮಕ್ಕೆ ಕೆಲಸ ಮಾಡಿದ ನಂತರ ಸಮಾಜಮುಖಿಯಾಗಿ ಕೆಲಸ ಮಾಡಲು ನಿಶ್ಚಯಿಸಿದ್ದೇನೆ.

**ಪೂರ್ಣಚಂದ್ರ ತೇಜಸ್ವಿ**
ಸಂಗೀತ ನಿರ್ದೇಶಕ



ಈ ಕಾರ್ಯಕ್ರಮದ ಮೊದಲ ಯಶಸ್ಸು ಸಮಿತಿ ಸದಸ್ಯರು, ತೆರೆಮರೆಯ ತಂಡ ಹಾಗೂ ಕಲಾವಿದರ ಆಯ್ಕೆ. ಉತ್ತಮ ತಂಡದ ಆಯ್ಕೆ ಕಾರ್ಯಕ್ರಮದ ಅರ್ಧ ಯಶಸ್ಸು. ಇಲಾಖೆಯ ಈ ಹಿಂದಿನ ಯಶಸ್ವಿ ಕಾರ್ಯಕ್ರಮ ಮನುಷ್ಯ ಜಾತಿ ತಾನೊಂದೆ ವಲಂ ಅನುಭವ ಇಂದು ಇದೆಕ್ಕೆಲ್ಲಾ ಕಾರಣವಾಗಿದೆ.

**ಪಿ. ಎನ್. ಗುರುಮೂರ್ತಿ**
ಜಂಟಿ ನಿರ್ದೇಶಕರು, ಕ್ಷೇತ್ರ ಪ್ರಚಾರ ಶಾಖೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ.



ವಾರ್ತಾ ಇಲಾಖೆಯ ವಿಶುಕುಮಾರ್ ಸಾರ್ ಈ ಕಾರ್ಯಕ್ರಮದ ನಿರ್ದೇಶನದ ಜವಾಬ್ದಾರಿಯನ್ನು ನನಗೆ ವಹಿಸಿದಾಗ ಹೆಮ್ಮೆಯಿಂದ ಒಪ್ಪಿಕೊಂಡೆ, ಇಲಾಖೆ ಒದಗಿಸಿ ಕೊಟ್ಟ ಸಲಹಾ ಸಮಿತಿ, ತಜ್ಞರ ಸಮಿತಿ ಹಾಗೂ ನನ್ನ ಜೊತೆ ಹಗಲಿರುಳು ದುಡಿದ ತಂಡಕ್ಕೆ ಧನ್ಯವಾದಗಳು. ಈ ಕಾರ್ಯಕ್ರಮಕ್ಕೆ "ಭಾರತ ಭಾಗ್ಯ ವಿಧಾತ" ಹೆಸರು ಸೂಚಿಸಿದವರು ಖ್ಯಾತ ರಂಗಕರ್ಮಿ ಸಿ.ಬಸವಲಿಂಗಯ್ಯ ಅವರು.

**ಗಿರಿರಾಜ್ ಬಿ.ಎಮ್**
ರಂಗಭೂಮಿ ಹಾಗೂ ಚಲನಚಿತ್ರ
ನಿರ್ದೇಶಕರು







ಬೆಂಗಳೂರು ಶಾಖೆಯ ಮುಖ್ಯಸ್ಥ ಸಿ.ಬಸವಲಿಂಗಯ್ಯ ಮತ್ತು ಪ್ರಾಧ್ಯಾಪಕ ಹಾಗೂ ಸಾಹಿತಿ ಕೆ.ವೈ.ನಾರಾಯಣ ಸ್ವಾಮಿಯವರು ಈ ಸಮಿತಿಯಲ್ಲಿದ್ದು ಕಾರ್ಯಕ್ರಮದ ಪ್ರಾರಂಭದಿಂದಿಡಿದು ಅಭ್ಯಾಸ ಸಮಯದಲ್ಲಿ ಸ್ಥಳದಲ್ಲೇ ಇದ್ದು ತಮ್ಮ ಸಲಹೆ ಸೂಚನೆಗಳನ್ನು ನೀಡಿದ್ದಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕರಾದ ಎನ್.ಆರ್. ವಿಶುಕುಮಾರ್ ಅವರ ಪರಿಕಲ್ಪನೆಯ ಈ ಕಾರ್ಯಕ್ರಮಕ್ಕೆ ನಿರ್ದೇಶನ ಮತ್ತು ಸಾಹಿತ್ಯವನ್ನು ಖ್ಯಾತ ಚಲನಚಿತ್ರ ನಿರ್ದೇಶಕ ಬಿ.ಎಂ. ಗಿರಿರಾಜ್, ಸಂಗೀತ ಪೂರ್ಣಚಂದ್ರ ತೇಜಸ್ವಿ, ರಂಗ ವಿನ್ಯಾಸ ಶಶಿಧರ ಅಡಪ, ವಸ್ತ್ರಾಲಂಕಾರ ಪ್ರಮೋದ್ ಶಿಗ್ಗಾವ್, ಪದ್ಮಿನಿ ಹಚ್ಚಿ ನೃತ್ಯ ನಿರ್ದೇಶನೆ, ರಾಮಕೃಷ್ಣ ಬೆಳ್ತೂರು ಮೇಕಪ್ ಹಾಗೂ ಡಾ: ಕೆ.ವೈ. ನಾರಾಯಣಸ್ವಾಮಿ ಅವರು ಗೀತ ರಚನೆ ಮಾಡಿದ್ದಾರೆ.

"ಕಣ್ತುಂಬಿಸುವ ಬೆಳಕಿನ ಲೋಕ, ಕಿವಿದುಂಬಿಸುವ ಹಿನ್ನೆಲೆ ಸಂಗೀತದೊಂದಿಗೆ ವೈಚಾರಿಕತೆಯ ಹಿನ್ನೋಟ" ಅಡಿಬರಹದಲ್ಲಿ ರೂಪುಗೊಂಡಿರುವ ಈ ವಿಶೇಷ ಕಾರ್ಯಕ್ರಮ ಮೊದಲ ಪ್ರದರ್ಶನ ಕಂಡಿದ್ದು ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿರುವ ಕರ್ನಾಟಕ ಕಲಾಗ್ರಾಮದಲ್ಲಿ. ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಬೃಹತ್ ವೇದಿಕೆಗಳಲ್ಲಿ ಪ್ರದರ್ಶನ ಕಂಡಿದ್ದು ಸರಾಸರಿ 5000 ಜನ ವೀಕ್ಷಿಸಿದ್ದಾರೆ.

ವಾರ್ತಾ ಇಲಾಖೆ ಈಗಾಗಲೇ "ಮನುಷ್ಯ ಜಾತಿ ತಾನೊಂದೆ ವಲಂ" ಧ್ವನಿ ಬೆಳಕು ಕಾರ್ಯಕ್ರಮವನ್ನು ಯಶಸ್ವಿಯಾಗಿ ಹಮ್ಮಿಕೊಂಡಿರುವ ಅನುಭವದ ಮೇಲೆ ಡಾ: ಬಿ.ಆರ್. ಅಂಬೇಡ್ಕರ್ ಕುರಿತು ಮಾಡಿರುವ 'ಭಾರತ ಭಾಗ್ಯ ವಿಧಾತ' ಕರ್ನಾಟಕದ ಮನೆ–ಮನಗಳ ಮಾತಾಗಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

80 ಕಲಾವಿದರು 15 ದಿನಗಳ ಕಾಲ ಖ್ಯಾತ ನಿರ್ದೇಶಕ ಬಿ.ಎಂ. ಗಿರಿರಾಜ್ ಅವರ ನಿರ್ದೇಶನದಲ್ಲಿ ರೂಪುಗೊಂಡಿರುವ ಈ ಕಾರ್ಯಕ್ರಮ ವಾರ್ತಾ ಇಲಾಖೆಯ ಮೈಲುಗಲ್ಲುಗಳಿಗೆ ಹಿಡಿದ ಕೈಗನ್ನಡಿಯಾಗಿದೆ.

---

ಡಾ.ಬಿ.ಆರ್.ಅಂಬೇಡ್ಕರ್ ಎಂದರೆ ಸಂವಿಧಾನ ಶಿಲ್ಪಿ ಮತ್ತು ದಲಿತರ ಹಕ್ಕುಗಳ ಹೋರಾಟಗಾರ ಎಂದಷ್ಟೇ ಅಂದುಕೊಂಡಿದ್ದ ನನಗೆ ಅವರ ಬಹುಮುಖ ಪ್ರತಿಭೆಗಳ ಅನಾವರಣ ಈ ಕಾರ್ಯಕ್ರಮ, ಇಂತಹ ಕಾರ್ಯಕ್ರಮವನ್ನು ಸಿದ್ಧಪಡಿಸಿದ ತಂಡಕ್ಕೆ ಮತ್ತು ವಾರ್ತಾ ಇಲಾಖೆಗೆ ಅಭಿನಂದನೆಗಳು.

**ಹೇಮಲತಾ ಬಿ**
ಗೃಹಿಣಿ, ಮೈಸೂರು

---



# 9ನೇ ಚಲನಚಿತ್ರೋತ್ಸವ

## ಅಪರೂಪದ ಸಿನಿಮಾಗಳ ರಸದೌತಣ!

ಡಾ. ಹೆಚ್.ವೀರಭದ್ರಪ್ಪ



ಓರಿಯನ್‌ಮಾಲ್ ಐನಾಕ್ಸ್‌ನ 11 ಬೆಳ್ಳಿತೆರೆಗಳಲ್ಲಿ ಫೆಬ್ರವರಿ 2ರಿಂದ 9ರವರೆಗೆ 'ಬೆಂಗಳೂರಿನಲ್ಲಿ ಜಗತ್ತು' ಎಂಬ ಶೀರ್ಷಿಕೆಯಡಿ ಚಲನಚಿತ್ರ ಅಕಾಡೆಮಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಯೋಗದಲ್ಲಿ ನಡೆದ 9ನೇ ಚಲನಚಿತ್ರೋತ್ಸವ ಚಿತ್ರರಸಿಕರಿಗೆ ರಸದೌತಣ ನೀಡುವಲ್ಲಿ ಸಫಲವಾಯಿತು. ದೇಶವಿದೇಶಗಳ ಸುಮಾರು 350ಕ್ಕೂ ಹೆಚ್ಚು ಚಿತ್ರಗಳು ಇಲ್ಲಿ ಪ್ರದರ್ಶನಗೊಂಡಿದ್ದು 'ಬೆಂಗಳೂರಿನಲ್ಲಿ ಜಗತ್ತು' ಎನ್ನುವ ಶೀರ್ಷಿಕೆ ಅರ್ಥಪೂರ್ಣವಾಗಿತ್ತು.

ಚಿತ್ರೋತ್ಸವದ ಮೊದಮೊದಲಿನ ದಿನಗಳಲ್ಲಿ ಆಯ್ಕೆ ಮಾಡಿಕೊಂಡ ಸಿನಿಮಾಕ್ಕೆ ಸುಲಭವಾಗಿ ಹೋಗಿ ಕುಳಿತು ಬರಬಹುದಾಗಿತ್ತು. ಆದರೆ ಚಿತ್ರೋತ್ಸವದ ಕೊನೆಯ 4 ದಿನಗಳು ಉದ್ದಕ್ಕೂ ಕ್ಯೂನಲ್ಲಿ ನಿಂತು ನೋಡುವಂತಾಯಿತು. ಚಿತ್ರೋತ್ಸವದ ಜನಪ್ರಿಯತೆಗೆ ಇದು ಸಾಕ್ಷಿಯಾಯಿತು. ಕೊನೆಯ ಮೂರ್‍ನಾಲ್ಕು ದಿನ ಅತಿಹೆಚ್ಚಿನ ಸಿನಿಮಾಪ್ರಿಯರು ಐನಾಕ್ಸ್ ಕಡೆಗೆ ಹರಿದು ಬಂದರು. ಎಷ್ಟರ ಮಟ್ಟಿನ ಜನಸಾಗರವೆಂದರೆ ಸಿನಿಮಾ ಹೌಸ್‌ಫುಲ್‌ನಿಂದಾಗಿ ಪ್ರವೇಶ ಸಿಗದೇ ನಿರಾಶೆಯಾಗುವಂತಾಯಿತು.



ಈ ಸಲ ನಾನು ನೋಡಲೇಬೇಕೆಂದು ಆರಿಸಿಕೊಂಡ ಸಿನಿಮಾಗಳು ಬಹುತೇಕ ಯುದ್ಧ ಕೇಂದ್ರಿತ ಸಿನಿಮಾಗಳು ಹಾಗೂ ಧರ್ಮಕೇಂದ್ರಿತ ಸಿನಿಮಾಗಳು. ಇದರ ಜೊತೆಗೆ ಕೆಲವು ಇತರೆ ಸಿನಿಮಾಗಳು.

ಯುದ್ಧಕೇಂದ್ರಿತ ಸಿನಿಮಾಗಳಲ್ಲಿ ಜರ್ಮನಿ ದೇಶದ 'ಸಾಂಕ್ಚ್ಯುರಿ,' ಪೋಲೆಂಡ್ ದೇಶದ 'ದ ಇನ್ನೋಸೆನ್ಸ್,' ಈಜಿಪ್ಟ್‌ನ 'ಕ್ಲಾಷ್' ಹಾಗೂ ದಕ್ಷಿಣಕೊರಿಯಾದ 'ದಿ ನೆಟ್' ಅತ್ಯಂತ ಸಹಜವಾಗಿ ಮೂಡಿಬಂದ ಹಾಗೂ ಅತಿ ಹೆಚ್ಚು ಸಿನಿಮಾಪ್ರಿಯರನ್ನು ಆಕರ್ಷಿಸಿದ ಸಿನಿಮಾಗಳು.

**'ದಿ ನೆಟ್'**

'ಸಿನಿಮಾ ಆಫ್ ದಿ ವರ್ಲ್ಡ್' ವಿಭಾಗದಲ್ಲಿ ಪ್ರದರ್ಶನಗೊಂಡ ಕೊರಿಯನ್ ನಿರ್ದೇಶಕ ಕಿಮ್ ಕಿ ಡುಕ್‌ನ್ ನಿರ್ದೇಶಿಸಿದ 'ದಿ ನೆಟ್' ಸಿನಿಮಾ ಸುಮಾರು 2 ಘಂಟೆಗಳ ಅವಧಿಯದು. ಈ ಚಿತ್ರ ಉದ್ದಕ್ಕೂ ತುದಿಗಾಲಿನ ಮೇಲೆ ಕುಳಿತು ನೋಡುವಂತೆ ಮಾಡಿತ್ತು. ಉತ್ತರಕೊರಿಯಾದ ಬಡಬೆಸ್ತನೊಬ್ಬ ತನ್ನ ದೈನಂದಿನ ಬದುಕಿನ ನಿರ್ವಹಣೆಗೆ ಕಂಡುಕೊಂಡ ಉದ್ಯೋಗ ಮೀನುಗಾರಿಕೆ. ಉತ್ತರಕೊರಿಯಾ ಹಾಗೂ ದಕ್ಷಿಣಕೊರಿಯಾದ ಮಧ್ಯೆ ಹರಿಯುವ ಸರೋವರದಲ್ಲಿ ಇರುವ ಎರಡು ದೇಶಗಳ ಗಡಿಯ ತಂತಿಯ ಬೇಲಿ, ಮೀನಿನ ಬಲೆ ಸರೋವರದಲ್ಲಿ ಚಿಕ್ಕದೋಣಿಗೆ ಸಿಕ್ಕಿಹಾಕಿಕೊಂಡುದರ ಪರಿಣಾಮವಾಗಿ ಆಕಸ್ಮಿಕ ತಂತಿಬೇಲಿಯ ಗಡಿರೇಖೆಯನ್ನು ದಾಟಿದ್ದೇ ಕಾರಣವಾಗಿ ದಕ್ಷಿಣ ಕೊರಿಯಾ ಮಿಲಿಟರಿ ಅಧಿಕಾರಿಗಳು ಬೆಸ್ತನನ್ನು ಹಿಡಿದುಕೊಂಡು ಮಿಲಿಟರಿ ವಿಚಾರಣೆಗೊಳಪಡಿಸುತ್ತಾರೆ. ಹಂತಹಂತವಾಗಿ ವಿಚಾರಣೆ ನಡೆದು ಈತ ಮುಗ್ಧನೆಂದು ಗೊತ್ತಾಗಿದ್ದರೂ ಆತನನ್ನು ಕಳುಹಿಸದೇ ಗೂಢಾಚಾರಿಕೆಗೆ ಬಂದವನೆಂದು ಒಪ್ಪಿಕೊಳ್ಳುವಂತೆ ಒತ್ತಡ ಹಾಕಲಾಗುತ್ತದೆ. ಆದರೆ ಇದಕ್ಕೆ ಒಪ್ಪದೆ ಇದ್ದಾಗ ಹಲವು ರೀತಿಯ ಶಿಕ್ಷೆಗೆ ಒಳಪಡಿಸಲಾಗುತ್ತದೆ.

ನಿರ್ದಯಿ ಮಿಲಿಟರಿ ಅಧಿಕಾರಿಗಳ ಮಧ್ಯೆಯೂ ಮಿಲಿಟರಿ ಸೈನಿಕನೊಬ್ಬ ಮಾನವೀಯತೆ ಮೆರೆಯುತ್ತಾನೆ. ಮಾನವೀಯ ಮುಖದ ಮೊದಲ ಅನುಭವ ಮಿಲಿಟರಿಯಲ್ಲಿ ಆಗುತ್ತದೆ.



ಏನಾದರೂ ಮಾಡಿ ಈತನನ್ನು ಗೂಢಚಾರಿಕೆಗೆ ಬಂದವನೆಂದು ಕಡತ ಸಿದ್ಧ ಮಾಡಲು ಸತತ ಪ್ರಯತ್ನ ಮಾಡುತ್ತಿರುವ ನಿರ್ದಯಿ ಮಿಲಿಟರಿ ಅಧಿಕಾರಿ ನಿರಂತರ ಶಿಕ್ಷೆಗೆ ಒಳಪಡುವ ಅಮಾಯಕ ಕಥಾನಾಯಕ, ಮಾಧ್ಯಮಗಳಲ್ಲಿ ಅಮಾಯಕ ಬೆಸ್ತನನ್ನು ದಕ್ಷಿಣ ಕೊರಿಯಾ ಮಿಲಿಟರಿ ಅಧಿಕಾರಿಗಳು ಬಂಧಿಸಿರುವ ಬಗ್ಗೆ ವ್ಯಾಪಕ ಪ್ರಚಾರವಾಗಿ ದಕ್ಷಿಣಕೊರಿಯಾ ಮಿಲಿಟರಿ ಅಧಿಕಾರಿಗಳು ಈತನನ್ನು ಅಂತಿಮವಾಗಿ ಬಿಡುಗಡೆ ಮಾಡುತ್ತಾರೆ. ದಕ್ಷಿಣಕೊರಿಯಾದ ಅನೇಕ ಕಂಪನಿಗಳು, ಸಾರ್ವಜನಿಕ ಸಂಸ್ಥೆಗಳು ಅನೇಕ ಕಾಣಿಕೆಗಳನ್ನು ಈತನಿಗೆ ಕೊಡುತ್ತಾರೆ. ಆದರೆ ಈ ವ್ಯಕ್ತಿ ಅದ್ಯಾವುದನ್ನು ತೆಗೆದುಕೊಳ್ಳದೇ ಅವರು ಕೊಟ್ಟ ಬಟ್ಟೆಗಳನ್ನು ತೆಗೆದು ಬಿಸಾಕಿ ತನ್ನ ದೋಣಿಯನ್ನೇರುತ್ತಾನೆ. ಹೀಗೆ ತನ್ನ ದೇಶಪ್ರೇಮದ ಬಗ್ಗೆ ಈತ ನಡೆದುಕೊಂಡ ಬಗೆಯನ್ನು ಮಾಧ್ಯಮಗಳು ಶ್ಲಾಘಿಸುತ್ತವೆ.

ಉತ್ತರಕೊರಿಯಾಕ್ಕೆ ಬಂದ ನಂತರವೂ ತನ್ನ ಕುಟುಂಬ ಸೇರುವ, ತನ್ನ ಮಗಳನ್ನು ಕಾಣುವ ಆಸೆ ಈಡೇರುವುದಿಲ್ಲ. ತನ್ನ ದೇಶದ ಮಿಲಿಟರಿ ಅಧಿಕಾರಿಗಳು ಈತನನ್ನು ಮಿಲಿಟರಿ ವಿಚಾರಣೆಗೊಳಪಡಿಸುತ್ತಾರೆ. ಅನೇಕ ಬಗೆಯಲ್ಲಿ ಹಿಂಸೆ ಕೊಡುತ್ತಾರೆ. ಆತನ ಮಗಳಿಗಾಗಿ ದಕ್ಷಿಣ ಕೊರಿಯಾ ಮಿಲಿಟರಿ ಸೈನಿಕನೊಬ್ಬ ಕೊಟ್ಟಿದ್ದ ಗೊಂಬೆಯನ್ನು ಅನೇಕ ಬಗೆಯಲ್ಲಿ ಅಂತೂ ಕೊನೆಗೂ ಬಡ ಬೆಸ್ತ ಮನೆಗೆ ಮರಳಿ ಕುಟುಂಬದವರ ಜೊತೆ ಸೇರುತ್ತಾನೆ. ಮರುದಿನ ಎಂದಿನಂತೆ ಮೀನು ಹಿಡಿಯಲು ತನ್ನ ದೋಣಿಯ ಬಳಿ ಬಂದಾಗ ಸರ್ಕಾರವು ಆತನ ಮೀನುಗಾರಿಕೆಯ ಪರವಾನಗಿಯನ್ನು ರದ್ದುಮಾಡಿರುವುದು ಗೊತ್ತಾಗುತ್ತದೆ. ತನಗೆ ಗೊತ್ತಿರುವ ಬದುಕಿನ ದಾರಿ ಅದೊಂದೇ ಎಂದು ಗೋಗರೆದರೂ ಜಗ್ಗದ ಮಿಲಿಟರಿ ಅಧಿಕಾರಿಗಳು ಮೀನು ಹಿಡಿಯಲು ದೋಣಿಯನ್ನೇರದಂತೆ ತಡೆಯುತ್ತಾರೆ. ಆದರೆ ಅವೆಲ್ಲವನ್ನು ನಿರ್ಲಕ್ಷಿಸುತ್ತಾ ಮೀನು ಹಿಡಿಯಲು ದೋಣಿಯನ್ನೇರುತ್ತಾನೆ. ಆದೇಶ ಉಲ್ಲಂಘಿಸಿದುದಕ್ಕೆ ಮಿಲಿಟರಿಯವರು ಅವನನ್ನು ಗುಂಡಿಟ್ಟು ಕೊಲ್ಲುತ್ತಾರೆ.

ಇದಿಷ್ಟು ಸಿನಿಮಾಕತೆ.

ದೇಶ ದೇಶಗಳ ನಡುವಿನ ಯುದ್ಧ, ದ್ವೇಷ, ಅಸೂಯೆಗಳು ಜನಸಾಮಾನ್ಯರ ಬದುಕಿನ ಮೇಲೆ ತರುವ ಅವಾಂತರಗಳನ್ನು ಅತ್ಯಂತ ಮಾನವೀಯ ನೆಲೆಯಲ್ಲಿ ನಿರ್ದೇಶಕ ಚಿತ್ರಿಸಿದ್ದಾರೆ. ಚಿತ್ರದ ತಾಂತ್ರಿಕತೆ, ನಿರ್ದೇಶನ ಸಂಕಲನ ಎಷ್ಟು ಅದ್ಭುತವಾಗಿದೆಯೆಂದರೆ ಸಿನಿಮಾ ನೋಡುವಷ್ಟು ಕಾಲ ನಟನೊಬ್ಬ ಕ್ಯಾಮರಾ ಮುಂದೆ ನಟಿಸುತ್ತಿದ್ದಾನೆ. ನಿರ್ದೇಶಕ, ಸಂಕಲನಕಾರರಿಂದ ಈ ಸಿನಿಮಾ ಸಿದ್ಧವಾಗಿದೆ ಎನ್ನುವುದನ್ನೇ ಮರೆಯುವಷ್ಟರ ಮಟ್ಟಿಗೆ ಸಿನಿಮಾ ನೋಡುಗರನ್ನು ತನ್ನ ತೆಕ್ಕೆಗೆ ಸೆಳೆದುಕೊಳ್ಳುತ್ತದೆ. ನಿರ್ದೇಶಕ ತನ್ನ ಇರುವಿಕೆ ತೋರಿಸದಂತೆ ಸಹಜವಾಗಿ ಚಿತ್ರ ನಡೆಯುವಂತೆ ಎಚ್ಚರ ವಹಿಸಿದ್ದಾರೆ. ಉತ್ತಮ ಚಿತ್ರಕಥೆ, ನಿರ್ದೇಶನ, ಸಂಕಲನದ ಒಂದು ಭಾಗವಾದರೆ, ನಟಿಸಿದ ನಟರಲ್ಲಿ ತಾವು ಪಾತ್ರಧಾರಿಗಳಲ್ಲವೇನೋ ಎನ್ನುವಂತೆ ಸಹಜವಾಗಿ ನಟಿಸಿರುವುದು ಉತ್ತಮ ಚಿತ್ರವಾಗಲು ಕಾರಣವಾಗಿದೆ.

**ಕ್ಲಾಷ್**

ಕಂಟ್ರಿ ಫೋಕಸ್–ಈಜಿಪ್ಟ್ ವಿಭಾಗದಲ್ಲಿ ಪ್ರದರ್ಶಿತಗೊಂಡ ಯುದ್ಧ ಕೇಂದ್ರಿತ ಚಿತ್ರವಿದು. ಮೊಹಮ್ಮದ್ ಡಯಬ್ ನಿರ್ದೇಶನದ ಚಿತ್ರ. ಈಜಿಪ್ಟ್‌ನ ಕ್ರಾಂತಿ ನಡೆದ ಎರಡು ವರ್ಷಗಳ ನಂತರ ಇಸ್ಲಾಮಿ ಅಧ್ಯಕ್ಷ, ಮೋರ್ಸಿಯ ಪದಚ್ಯುತಿಯ ಹಿನ್ನೆಲೆಯಲ್ಲಿ ನಡೆದ ಹಿಂಸಾತ್ಮಕ ಪ್ರತಿಭಟನೆಯ ಘಟನೆಯ ವಿವರಗಳನ್ನೊಳಗೊಂಡ ಚಿತ್ರ. ಈ ಚಿತ್ರಕ್ಕೂ ಮೂಲಕಥಾವಸ್ತು ಯುದ್ಧದ ಹಿನ್ನೆಲೆಯೇ. ಸಿನಿಮಾದ ಪ್ರಾರಂಭದಲ್ಲಿ ನಿರ್ದೇಶಕ ಹೇಳುವಂತೆ ಹಿಂಸಾತ್ಮಕ ಪ್ರತಿಭಟನೆಯ ಒಂದು ದಿನದ ಘಟನೆಯೇ ಕಥಾವಸ್ತು.

ಮಿಲಿಟರಿ ಪೊಲೀಸ್‌ನವರು ಹಿಂಸಾತ್ಮಕ ಪ್ರತಿಭಟನೆಯನ್ನು ಹತ್ತಿಕ್ಕುವ ಪ್ರಯತ್ನದಲ್ಲಿದ್ದಾಗ ಅವರ ಕಣ್ಣಿಗೆ ಇದೆಲ್ಲವನ್ನು ವೀಡಿಯೋ ಮಾಡುತ್ತಿದ್ದ ಅಮೇರಿಕ ಪತ್ರಿಕೆಯ ಹಾಗು ಸ್ಥಳೀಯ ವರದಿಗಾರರು ಕಣ್ಣಿಗೆ ಬೀಳುತ್ತಾರೆ. ಕೂಡಲೇ ಅವರನ್ನು ಹತ್ತಿರದ ಪೋಲೀಸ್ ಟ್ರಕ್‌ನೊಳಗಡೆ ಬಲವಂತವಾಗಿ ಹತ್ತಿಸುತ್ತಾರೆ. ನಾವು ಹೋರಾಟಗಾರರಲ್ಲ ವರದಿಗಾರರು ನಮ್ಮನ್ನು ಬಿಟ್ಟುಬಿಡಿ ಎಂದು ಗೋಗರೆದರೂ ಅವರನ್ನು ಬಲವಂತವಾಗಿ ಟ್ರಕ್‌ನೊಳಗಡೆ ತುಂಬುತ್ತಾರೆ. ಅದೇ ವೇಳೆಗೆ ಟ್ರಕ್‌ನ ಹತ್ತಿರ ದೊಂಬಿಯಾಗುತ್ತಿದ್ದಂತೆ ದೊಂಬಿಯ ಗುಂಪಿನಲ್ಲಿದ್ದ ಇಬ್ಬರು ಯುವಕರನ್ನು ಅದೇ ಪೋಲೀಸ್ ಟ್ರಕ್‌ನೊಳಗಡೆ ತಳ್ಳುತ್ತಾರೆ. ಗಲಭೆ ತೀವ್ರ ರೂಪ ಪಡೆದಂತೆಲ್ಲ ಅತ್ತಿತ್ತ ಕುತೂಹಲದಿಂದ ನೋಡುತ್ತಿದ್ದ ವಯಸ್ಸಾದ ವ್ಯಕ್ತಿಯನ್ನು ಅದೇ ಟ್ರಕ್‌ನೊಳಗಡೆ ತುಂಬುತ್ತಾರೆ. ಅದೇ ವೇಳೆಗೆ ಅಲ್ಲಿಗೆ ತನ್ನ ತಂದೆಯ ಜೊತೆ ಬಂದ ಶಾಲಾಬಾಲಕನನ್ನು ಅವರ ತಂದೆಯ ಜೊತೆಗೆ ಟ್ರಕ್‌ನೊಳಗಡೆ ತಳ್ಳಿ ಬಾಗಿಲು ಹಾಕುತ್ತಾರೆ. ನನ್ನ ಮಗನನ್ನು ಯಾಕೆ ಟ್ರಕ್‌ನಲ್ಲಿಟ್ಟಿದ್ದೀರಿ ಎಂದು ಅವಾಚ್ಯ ಶಬ್ದಗಳಿಂದ ಬಯ್ಯುತ್ತಿದ್ದ ಮಗುವಿನ ತಾಯಿಯನ್ನು ಅವಳೊಬ್ಬಳು ಹೆಣ್ಣೆಂದು ಪರಿಗಣಿಸದೇ ಆ ಟ್ರಕ್‌ನೊಳಗಡೆಯೇ ತಳ್ಳುತ್ತಾರೆ. ಕ್ರಮೇಣ ಆ ಟ್ರಕ್ಕಿನಲ್ಲಿ ಶಾಲಾಬಾಲಕ ಹಾಗು ಇಬ್ಬರು ಹೆಣ್ಣುಮಕ್ಕಳು ಜೊತೆಗೆ 20ಕ್ಕೂ ಹೆಚ್ಚು ಯುವಕರು ಮುದುಕರು ನಾನಾ ಬಗೆಯ ಹೋರಾಟಗಾರರಿಂದ ಟ್ರಕ್ ತುಂಬಿಹೋಗಿ ನಿಲ್ಲಲು ಸ್ಥಳವಿಲ್ಲದಂತಾಗುತ್ತದೆ.

ಬಿಸಿಲಿನ ತಾಪ, ಒಳಗಡೆ ಸೆಕೆ, ಚಿಕ್ಕ ಟ್ರಕ್‌ನಲ್ಲಿ ನಿಲ್ಲಲು ಜಾಗವಿಲ್ಲದಂತೆ ತುಂಬಿದ್ದ ವಿವಿಧ ಜಾತಿ, ವರ್ಗಗಳ ವಯೋಮಾನದ ಜನರು ಒಳಗಡೆಯಿಂದ ಇವರೆಲ್ಲ 'ನಮ್ಮನ್ನು ಬಿಡಿ' ಎಂದು ಕೂಗಿಕೊಂಡಂತೆಲ್ಲ ಮಿಲಿಟರಿ ಪೋಲೀಸ್ ಅಧಿಕಾರಿಗಳು 'ಗಲಾಟೆ ಮಾಡಿದರೆ ಗುಂಡು ಹಾರಿಸುತ್ತೇವೆ' ಎಂದು ಬೆದರಿಸುತ್ತಾರೆ.

ಹೊರಗಡೆ ಗಲಾಟೆ ತೀವ್ರ ಸ್ವರೂಪ ಪಡೆದಂತೆಲ್ಲ ಟ್ರಕ್ಕಿನ ಒಳಗಡೆಯಿದ್ದ ವಿವಿಧ ವಯೋಮಾನದವರಲ್ಲೂ ಆಕ್ರೋಶ ಹೆಡೆಯಾಡತೊಡಗುತ್ತದೆ. ತಮ್ಮತಮ್ಮಲ್ಲೇ ಮಾತನಾಡಿಕೊಳ್ಳುತ್ತಾ ತಮ್ಮವರೊಬ್ಬರು ಯಾರಾದರು ಕಂಡಾರೆಯೇ ಎಂದು ಟ್ರಕ್‌ನ ಕಿಂಡಿಗಳಿಂದ ನೋಡುತ್ತಾ ಬಿಡುಗಡೆಗೆ ಹಾತೊರೆಯುತ್ತಾರೆ. ಕ್ರಮೇಣ ಇವರಲ್ಲಿಯೇ ಎರಡು ಗುಂಪುಗಳಾಗಿ ಮೊರ್ಸಿಯ ಪರ, ವಿರೋಧದ ಗುಂಪುಗಳಾಗಿ ಪರಸ್ಪರ ಹೊಡೆದಾಟವಾಗುತ್ತದೆ. ಆ ಗುಂಪಿಗೆ ನಾಯಕನೊಬ್ಬನನ್ನು ಮಾಡಿಕೊಂಡು ಅವನೇಳಿದಂತೆಯೇ ಎಲ್ಲರೂ ಕೇಳಬೇಕೆಂಬ ಆಜ್ಞೆಯನ್ನು ಯುವಕನೊಬ್ಬ ತಿರಸ್ಕರಿಸುತ್ತಾನೆ. ಹೊರಗಡೆ ಗಲಭೆ, ಒಳಗಡೆ ಗಲಭೆ ಜಾಸ್ತಿಯಾದಂತೆಲ್ಲ ಹೆಣ್ಣುಮಕ್ಕಳಿಬ್ಬರು ಆತಂಕಕ್ಕೊಳಗಾಗುತ್ತಾರೆ. ಒಬ್ಬೊಬ್ಬರ ದೃಷ್ಟಿಕೋನ ಒಂದೊಂದು ರೀತಿ, ಎಲ್ಲರೂ ಹೊರಗಡೆ ನಡೆಯುತ್ತಿದ್ದ ಮುಷ್ಕರದವರನ್ನು ತಮ್ಮನ್ನು ಈ ಟ್ರಕ್‌ನಿಂದ ಬಿಡುಗಡೆ ಮಾಡಲು ಒತ್ತಾಯಿಸುತ್ತಾರೆ.



ಮುಷ್ಕರನಿರತ ಗುಂಪು ಇವರನ್ನು ತಮ್ಮ ವಿರೋಧಿಗಳೆಂದೇ ಭಾವಿಸಿ ಒಮ್ಮೆಲೆ ಕಲ್ಲುತೂರಾಟ ನಡೆದು ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ.

ಟ್ರಕ್‌ನ ಒಳಗಡೆಯಿದ್ದ ಬುದ್ಧಿಜೀವಿ ಪತ್ರಕರ್ತನೊಬ್ಬ ತಮ್ಮ ವಾಚ್ ಮಾದರಿಯ ಮೊಬೈಲ್‌ನಿಂದ ನಡೆಯುತ್ತಿರುವ ಸಕಲ ವಿದ್ಯಮಾನವನ್ನು ತಮ್ಮ ಪತ್ರಿಕೆಗೆ ರವಾನಿಸುತ್ತಿರುವಾಗ ಟ್ರಕ್‌ನಲ್ಲಿದ್ದ ಒಬ್ಬ ವ್ಯಕ್ತಿ ಇವರನ್ನು ಸಂಶಯಾತ್ಮಕವಾಗಿ ನೋಡಿ ಒಮ್ಮೆಲೆ ಅವರಿಬ್ಬರ ಮೇಲೆ ಆಕ್ರಮಣ ಮಾಡಲು ತೊಡಗುತ್ತಾರೆ. ಕ್ರಮೇಣ ಪರಿಸ್ಥಿತಿ ತಹಬಂದಿಗೆ ಬಂದಾಗ ಉರಿಬಿಸಿಲಿನಲ್ಲಿ ಟ್ರಕ್‌ನೊಳಗಡೆ ಇದ್ದ ಎಲ್ಲರಿಗೂ ಉಸಿರುಕಟ್ಟುವಂತಾಗಿ ನೀರನ್ನು ಕೊಡಿ ಎಂದು ಮಿಲಿಟರಿ ಪೋಲೀಸ್‌ರವರನ್ನು ಕೇಳಿದರೆ ಒಂದೇ ಬಾಟಲ್ ನೀರನ್ನು ಇವರ ಟ್ರಕ್‌ನೊಳಗಡೆ ಎಸೆಯುತ್ತಾರೆ. ಎಲ್ಲರಿಗೂ ತೀವ್ರ ಬಾಯಾರಿಕೆ, ದಣಿವು. ಪೋಲೀಸರೆಸೆದ ಒಂದೇ ಬಾಟಲಿ ನೀರನ್ನು ಎಲ್ಲರೂ ಸರದಿ ಪ್ರಕಾರ ಒಂದೊಂದೇ ಗುಟುಕು ಕುಡಿಯುತ್ತಾರೆ. ಕೂಡಲೇ ಗುಂಪಿನಲ್ಲಿದ್ದ ಒಬ್ಬರಿಗೆ ಸಕ್ಕರೆ ಖಾಯಿಲೆಯಿಂದಾಗಿ ಮೂತ್ರ ಮಾಡಬೇಕೆಂದು ಪೋಲೀಸ್‌ನವರ ಮೊರೆಯಿಡುತ್ತಾರೆ. ಪೊಲೀಸರು ಇದಕ್ಕೆ ಒಪ್ಪುವುದಿಲ್ಲ. ಕಡೆಗೆ ಒತ್ತಾಯಪೂರ್ವಕವಾಗಿ ಬಾಗಿಲು ತೆಗೆಸಿ ಮೂತ್ರವಿಸರ್ಜನೆಗೆ ಹೊರಗೆ ಕಳಿಸುತ್ತಾರೆ. ಹೊರಗಡೆ ಪ್ರಕ್ಷುಬ್ಧ ವಾತಾವರಣ, ಕಲ್ಲುಗಳಿಂದ ಪ್ರತಿಭಟನಾ ನಿರತರು ದಾಳಿ ಮಾಡುತ್ತಿರುತ್ತಾರೆ. ಆ ಘಟನೆಯಲ್ಲಿ ಕೆಳಗಡೆ ಇಳಿದ ವೃದ್ಧನಿಗೆ ಏಟು ಬಿದ್ದು ಅಲ್ಲಿಯೇ ಒರಗಿ ಬೀಳುತ್ತಾನೆ. ಅವನ ಮಗಳು ಟ್ರಕ್‌ನಲ್ಲಿಯೇ ಕೂಗಾಡುತ್ತಾ ಅಳುತ್ತಿರುತ್ತಾಳೆ. ಟ್ರಕ್‌ನಲ್ಲಿ ಒಮ್ಮೆಲೆ ಗಲಾಟೆ ಜಾಸ್ತಿಯಾಗಿ ಮಿಲಿಟರಿ ಪೋಲೀಸರು ಟ್ರಕ್‌ನ ಬಾಗಿಲನ್ನು ತೆರೆದು ಬಂದೂಕು ತೋರಿಸಿ ಹೆದರಿಸಿದಾಗ ಪತ್ರಕರ್ತನೊಬ್ಬ ನಮ್ಮನ್ನೆಲ್ಲ ಬಂಧಿಸಿರುವುದರ ಬಗ್ಗೆ ಪ್ರಶ್ನಿಸುತ್ತಾನೆ. ಅವನನ್ನು ಆ ಟ್ರಕ್‌ನಲ್ಲಿಯ ಕಂಬಿಗೆ ಕೋಳಹಾಕಿ ಬಂಧಿಸುತ್ತಾರೆ. ಮುಂದೆ ಊರಿನಲ್ಲಿ ಪ್ರಕ್ಷುಬ್ಧತೆ ಹೆಚ್ಚಿದಂತೆಲ್ಲಾ ಅವರಲ್ಲೊಬ್ಬ ವ್ಯಾನಿನ ಕ್ಯಾಬಿನಲ್ಲಿ ಕುಳಿತು ಟ್ರಕ್ ಅನ್ನು ಚಲಾಯಿಸತೊಡಗುತ್ತಾನೆ. ಇದು ಸ್ಥೂಲಕಥೆ.

ಪ್ರಕ್ಷುಬ್ಧ ಪರಿಸ್ಥಿತಿ ಇರುವ ಈಜಿಪ್ಟಿನ ಕೈರೋವೊಂದರಲ್ಲಿ ಒಂದು ದಿನ ನಡೆದ ಹಿಂಸಾಚಾರವನ್ನು ಕೇಂದ್ರವಾಗಿರಿಸಿಕೊಂಡು ಮನುಷ್ಯ ಸ್ವಭಾವದ ಅನೇಕ ಬಗೆಗಳನ್ನು ಪರಿಣಾಮಕಾರಿಯಾಗಿ ಅನಾವರಣಗೊಳಿಸುತ್ತಾ ಈ ಚಿತ್ರ ಸಾಗುತ್ತದೆ. ಈ ಎರಡು ಚಿತ್ರಗಳು ಯುದ್ಧ, ಜನಾಂಗೀಯ ದ್ವೇಷ, ಮಿಲಿಟರಿ ಅಧಿಕಾರಿಗಳ ದರ್ಪ ಇವೆಲ್ಲವೂ ಮುಗ್ಧಜನರ ಬದುಕಿನ ಮೇಲೆ ಮಾಡುವ ಪರಿಣಾಮ ಎಲ್ಲವನ್ನು ಮನಮುಟ್ಟುವಂತೆ ತಲುಪಿಸುತ್ತದೆ.

ಈ ಮೇಲಿನ ಎರಡೂ ಚಿತ್ರಗಳನ್ನು ವೀಕ್ಷಿಸುತ್ತಿರುವ ಪ್ರೇಕ್ಷಕನಿಗೆ ತಾನೊಂದು ನಿರ್ದೇಶಕ ನಿರ್ದೇಶಿಸುತ್ತಿರುವ ಕ್ಯಾಮರಾ ಮುಂದೆ ನಟರು ಅಭಿನಯಿಸುತ್ತಿರುವ ಚಿತ್ರ ನೋಡುತ್ತಿದ್ದೇವೆ ಎನ್ನುವುದನ್ನೇ ಮರೆಸುವಂತೆ ಚಿತ್ರದ ನಿರ್ದೇಶನ, ತಾಂತ್ರಿಕತೆ, ನಟನೆ ಇದೆ. ಈ ಮೇಲಿನೆರಡೂ ಚಿತ್ರಗಳು ಪ್ರದರ್ಶನದಲ್ಲಿ ಮೆಚ್ಚುಗೆಯಾದ ಚಿತ್ರಗಳು.

ಈ ಸಲದ ಚಿತ್ರೋತ್ಸವದ ವಿಶೇಷವೆಂದರೆ 31 ಮಹಿಳಾ ನಿರ್ದೇಶಕಿಯರು ನಿರ್ದೇಶಿಸಿದ ಸಿನಿಮಾಗಳು ಪ್ರದರ್ಶಿತಗೊಂಡಿದ್ದು. ಬಯೋಫಿಕ್ಚರ್ಸ್ ವಿಭಾಗದಲ್ಲಿ ಪ್ರದರ್ಶಿತಗೊಂಡ ಜರ್ಮನ್ ದೇಶದ ಚಿತ್ರ. (**ಇನ್ ಲವ್ ವಿತ್ ಲೂ ಎ ಫಿಲಾಸಫರ್ ಲೈಫ್**) ಸ್ತ್ರೀಕೇಂದ್ರಿತ ಜರ್ಮನ್ ದೇಶದ ಚಿತ್ರ. ನಿರ್ದೇಶಕಿ ಕಾರ್ಡುಲಾ ಕಬ್ಲಿಟ್ಜ. ಪ್ರಸಿದ್ಧ ಮನಶ್ಶಾಸ್ತ್ರಜ್ಞ ಕಥಾನಾಯಕಿ ತನ್ನ ಇಳಿವಯಸ್ಸಿನಲ್ಲಿ ಆತ್ಮಕಥೆಯನ್ನು ತರುಣ ಲೇಖಕನೊಬ್ಬನಿಗೆ ಹೇಳುತ್ತಾ ಬರೆಯಿಸುವ ಪ್ರಯತ್ನ ಮಾಡುತ್ತಾಳೆ. ಕಥಾನಾಯಕಿ ತನ್ನ ಬದುಕಿನ ಘಟನೆಗಳನ್ನು ತನ್ನ ಬದುಕಿನಲ್ಲಿ ಬಂದು ಹೋದ ಗಂಡಸರ ಜೊತೆಗಿನ ಸಂಬಂಧಗಳನ್ನು ಫ್ಲಾಷ್ ಬ್ಯಾಕ್ ತಂತ್ರದ ಮೂಲಕ ಹೇಳುತ್ತಾ ಹೋಗುತ್ತಾಳೆ.

ಈಕೆಯ ಸ್ನೇಹ ಬಯಸಿ ಬರುವ ಪುರುಷರೆಲ್ಲ ಇವಳ ಜೊತೆ ದೇಹವನ್ನು ಹಂಚಿಕೊಳ್ಳುವ ಅಪೇಕ್ಷೆಯಿಂದಲೇ ಬರುತ್ತಾರೆ. ಈಕೆ ಬಯಸುವ ಅಪ್ಪಟ ಸ್ನೇಹವನ್ನು ಕೊಡುವವರು ಒಬ್ಬರೂ ಈಕೆಯ ಬದುಕಿನಲ್ಲಿ ಬರುವುದೇ ಇಲ್ಲ. ಹೆಣ್ಣುಗಂಡಿನ ಮಧ್ಯೆ ಪವಿತ್ರ ಸ್ನೇಹ ಸಾಧ್ಯವಿಲ್ಲವೇ? ಎಂಬ ಪ್ರಶ್ನೆ ಮೂಡುತ್ತದೆ. ಮದುವೆಯಾಗುವುದರ ಮೂಲಕ ಹೆಣ್ಣು ಗಂಡಿನ ಅಧೀನಳಾಗಿರಬೇಕಾಗುತ್ತದೆ. ಪ್ರತಿಯೊಬ್ಬ ಪುರುಷನು ಹೆಣ್ಣನ್ನು ತನ್ನ ಅಧೀನಳನ್ನಾಗಿ ಮಾಡಿಕೊಳ್ಳುವುದನ್ನೇ ಅಪೇಕ್ಷಿಸುತ್ತಾನೆ. ಆದುದರಿಂದ ನಾನು ಮದುವೆಯನ್ನು ನಿರಾಕರಿಸುತ್ತೇನೆ ಎಂದು ದಿಟ್ಟವಾಗಿ ಹೇಳುವ ಕಥಾನಾಯಕಿ ತನ್ನ ಅಸ್ತಿತ್ವಕ್ಕಾಗಿ, ಸ್ವಾತಂತ್ರ್ಯಕ್ಕಾಗಿ ಹಂಬಲಿಸುವ, ಆ ಮೂಲಕ ತನ್ನ ಅಸ್ಮಿತೆಯನ್ನು ಕಂಡುಕೊಳ್ಳುವ ಹೆಣ್ಣಿನ ತಳಮಳ, ತಾಕಲಾಟಗಳು ಈ ಚಿತ್ರದಲ್ಲಿ ಮೂಡಿಬಂದಿವೆ.

ಚಿತ್ರದ ತಾಂತ್ರಿಕತೆ ಬಹಳ ಮೆಚ್ಚುವಂತಹುದು. ನಾಯಕಿ ತನ್ನ ಬದುಕಿನ ಹಳೆಯ ನೆನಪುಗಳನ್ನು ನೆನಪಿಸಿಕೊಳ್ಳುವಾಗ ತನ್ನ ಬಾಲ್ಯ, ಯೌವನ, ಯೌವನದಲ್ಲಿ ತಾನು ಕಳೆದ ದಿನಗಳು ಸ್ಥಳಗಳು ವ್ಯಕ್ತಿಗಳ ಬಗ್ಗೆ ಹೇಳುವಾಗ ಹಳೆಯಕಾಲದೆಲ್ಲವೂ ಸ್ತಬ್ಧ, ಸ್ಥಿರಚಿತ್ರಗಳು!! ಆ ಸ್ಥಿರಚಿತ್ರದಲ್ಲಿ ನಿರ್ದಿಷ್ಟ ಪಾತ್ರವೊಂದೇ ಚಲಿಸುವ ತಂತ್ರ ಪರಿಣಾಮಕಾರಿಯಾಗಿ ಮೂಡಿಬಂದಿದೆ.

**ಗ್ರೀಟಿಂಗ್ಸ್ ಫ್ರಂ ಪುಕುಶಿಮಾ**

ಸಿನಿಮಾ ಆಫ್ ದಿ ವರ್ಲ್ಡ್ ವಿಭಾಗದಲ್ಲಿ ಪ್ರದರ್ಶಿತಗೊಂಡ ಜರ್ಮನ್ ಚಿತ್ರ. ಡೋರಿಸ್ ಡೊರ್ರಿ ಜರ್ಮನ್ ದೇಶದ ಮಹಿಳೆ ನಿರ್ದೇಶಿಸಿದ ಸಿನಿಮಾ. 2011ರಲ್ಲಿ ಪುಕೊಶಿಮಾದಲ್ಲಿ ನಡೆದ ಅನಾಹುತ ಹಾಗು ಅನಾಹುತದ ಆಘಾತದಿಂದ ಬದುಕಿ ಉಳಿದವರ ಕಥೆ. ಇಂತಹವರಿಗೆ ಸಾಂತ್ವನ ಹೇಳುವ, ಬದುಕಿನ ಬಗ್ಗೆ ಮತ್ತೆ ಆಸಕ್ತಿ ಉಳಿಸುವಂತೆ ಮಾಡುವ ಸಾಮಾಜಿಕ ಸಂಘಟನೆಯೊಂದರ ಸಕ್ರಿಯ ಸದಸ್ಯೆಯಾಗಿ ಜರ್ಮನ್ನಿನ ಮೇರಿ ಎಂಬ ಯುವತಿಯೊಬ್ಬಳು ಪುಕೋಶಿಮಾಗೆ ಬರುತ್ತಾಳೆ.

ಸರ್ಕಾರವು ಘೋಷಿಸಿರುವ ನಿಷೇಧಿತ ಪ್ರದೇಶದಲ್ಲಿಯೇ ತನ್ನ ಅಳಿದುಳಿದ ಮನೆಯ ಅವಶೇಷಗಳ ಮಧ್ಯದಲ್ಲಿಯೇ ಹತಾಶೆಯಿಂದ ಬದುಕು ಕಟ್ಟಿಕೊಳ್ಳುವ ಪ್ರಯತ್ನ ಕಥಾನಾಯಕಿ ಸಾತೋನಿಯದು. ಇವಳ ಜೊತೆ ಹಲವು ದಿನಗಳನ್ನು ಮೇರಿ ಕಳೆಯುತ್ತಾ ಅವಳ ಮನಸ್ಸಿನ ಬೇಗುದಿಯನ್ನು ಹತಾಶೆಗಳನ್ನು ಮರೆಯಿಸುವ ಪ್ರಯತ್ನ ಮಾಡುತ್ತಾಳೆ. ಉತ್ಸಾಹದ ಬುಗ್ಗೆಯಾದ ಮೇರಿ ಸ್ವಲ್ಪ ಮಟ್ಟಿಗೆ ಸಾತೋನಿಯನ್ನು ಅವಳ ದುಃಖಗಳಿಂದ ಹೊರಬಂದು ಬದುಕಿನ ಬಗ್ಗೆ ಆಸಕ್ತಿ ಮೂಡಿಸುವಲ್ಲಿ ಸಫಲಳೂ ಆಗುತ್ತಾಳೆ. ಮಧ್ಯೆ ಮಧ್ಯೆ ಅವರ ಭೂತಕಾಲದ ಅನೇಕ ಘಟನೆಗಳನ್ನು ಮೆಲುಕು ಹಾಕುತ್ತಾ ಇಬ್ಬರೂ ಜೊತೆಗೆ ಕಳೆದ ಕೆಲವು ಘಟನೆಗಳನ್ನು ಸ್ಮರಿಸಿಕೊಳ್ಳುತ್ತಾ ಭೂತಕಾಲದ ತಮ್ಮ ನೆನಪುಗಳಿಗೆ ಜಾರುತ್ತಾರೆ. ಅವಳ ಹಳೆಯ ಬದುಕಿನ ಸುಂದರ ಹುಡುಗಿ ಭೂತದ ರೂಪದಲ್ಲಿ ಮತ್ತೆ ಮತ್ತೆ ಮರದ ಹಿಂದಿನಿಂದ ಹಾಜರಾಗುವುದು, ಆ ಮರಕ್ಕೆ ಸಾತೋನಿ ನೇಣು ಹಾಕಿಕೊಳ್ಳುವ ಪ್ರಯತ್ನದಲ್ಲಿ ವಿಫಲಳಾಗುವುದು, ಅಂತಿಮವಾಗಿ ಈ ಬಗೆಯ ಕೆಲಸ ಅಥವಾ ಸೇವೆಗೆ ತಾನು ತಕ್ಕವಳಲ್ಲವೆಂದು ಭಾವಿಸಿ ತಾನು ಅಲ್ಲಿಂದ ಹೊರಡುವ ತೀರ್ಮಾನ ತೆಗದುಕೊಳ್ಳುತ್ತಾಳೆ. ಮೇರಿ ತಾನು ಮರಳಿ ಹೋಗುವಾಗ ಆ ಮರದ ಒಂದು ಕೊಂಬೆಯನ್ನು ಕತ್ತರಿಸಿ ಹೋಗುವುದು ಇಲ್ಲೆಲ್ಲ ನಿರ್ದೇಶಕರ ಜಾಣ್ಮೆ ಕಂಡುಬರುತ್ತದೆ.

ಜಪಾನಿನಲ್ಲಿ ಅನೂಚಾನವಾಗಿ ನಡೆದು ಬಂದ ಸಂಪ್ರದಾಯಗಳು, ರೀತಿ ರಿವಾಜುಗಳು, ಅತಿಥಿ ಸತ್ಕಾರ ಮಾಡುವುದರಲ್ಲಿನ ಅವಳ ಕಾಳಜಿಯನ್ನು ನಿರ್ದೇಶಕರು ಚೆನ್ನಾಗಿ ನಿರೂಪಿಸಿದ್ದಾರೆ.

ಡಾಟರ್, ಸ್ಟೂಡೆಂಟ್, ಎ ಕಾನ್ಸ್‌ಪಿರೆಸಿ ಆಫ್ ಫೈಯ್ತ್ ಈ ಮೂರು ಸಿನಿಮಾಗಳು ಸ್ವಲ್ಪಮಟ್ಟಿಗೆ ಧರ್ಮಕೇಂದ್ರಿತವಾದವುಗಳು. ಧರ್ಮದ ಹಿಡಿತ, ಧರ್ಮದ ಮೇಲಿನ ಅತಿಯಾದ ನಂಬಿಕೆ, ಧರ್ಮ ನಿರೂಪಿಸುವ ಕೆಟ್ಟದ್ದು ಮತ್ತು ಒಳ್ಳೆಯದರ ಬಗೆಗಿನ ವ್ಯಾಖ್ಯಾನದಂತಿವೆ.



**ಎ ಕಾನ್ಸ್‌ಪಿರೆಸಿ ಆಫ್ ಫೈಯ್ತ್**



ಸಿನಿಮಾ ಆಫ್ ದಿ ವರ್ಲ್ಡ್ ವಿಭಾಗದಲ್ಲಿ ಪ್ರದರ್ಶಿತಗೊಂಡ ಡೆನ್ಮಾರ್ಕ್ ದೇಶದ ಹಾನ್ಸ್ ಪೀಟರ್ ಮೊಲ್ಯಾಂಡ್ ನಿರ್ದೇಶಿಸಿದ ಚಿತ್ರ. ಅತಿ ಬುದ್ಧಿವಂತ ಸರಣಿ ಕೊಲೆಗಾರನೊಬ್ಬನನ್ನು ಹಲವು ಪ್ರಯತ್ನಗಳ ಮೂಲಕ ಕಂಡು ಹಿಡಿಯುವುದು ಕತೆಯ ಮುಖ್ಯ ಎಳೆಯಾದರೂ ಸರಣಿ ಕೊಲೆಗಾರನಾಗಿದ್ದ ವ್ಯಕ್ತಿ ಧಾರ್ಮಿಕವಾಗಿ ಮಾನಸಿಕ ತೊಳಲಾಟದಲ್ಲಿದ್ದಾನೆ. ಚಿಕ್ಕವನಿದ್ದಾಗಲೇ ಈ ಧಾರ್ಮಿಕ ತೊಳಲಾಟ ಅವನನ್ನು ಬಾಧಿಸುತ್ತದೆ. ದೇವರು ದಯಾಮಯನು, ಶಿಷ್ಟರನ್ನು ರಕ್ಷಿಸುತ್ತಾನೆ. ದುಷ್ಟರನ್ನು ನಾಶ ಮಾಡುತ್ತಾನೆ ಎನ್ನುವುದು ನಿಜವೇ? ಹಾಗಿದ್ದಲ್ಲಿ ದೇವರು ದುಷ್ಟರನ್ನು ಖಂಡಿತವಾಗಿಯು ಶಿಕ್ಷಿಸುತ್ತಾನೆಯೇ ಎಂಬ ಜಿಜ್ಞಾಸೆಯವನು. ಚಿಕ್ಕಮಕ್ಕಳನ್ನು ಅಪಹರಿಸಿಕೊಂಡು ಬಂದು ಒಂದು ಸಮುದ್ರ ಮಧ್ಯದಲ್ಲಿನ ಅಜ್ಞಾತಸ್ಥಳದಲ್ಲಿ ಇಟ್ಟು ಅವರಿಗೆ ಅನೇಕ ಬಗೆಯ ಕಿರುಕುಳ ನೀಡುತ್ತಾನೆ. ಆ ಮಕ್ಕಳು ದೇವರಲ್ಲಿ ಪ್ರಾರ್ಥಿಸುವಂತೆ ಮಾಡುತ್ತಾನೆ. ಮಕ್ಕಳು ದೇವರನ್ನು ಪ್ರಾರ್ಥಿಸುತ್ತಿರುವಾಗ ನಿಮ್ಮನ್ನು ದಯಾಮಯನಾದ ಆ ದೇವರು ಕಾಪಾಡುತ್ತಾನಾ ಎಂದು ಪ್ರಶ್ನಿಸುತ್ತಾ ಅನೇಕರನ್ನು ಕೊಲ್ಲುತ್ತಾನೆ.

ನೋಡಲು ಸುಂದರನಾಗಿಯೂ ಅಮಾಯಕನಂತೆಯೂ ಕಾಣುವ ಈತ ವಿಕೃತ ಮನಸ್ಸಿನವನು. ಈಗಾಗಲೇ ಅನೇಕರನ್ನು ಕೊಲೆಗೈದು ಈ ಕಸುಬಿನಲ್ಲಿ ಪರಿಣತಿ ಸಾಧಿಸಿದ್ದಾನೆ. ಹೀಗೆ ಅಪಹರಿಸಲ್ಪಟ್ಟ ಮಗುವೊಂದು ತನ್ನ ಪರಿಸ್ಥಿತಿಯನ್ನು ಒಂದು ಚಿಕ್ಕ ಕಾಗದದ ತುಂಡಿನಲ್ಲಿ ತಮ್ಮನ್ನು ರಕ್ಷಿಸಬೇಕೆಂದು ಬರೆದು ಬಾಟಲಿಯೊಳಗಡೆ ಇಟ್ಟು ಬಿಗಿಯಾಗಿ ಬಿರುಡೆಯನ್ನು ಹಾಕಿ ಸಮುದ್ರದಲ್ಲಿ ಹಾಕಿರುತ್ತಾಳೆ. ಆ ಬಾಟಲು ಹಲವು ತಿಂಗಳುಗಳವರೆಗೆ ನೀರಿನಲ್ಲಿ ತೇಲುತ್ತಾ ಬಂದು ಡ್ಯಾನಿಷ್ ಪೋಲೀಸರ ಕೈಗೆ ಸಿಕ್ಕುತ್ತದೆ. ಬಾಟಲಿಯಲ್ಲಿದ್ದ ಅಸ್ಪಷ್ಟವಾಗಿರುವ ಪೇಪರಿನಲ್ಲಿ ಬರೆದಿರುವುದನ್ನು ಗುರುತಿಸಿ ಓದಿ ಪತ್ತೆ ಕಾರ್ಯಕೈಗೊಳ್ಳುತ್ತಾರೆ. ಅಂತಿಮವಾಗಿ ಮಕ್ಕಳನ್ನು ರಕ್ಷಿಸಿ ಆ ಕೊಲೆಗಾರನನ್ನು ಮುಗಿಸುತ್ತಾರೆ. ಅಂತಿಮವಾಗಿ ದುಷ್ಟರಿಗೆ ಶಿಕ್ಷೆಯಾಗುತ್ತದೆ. ಚಿತ್ರಕಥೆಯನ್ನು ನಿರೂಪಿಸಿರುವ ಬಗೆ ವಿಶಿಷ್ಟವಾಗಿದೆ. ಸಿನಿಮಾ ಪ್ರಾರಂಭದಿಂದ ಹಿಡಿದು ಕೊನೆಯವರೆಗೆ ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವಲ್ಲಿ ಸಫಲವಾಗುತ್ತದೆ.

**ಸ್ಟೂಡೆಂಟ್**

ರಷ್ಯಾ ದೇಶದ ಕಿರಿಲ್ ಸೆರೆಬ್ರಿನಿಕೋವ್ ನಿರ್ದೇಶಿಸಿದ ಚಿತ್ರ. ಬಾಲ್ಯದಿಂದಲೂ ಧಾರ್ಮಿಕ ಭಾವನೆ ಬೆಳೆಸಿಕೊಂಡು ಧರ್ಮದ ಬಗ್ಗೆ ಅತಿಯಾದ ನಂಬಿಕೆ ಇರುವ ಸೈಕೊಪಾತ್ ಹುಡುಗನೊಬ್ಬನ ಕಥೆ.

ಸದಾ ತನ್ನ ಜೇಬಿನಲ್ಲಿ ಬೈಬಲ್‌ನ ಚಿಕ್ಕ ಪುಸ್ತಕವೊಂದನ್ನಿಟ್ಟುಕೊಂಡು ಅದರಲ್ಲಿ ದೇವರು ಹೇಳಿರುವ ಎಲ್ಲ ಸಾಲುಗಳನ್ನು, ಸಂಗತಿಗಳನ್ನು ಚರ್ಚಿನಲ್ಲಿ ಹೇಳುತ್ತಾ ತನ್ನ ತಾಯಿ, ಸಹಪಾಠಿಗಳು, ಪಾದ್ರಿ ಇವರನ್ನೆಲ್ಲ ತಬ್ಬಿಬ್ಬುಗೊಳಿಸುತ್ತಾನೆ. ಶಾಲೆಗಳಲ್ಲಿ ಲೈಂಗಿಕ ಶಿಕ್ಷಣ ಹೇಳಿಕೊಡಬಾರದು, ಮಂಗನಿಂದ ಮಾನವನಾಗಿಲ್ಲ, ದೇವರು ಸೃಷ್ಟಿಸಿದನೆಂದು ತರಗತಿಯಲ್ಲಿ ವಾದಿಸುತ್ತಾನೆ.

ತನ್ನ ಗೆಳೆಯನೊಬ್ಬ ಹುಟ್ಟಿನಿಂದಲೇ ಕುಂಟನಾಗಿರುವುದನ್ನು ನೋಡಿ ನಾನು ದೇವರಲ್ಲಿ ಪ್ರಾರ್ಥಿಸಿ ನಿನ್ನ ಎರಡು ಕಾಲುಗಳು ಸರಿಯಾಗಿರುವಂತೆ ಎಲ್ಲರಂತೆ ನೀನು ನಡೆಯಬಹುದು ಎಂದು ಅವನ ಎರಡು ಕಾಲುಗಳನ್ನು ಮುಟ್ಟಿ ಧಾರ್ಮಿಕ ಗ್ರಂಥದ ಮಾತುಗಳನ್ನು ಹೇಳುತ್ತಾ ಅವನ ಕಾಲು ಉದ್ದವಾಗುವುವೆಂದು ಹೇಳುತ್ತಾನೆ. ಆದರೆ ಅವನ ಗೆಳೆಯನ ಕಾಲು ಉದ್ದವಾಗುವುದಿಲ್ಲ. ಈ ಬಗ್ಗೆ ಅವನನ್ನೇ ನೀನು ಪೂರ್ಣವಾಗಿ ದೇವರಲ್ಲಿ ವಿಶ್ವಾಸವಿರಿಸಿಲ್ಲ, ಅದಕ್ಕೆ ಹೀಗಾಯ್ತೆಂದು ಹೇಳುತ್ತಾನೆ. ತನ್ನ ಅಸ್ವಸ್ಥ ಮಾನಸಿಕ ಒತ್ತಡದಿಂದ ಬಳಲುವ ಈ ವಿದ್ಯಾರ್ಥಿ ಕಡೆಗೆ ತನ್ನ ಕುಂಟ ಗೆಳೆಯನನ್ನು ಕೊಲ್ಲುತ್ತಾನೆ. ಧರ್ಮದ ಅತಿಯಾದ ನಂಬಿಕೆ, ಮನುಷ್ಯನಲ್ಲಿ ಏನೆಲ್ಲ ಮಾಡಬಹುದು ಎಂಬುದು ಈ ಚಿತ್ರದ ಸಾರ.



**ಚಿತ್ರೋತ್ಸವದ ಮೊದಮೊದಲಿನ ದಿನಗಳಲ್ಲಿ ಆಯ್ಕೆ ಮಾಡಿಕೊಂಡ ಸಿನಿಮಾಕ್ಕೆ ಸುಲಭವಾಗಿ ಹೋಗಿ ಕುಳಿತು ಬರಬಹುದಾಗಿತ್ತು. ಆದರೆ ಚಿತ್ರೋತ್ಸವದ ಕೊನೆಯ 4 ದಿನಗಳು ಉದ್ದಕ್ಕೂ ಕ್ಯೂನಲ್ಲಿ ನಿಂತು ನೋಡುವಂತಾಯಿತು. ಚಿತ್ರೋತ್ಸವದ ಜನಪ್ರಿಯತೆಗೆ ಇದು ಸಾಕ್ಷಿಯಾಯಿತು.**



### ಒನ್ ಮ್ಯಾನ್ ಅಂಡ್ ಹಿಜ್ ಕೌ

ಚಲನಚಿತ್ರೋತ್ಸವದಲ್ಲಿ ಅತಿ ಹೆಚ್ಚು ಪ್ರದರ್ಶನ ಕಂಡ ಕೆಲವೇ ಚಿತ್ರಗಳಲ್ಲಿ ಇದೂ ಒಂದು. ಪ್ರತಿ ಪ್ರದರ್ಶನದಲ್ಲೂ ಹೌಸ್‌ಫುಲ್ ಬೋರ್ಡ್ ತಗುಲಿಸಿಕೊಂಡ ಚಿತ್ರ. ಮೊಹಮ್ಮದ್ ಹಮೀದೀ ನಿರ್ದೇಶನದ ಈ ಚಿತ್ರ ತನ್ನ ಸರಳ ಹಾಗೂ ನೇರ ನಿರೂಪಣೆಯಿಂದಾಗಿ ಬಹುಸಂಖ್ಯೆಯ ಪ್ರೇಕ್ಷಕರನ್ನು ತಲುಪಿತು.

ಅಲ್ಜೀರಿಯನ್ ರೈತ ಫತಾಗೆ ತನ್ನ ಕುಟುಂಬದ ಜೊತೆ ತಾನು ಪ್ರೀತಿಯಿಂದ ಸಾಕಿದ ಹಸು ಅಚ್ಚುಮೆಚ್ಚು. ಅದಕ್ಕೆ ಜಾಕ್ವೆಲಿನ್ ಎಂದು ಕರೆಯುತ್ತಾನೆ. ಸದಾ ಜಾಕ್ವೆಲಿನ್ ಎಂಬ ಹಸುವಿನೊಂದಿಗೆ ಅವನ ಬೆಳಗು/ರಾತ್ರಿಗಳು. ತನ್ನ ಎಲ್ಲ ದುಗುಡ, ದುಮ್ಮಾನಗಳನ್ನು ಜಾಕ್ವೆಲಿನ್‌ಳೊಂದಿಗೆ ಹಂಚಿಕೊಳ್ಳುತ್ತಿರುತ್ತಾನೆ. ತನ್ನ ಹೆಂಡತಿ, ಮಕ್ಕಳ ಜೊತೆಗಿನ ಒಡನಾಟಕ್ಕಿಂತ ಈ ಹಸುವಿನ ಬಳಿಯ ಒಡನಾಟವೇ ಇವನಿಗೆ ಹೆಚ್ಚು ಪ್ರಿಯವಾದದ್ದು. ತನ್ನ ಹಸುವನ್ನು ಪ್ಯಾರಿಸ್‌ನ ಕೃಷಿಮೇಳದಲ್ಲಿ ಪ್ರದರ್ಶಿಸಬೇಕೆನ್ನುವ ಆಸೆ. ಜನರೆಲ್ಲ ಹಸುವಿನ ಜೊತೆಗಿನ ಒಡನಾಟವನ್ನು ,ಅವನನ್ನು ಅನೇಕ ಬಾರಿ ಛೇಡಿಸಿ ಕಿಚಾಯಿಸುತ್ತಾರೆ. ಮುಗ್ಧ ಮನಸ್ಸಿನ ಫತಾಗೆ ಇದ್ಯಾವುದೂ ಬೇಸರ ತರಿಸುವುದಿಲ್ಲ.

ಅವನ ಆಸೆಯಂತೆಯೇ ಪ್ಯಾರಿಸ್‌ನಿಂದ ಮೇಳದಲ್ಲಿ ಭಾಗವಹಿಸುವಂತೆ ಹೋಗಿ ಬರುವ ಎಲ್ಲ ಖರ್ಚನ್ನು ಭಾಗವಹಿಸುವವರೇ ನೋಡಿಕೊಳ್ಳಬೇಕೆಂಬ ಸೂಚನೆಯ ಆಹ್ವಾನ ಪತ್ರ ಬರುತ್ತದೆ. ಜೊತೆಗೆ ಬಡವ ಫತಾಗೆ ತನ್ನೂರಿನಿಂದ ಸಾವಿರಾರು ಕಿಲೋಮೀಟರ್ ದೂರದ ಊರಿಗೆ ಹೋಗುವ ಬಗೆಯೆಂತು ಗೊತ್ತಾಗದೆ ದಾರಿ ತಪ್ಪಿದಂತಾಗುತ್ತಾನೆ. ಊರಿನ ಗ್ರಾಮಸ್ಥರೆಲ್ಲ ಸೇರಿ ಸ್ವಲ್ಪ ದುಡ್ಡನ್ನು ಸಂಗ್ರಹಿಸಿ ಬೀಳ್ಕೊಡುತ್ತಾರೆ. ಹೆಂಡತಿಗೆ ಅಸಮಾಧಾನ. ಆದರೆ ಎಲ್ಲರಿಂದ ಬೀಳ್ಕೊಂಡು ಅಂತಿಮವಾಗಿ ಹೊರಡುತ್ತಾನೆ. ಬಹುತೇಕ ಕಾಲ್ನಡಿಗೆಯಲ್ಲಿಯೇ ತನ್ನ ಪ್ರೀತಿ ಪಾತ್ರ ಹಸುವನ್ನು ಕರೆದುಕೊಂಡು ನಡೆಯುತ್ತಾನೆ. ಹಲವು ತಿಂಗಳುಗಳ ಕಾಲ ನಡೆದು ಅಂತಿಮವಾಗಿ ಸ್ಪರ್ಧೆ ನಡೆಯುತ್ತಿರುವ ಪ್ಯಾರಿಸ್‌ಗೆ ಸ್ಪರ್ಧೆ ನಡೆಯುವ ಅಂತಿಮ ಕ್ಷಣಕ್ಕೆ ಹೋಗುತ್ತಾನೆ.

ದಾರಿ ಮಧ್ಯದಲ್ಲಿ ನಡೆದ ಅನೇಕ ಸಿಹಿ–ಕಹಿ ಪ್ರಸಂಗಗಳು, ಜನಗಳ ನಡಾವಳಿಗಳು ಕಥಾನಾಯಕನ ಮುಗ್ಧತೆ ಚಿತ್ರದುದ್ದಕ್ಕೂ ಮನಕಲಕುತ್ತದೆ. ಜನರ ನಡವಳಿಕೆ ಲವಲವಿಕೆಯಿಂದ ಸಿನಿಮಾ ನೋಡಿಸಿಕೊಳ್ಳುತ್ತದೆ. ಮಾರ್ಗ ಮಧ್ಯದಲ್ಲಿ ಅನೇಕರು ಫತೆಯ ಸಂದರ್ಶನ ಮಾಡಿ ಫೇಸ್‌ಬುಕ್‌ಗೆ ಹಾಕಿರುತ್ತಾರೆ. ಅನೇಕ ಟಿ.ವಿ.ಗಳು ಮಾರ್ಗದುದ್ದಕ್ಕೂ ಇವನ ಸಂದರ್ಶನವನ್ನು ಪ್ರಸಾರ ಮಾಡಿರುತ್ತಾರೆ. ಇವನದೇ ಒಂದು ಅಭಿಮಾನಿ ವರ್ಗವೂ ಇರುತ್ತದೆ. ಅಂತಿಮವಾಗಿ ಪ್ರದರ್ಶನದಲ್ಲಿ ಇವನ ಹಸುವಿಗೆ ವಿಶೇಷ ಬಹುಮಾನವೂ ಘೋಷಣೆಯಾಗುತ್ತದೆ. ಫತೆಯ ಮುಗ್ಧತೆಯ ನಟನೆ ನಿರ್ದೇಶಕರ ಕ್ರಮಬದ್ಧ ನಿರೂಪಣೆ ಸಿನಿಮಾದ ಜನಪ್ರಿಯತೆಗೆ ಕಾರಣವಾದ ಅಂಶವಾಗಿದೆ.

ಕನ್ನಡ ವಿಭಾಗದಲ್ಲಿ ಪ್ರದರ್ಶಿತಗೊಂಡ ಅನನ್ಯ ಕಾಸರವಳ್ಳಿ ನಿರ್ದೇಶನದ 'ಹರಿಕಥಾಪ್ರಸಂಗ', ಸತ್ಯಪ್ರಕಾಶ್ ನಿರ್ದೇಶನದ 'ರಾಮಾ ರಾಮಾ ರೇ', ಹೇಮಂತ್ ಎಂ.ರಾವ್ ನಿರ್ದೇಶನದ 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಡಿ.ಸುಮನಾ ಕಿತ್ತೂರು ನಿರ್ದೇಶನದ 'ಕಿರುಗೂರಿನ ಗಯ್ಯಾಳಿಗಳು' ಅತಿ ಹೆಚ್ಚು ಪ್ರೇಕ್ಷಕರನ್ನು ಸೆಳೆದುಕೊಂಡ ಚಿತ್ರಗಳು. ಹಾಗೆಯೇ ಸಂಸ್ಕೃತದ 'ಸರ್ಚ್ ಫಾರ್ ಸೆಲ್ಫ್–ಇಷ್ಟಿ' ಜನರ ಮೆಚ್ಚುಗೆ ಪಡೆದ ಚಿತ್ರ.

ಅದೆಷ್ಟೋ ಸಿನಿಮಾಗಳನ್ನು ನೋಡಲಾಗದ ಅತೃಪ್ತಿಯ ಜೊತೆಗೆ ಈ ಸಲದ ಸಿನಿಮಾಜಾತ್ರೆ ಮುಗಿಯಿತು. ವಿಶ್ವ ಚಲನಚಿತ್ರೋತ್ಸವದ ಮೂಲಕ ಜಾಗತಿಕ ಅರಿವು ಮೂಡುವುದರ ಜೊತೆಗೆ ಚಲನಚಿತ್ರ ಮಾಧ್ಯಮದ ವಿರಾಟ್ ಸ್ವರೂಪ, ಅದರ ಶಕ್ತಿಗಳು ವಿಶ್ವದ ಅನೇಕ ಕಡೆಯ ವಿದ್ಯಮಾನಗಳ ಪ್ರಸ್ತುತಿ ಇದು ಜಾಗತಿಕ ಚಲನಚಿತ್ರೋತ್ಸವದ ಮೂಲಕ ಪಡೆದುಕೊಂಡ ನಿಜವಾದ ಲಾಭ. ■



ಹುಬ್ಬಳ್ಳಿ – ಧಾರವಾಡ ಮಹಾನಗರಗಳಲ್ಲಿ ರಾಜ್ಯ ಒಲಿಂಪಿಕ್ ಕ್ರೀಡಾಕೂಟ:

# ಕನ್ನಡದ ಕ್ರೀಡಾಳುಗಳಲ್ಲಿ ಸ್ಫೂರ್ತಿ ತುಂಬಿದ ಕ್ರೀಡಾಹಬ್ಬ



**ಕರ್ನಾಟಕ ಒಲಿಂಪಿಕ್ ಸಂಸ್ಥೆ, ಕರ್ನಾಟಕ ಸರಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಧಾರವಾಡ ಜಿಲ್ಲಾ ಆಡಳಿತ ಹಾಗೂ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಸಂಯುಕ್ತ ಆಶ್ರಯದಲ್ಲಿ ನಡೆದ ರಾಜ್ಯ ಒಲಿಂಪಿಕ್ ಕ್ರೀಡಾಕೂಟ, ಸಾವಿರಾರು ಹೊಸ ಕ್ರೀಡಾ ಪ್ರತಿಭೆಗಳಿಗೆ ಅವಕಾಶ ಕಲ್ಪಿಸಿತು.**

**ಮಂಜುನಾಥ ಡಿ.ಡೊಳ್ಳಿನ**
ಹಿರಿಯ ಸಹಾಯಕ ನಿರ್ದೇಶಕರು
ಧಾರವಾಡ

**ಕ**ಳೆದ ಫೆಬ್ರವರಿ 3 ರಿಂದ 10 ರವರೆಗೆ ರಾಜ್ಯದ ಎರಡನೇ ಮಹಾನಗರ ಎಂಬ ಹಿರಿಮೆಗೆ ಪಾತ್ರವಾಗಿರುವ ಹುಬ್ಬಳ್ಳಿ ಧಾರವಾಡ ಅವಳಿನಗರಗಳಲ್ಲಿ ಕನ್ನಡ ನಾಡಿನ ಎಲ್ಲ ಕ್ರೀಡಾಪಟುಗಳ ಸಮಾಗಮವಾಗಿತ್ತು. ಕರ್ನಾಟಕ ಒಲಿಂಪಿಕ್ ಸಂಸ್ಥೆ, ಕರ್ನಾಟಕ ಸರಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಧಾರವಾಡ ಜಿಲ್ಲಾ ಆಡಳಿತ ಹಾಗೂ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಸಂಯುಕ್ತ ಆಶ್ರಯದಲ್ಲಿ ನಡೆದ ರಾಜ್ಯ ಒಲಿಂಪಿಕ್ ಕ್ರೀಡಾಕೂಟ, ಸಾವಿರಾರು ಹೊಸ ಕ್ರೀಡಾ ಪ್ರತಿಭೆಗಳಿಗೆ ಅವಕಾಶ ಕಲ್ಪಿಸಿತು. ಹಲವಾರು ದಾಖಲೆಗಳಿಗೆ ವೇದಿಕೆಯೊದಗಿಸಿತು. ಎಳೆಯರಲ್ಲಿ ಕ್ರೀಡಾಸ್ಫೂರ್ತಿ ಬಿತ್ತುವ ಜೊತೆಗೆ ಕ್ರೀಡಾಭಿಮಾನಿಗಳಿಗೆ ಆಟದ ರಸದೌತಣ ಉಣಬಡಿಸಿತು.

1986–87ರಲ್ಲಿ ಬಾಗಲಕೋಟದಲ್ಲಿ ಮೊದಲಬಾರಿಗೆ ರಾಜ್ಯ ಒಲಿಂಪಿಕ್ ಕ್ರೀಡಾಕೂಟಗಳು ಜರುಗಿದ್ದವು. 2007–08 ರಲ್ಲಿ ಮಂಡ್ಯ–ಮೈಸೂರು ನಗರಗಳಲ್ಲಿ ಎರಡನೇ ಬಾರಿಗೆ ಈ ಕ್ರೀಡಾಕೂಟ ನಡೆದಿತ್ತು. ಇದೀಗ 2017 ರ ಫೆಬ್ರವರಿ 3 ರಿಂದ 10 ರವರೆಗೆ ಹುಬ್ಬಳ್ಳಿ ಧಾರವಾಡ ಅವಳಿ ನಗರಗಳಲ್ಲಿ ರಾಜ್ಯದ ಮೂರನೆಯ ಒಲಿಂಪಿಕ್ ಕ್ರೀಡಾಕೂಟಗಳು ಯಶಸ್ವಿಯಾಗಿ ನಡೆದಿವೆ. ಆದರಾತಿಥ್ಯಕ್ಕೆ ಹೆಸರಾದ ಉತ್ತರ ಕರ್ನಾಟಕ



ಅತ್ಯಂತ ಅಚ್ಚುಕಟ್ಟಾದ ಸೌಕರ್ಯಗಳೊಂದಿಗೆ ಎಂಟು ದಿನಗಳ ಕಾಲ ಕ್ರೀಡಾಕೂಟ ಆಯೋಜಿಸಿದ್ದು ಆಗಮಿಸಿದ್ದ ಕ್ರೀಡಾಪಟುಗಳ ಪ್ರಶಂಸೆಗೆ ಪಾತ್ರವಾಗಿದೆ.

2016 ರ ಆಯವ್ಯಯದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ರಾಜ್ಯ ಒಲಿಂಪಿಕ್ ಕ್ರೀಡಾಕೂಟ ಆಯೋಜಿಸಲು 3 ಕೋಟಿ ರೂಪಾಯಿ ಮೀಸಲಿರಿಸಿ, ರಾಜ್ಯ ಒಲಿಂಪಿಕ್ ಸಂಸ್ಥೆಗೆ ಹಣವನ್ನೂ ಸಹ ಬಿಡುಗಡೆ ಮಾಡಿದ್ದರು. ರಾಜ್ಯ ಒಲಿಂಪಿಕ್ ಸಂಸ್ಥೆಯು ಉತ್ತರ ಕರ್ನಾಟಕದ ಹುಬ್ಬಳ್ಳಿ ಧಾರವಾಡ ಶಹರಗಳಿಗೆ ಕ್ರೀಡಾಕೂಟದ ಆತಿಥ್ಯ ವಹಿಸುವ ಜವಾಬ್ದಾರಿ ನೀಡಿತು.

ಒಟ್ಟು 24 ವಿವಿಧ ಕ್ರೀಡೆಗಳನ್ನು ಕ್ರೀಡಾಕೂಟದಲ್ಲಿ ಏರ್ಪಡಿಸಲಾಗಿತ್ತು . ಲಾನ್ ಟೆನ್ನಿಸ್ ಮತ್ತು ರೈಫಲ್ ಶೂಟಿಂಗ್ ಕ್ರೀಡೆಗಳು ಬೆಂಗಳೂರಿನಲ್ಲಿ ನಡೆದುದನ್ನು ಹೊರತು ಪಡಿಸಿದರೆ. ಉಳಿದ 22 ಕ್ರೀಡೆಗಳು ಹುಬ್ಬಳ್ಳಿ ಧಾರವಾಡ ಅವಳಿ ನಗರಗಳಲ್ಲಿ ಜರುಗಿದವು.

2017 ರ ಫೆ.3 ರಂದು ಸಂಜೆ 4 ಗಂಟೆಗೆ ಧಾರವಾಡದ ಆರ್.ಎನ್.ಶೆಟ್ಟಿ ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ ಕ್ರೀಡಾಕೂಟದ ವರ್ಣರಂಜಿತ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಕ್ರೀಡಾಪಟುಗಳ ಆಕರ್ಷಕ ಪಥಸಂಚಲನ ವೀಕ್ಷಿಸಿ, ಗೌರವ ವಂದನೆ ಸ್ವೀಕರಿಸಿ, ವಿಧ್ಯುಕ್ತವಾಗಿ ಕ್ರೀಡಾಕೂಟದ ಉದ್ಘಾಟನೆಯನ್ನು ಘೋಷಿಸುತ್ತಿದ್ದಂತೆಯೇ, ಮೈದಾನದ ದಶ ದಿಕ್ಕುಗಳಿಂದಲೂ ಕಹಳೆಗಳು ಮೊಳಗಿದವು. ರಾಷ್ಟ್ರ ಮತ್ತು ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿರುವ ಮ್ಯಾರಥಾನ್ ಓಟಗಾರ ಸಿದ್ಧಪ್ಪ ಶಿವನೂರ, ಕುಸ್ತಿ ಚಾಂಪಿಯನ್ ರಫೀಕ್ ಹೊಳಿ ಹಾಗೂ ಬಾಸ್ಕೆಟ್ ಬಾಲ್ ಆಟಗಾರ ರಾಜೇಶ ಉಪ್ಪಾರ ಕ್ರೀಡಾಜ್ಯೋತಿಯನ್ನು ತಂದು ಮುಖ್ಯಮಂತ್ರಿಗಳಿಗೆ ಹಸ್ತಾಂತರಿಸಿದರು.




ರಾಜ್ಯದಲ್ಲಿ ಎರಡು ವರ್ಷಗಳಿಗೊಮ್ಮೆ ರಾಜ್ಯ ಒಲಿಂಪಿಕ್ ಕ್ರೀಡಾಕೂಟ ಹಮ್ಮಿಕೊಳ್ಳಲಾಗುವದು. ಉತ್ತರ ಕರ್ನಾಟಕದ ಧಾರವಾಡದಲ್ಲಿ ಸುಸಜ್ಜಿತ ಕ್ರೀಡಾ ಸಂಕೀರ್ಣ, ಗರಡಿ ಮನೆ ಸ್ಥಾಪಿಸಲಾಗುವದು ಎಂದು ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಕ್ರೀಡಾಕೂಟದ ಉದ್ಘಾಟನಾ ನುಡಿಗಳಲ್ಲಿ ತಿಳಿಸಿದರು.

ಧಾರವಾಡದ ಯುನಿವರ್ಸಿಟಿ ಪಬ್ಲಿಕ್ ಶಾಲೆಯಲ್ಲಿ ಆರ್ಚರಿ, ಖೋ ಖೋ ಹಾಗೂ ವೇಟ್‌ಲಿಫ್ಟಿಂಗ್, ಆರ್.ಎನ್.ಶೆಟ್ಟಿ ಕ್ರೀಡಾಂಗಣದಲ್ಲಿ ಅಥ್ಲೇಟಿಕ್ಸ್ ಮತ್ತು ಬಾಕ್ಸಿಂಗ್, ರೋವರ್ಸ್ ಕ್ಲಬ್ ಮತ್ತು ಮಲ್ಲಸಜ್ಜನ ವ್ಯಾಯಾಮ ಶಾಲೆಯಲ್ಲಿ ಬಾಸ್ಕೆಟ್‌ಬಾಲ್, ಸತ್ತೂರಿನ ಎಸ್.ಡಿ.ಎಂ.ಡೆಂಟಲ್ ಕಾಲೇಜಿನಲ್ಲಿ ಬ್ಯಾಡ್ಮಿಂಟನ್, ಕರ್ನಾಟಕ ವಿಜ್ಞಾನ ಕಾಲೇಜು ಮೈದಾನದಲ್ಲಿ ಫುಟ್‌ಬಾಲ್ , ಆರ್.ಎಲ್.ಎಸ್. ಕಾಲೇಜಿನಲ್ಲಿ ಫೆನ್ಸಿಂಗ್ (ಕತ್ತಿ ವರಸೆ), ಬಾಲಮಾರುತಿ ವ್ಯಾಯಾಮ ಶಾಲೆಯ ಹಾರೋಡಿ ರಾಮಣ್ಣಶೆಟ್ಟಿ ಒಳಾಂಗಣ ಕ್ರೀಡಾಂಗಣದಲ್ಲಿ ಜಿಮ್ನ್ಯಾಸ್ಟಿಕ್, ಕರ್ನಾಟಕ ವಿಶ್ವವಿದ್ಯಾಲಯದ ರಾಣಿ ಚನ್ನಮ್ಮ ಕ್ರೀಡಾಂಗಣದಲ್ಲಿ ಹಾಕಿ, ಮಲ್ಲಸಜ್ಜನ ವ್ಯಾಯಾಮ ಶಾಲೆಯಲ್ಲಿ ಹ್ಯಾಂಡ್‌ಬಾಲ್ , ಆರ್.ಎನ್.ಶೆಟ್ಟಿ ಒಳಾಂಗಣ ಕ್ರೀಡಾಂಗಣದಲ್ಲಿ ಜುಡೋ, ಟೇಕ್ವಾಂಡೋ, ಜೆ.ಎಸ್.ಎಸ್.ಕಾಲೇಜು ಆವರಣದಲ್ಲಿ ನೆಟ್‌ಬಾಲ್, ಕಾಸ್‌ಮಸ್ ಕ್ಲಬ್‌ನಲ್ಲಿ ಟೇಬಲ್ ಟೆನಿಸ್, ಡಾ.ಮಲ್ಲಿಕಾರ್ಜುನ ಮನಸೂರ ಕಲಾಭವನದ ಆವರಣದಲ್ಲಿ ಕುಸ್ತಿ, ರೇಲ್ವೇ ಸಮುದಾಯ ಭವನದಲ್ಲಿ ವುಷು ಕ್ರೀಡೆಗಳು ನಡೆದವು. ಹುಬ್ಬಳ್ಳಿಯ ನೆಹರೂ ಮೈದಾನದಲ್ಲಿ ವಾಲಿಬಾಲ್ ಮತ್ತು ಕಬಡ್ಡಿ ,ಮಹಾನಗರಪಾಲಿಕೆಯ ಈಜುಗೊಳದಲ್ಲಿ ಈಜು ಸ್ಪರ್ಧೆಗಳು ಮತ್ತು ರಾ.ಹೆ.4 ರ ಗಬ್ಬೂರ ಕ್ರಾಸ್‌ನಿಂದ ವರೂರು ಕ್ರಾಸ್‌ವರೆಗೆ ಮಹಿಳೆಯರ 40 ಕಿ.ಮೀ.ಸೈಕ್ಲಿಂಗ್ ಹಾಗೂ ಪುರುಷರ 60 ಕಿ.ಮೀ.ಸೈಕ್ಲಿಂಗ್ ಸ್ಪರ್ಧೆಗಳು ಜರುಗಿದವು.

ಸುಮಾರು 4441 ಕ್ರೀಡಾಪಟುಗಳು ಹಾಗೂ ಸುಮಾರು 500 ತಂತ್ರಜ್ಞರು ಭಾಗವಹಿಸಿದ್ದರು. ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ವಿದ್ಯಾರ್ಥಿನಿಲಯಗಳಲ್ಲಿ ಅಚ್ಚುಕಟ್ಟಾದ ವಸತಿ ವ್ಯವಸ್ಥೆಗೆ ಏರ್ಪಾಡು ಮಾಡಲಾಗಿತ್ತು. ಖಾಸಗಿ ವಿದ್ಯಾ ಸಂಸ್ಥೆಗಳ ಹಾಸ್ಟೆಲುಗಳು ಮತ್ತು ಹೋಟೆಲುಗಳನ್ನೂ ಸಹ ವಸತಿಗಾಗಿ ಗುರುತಿಸಲಾಗಿತ್ತು. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ( ಡಯಟ್) ಆವರಣದಲ್ಲಿ ಕ್ರೀಡಾಪಟುಗಳು,ತಂತ್ರಜ್ಞರು, ಸ್ವಯಂಸೇವಕರು, ಗಣ್ಯರು, ಅಧಿಕಾರಿಗಳು ಹಾಗೂ ಮಾಧ್ಯಮದ ಪ್ರತಿನಿಧಿಗಳಿಗೆ ಊಟ,ಉಪಹಾರದ ವ್ಯವಸ್ಥೆ ಮಾಡಲಾಗಿತ್ತು.

ಪ್ರತಿಯೊಂದು ಕ್ರೀಡೆ ನಡೆಯುವ ಸ್ಥಳಗಳಲ್ಲಿ ವೈದ್ಯಕೀಯ ತಂಡ, ಚಿಕಿತ್ಸಾ ಸೌಕರ್ಯಗಳನ್ನು ಕಲ್ಪಿಸಲಾಗಿತ್ತು. ಕ್ರೀಡಾಕೂಟದ ವೀಕ್ಷಕರಿಗೂ ಸಹ ವಿಮಾ ಸೌಲಭ್ಯ ಕಲ್ಪಿಸಿದ್ದು ಕ್ರೀಡಾಕೂಟದ ವಿಶೇಷವಾಗಿತ್ತು. ಕ್ರೀಡಾಪಟುಗಳಿಗೆ ವಸತಿ ಸೌಲಭ್ಯ ಕಲ್ಪಿಸಿದ್ದ ಸ್ಥಳಗಳಿಂದ ಕ್ರೀಡಾಂಗಣಗಳಿಗೆ ಕರೆದೊಯ್ಯಲು ಅಚ್ಚುಕಟ್ಟಾದ ಸಾರಿಗೆ ವ್ಯವಸ್ಥೆ ಏರ್ಪಡಿಸಲಾಗಿತ್ತು. ಕ್ರೀಡಾಕೂಟದ ಸಮಗ್ರ ವರದಿಗಳನ್ನು ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಿಗೆ







ತಲುಪಿಸಲು ಆರ್.ಎನ್.ಶೆಟ್ಟಿ ಕ್ರೀಡಾಂಗಣದ ಸಾಹಿತ್ಯ ಭವನದಲ್ಲಿ ಮಾಧ್ಯಮ ಕೇಂದ್ರ ಸ್ಥಾಪಿಸಲಾಗಿತ್ತು. ಕರ್ನಾಟಕ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವಿದ್ಯಾರ್ಥಿಗಳ ಸೇವೆ ಪಡೆದು ಎಲ್ಲ ಕ್ರೀಡಾ ಸ್ಥಳಗಳಿಂದ ತ್ವರಿತ ಫಲಿತಾಂಶ, ವರದಿ ಒದಗಿಸುವ ಪ್ರಯತ್ನ ಮಾಡಿದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯ ಮೆಚ್ಚುಗೆಗೆ ಪಾತ್ರವಾಯಿತು. ಸ್ಕೋರ್ ಅಪ್ – ಕೆಓಎ ವೆಬ್ ಸೈಟ್ ಮತ್ತು ಮೊಬೈಲ್ ಆ್ಯಪ್ ಮೂಲಕವೂ ಕ್ರೀಡಾಕೂಟದ ಸಮಗ್ರ ಮಾಹಿತಿ ಪ್ರತಿಯೊಬ್ಬರಿಗೂ ದೊರೆಯುವ ಏರ್ಪಾಡು ಮಾಡಲಾಗಿತ್ತು.

ಧಾರವಾಡ ಜಿಲ್ಲಾಧಿಕಾರಿ ಡಾ.ಎಸ್.ಬಿ.ಬೊಮ್ಮನಹಳ್ಳಿಯವರ ವಿಶೇಷ ಮುತುವರ್ಜಿಯಿಂದಾಗಿ ಜಿಲ್ಲಾ ಆಡಳಿತದ ಎಲ್ಲ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ವರ್ಗ ಸುಮಾರು ಒಂದು ತಿಂಗಳಿಗೂ ಹೆಚ್ಚು ಕಾಲ ಅವಿರತವಾಗಿ ಶ್ರಮಿಸಿದ ಪರಿಣಾಮ ರಾಜ್ಯ ಒಲಿಂಪಿಕ್ ಕ್ರೀಡಾಕೂಟ ವ್ಯವಸ್ಥಿತವಾಗಿ ನಡೆದು ಕ್ರೀಡಾಪಟುಗಳು, ಪಾಲಕರ ಮನಗೆಲ್ಲಲು ಸಾಧ್ಯವಾಯಿತು ಎಂದು ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ, ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಕೆ.ಗೋವಿಂದರಾಜ ಹೇಳಿದರು.

ಫೆ.10 ರ ಸಂಜೆ 4 ಗಂಟೆಗೆ ಧಾರವಾಡದ ಆರ್.ಎನ್.ಶೆಟ್ಟಿ ಕ್ರೀಡಾಂಗಣದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಭಾಗವಹಿಸಿ, ಕ್ರೀಡಾಕೂಟದ ಮುಕ್ತಾಯವನ್ನು ಘೋಷಿಸಿದರು.

**ಪದಕಗಳ ಅಂಕಿ ಅಂಶ :** ರಾಜ್ಯ ಒಲಿಂಪಿಕ್ ಕ್ರೀಡಾಕೂಟದಲ್ಲಿ 535 ಚಿನ್ನ, 509 ಬೆಳ್ಳಿ ಹಾಗೂ 557 ಕಂಚಿನ ಪದಕಗಳು ಸೇರಿ ಒಟ್ಟು 1601 ಪದಕಗಳನ್ನು ವಿತರಿಸಲಾಯಿತು. 4441



# ಕ್ರೀಡಾಕೂಟದಲ್ಲಿ ನೃತ್ಯ ವೈಭವ ; ಜಾನಪದ ಜಾತ್ರೆ

ವಿವಿಧ ಜಾನಪದ ಶಬ್ದ ಮಾಡುವ ಕಹಳೆಗಳು, ಬುಡುಕಟ್ಟು ಶೈಲಿಯಲ್ಲಿಯ ನಗಾರಿ, ತಮಟೆ ಬಡಿಯುವ ಯುವಕರು, ತಲೆಯ ಮೇಲೆ ದೇವತೆಯ ನಂದಿಕೋಲು ಇಟ್ಟುಕೊಂಡು ಕುಣಿಯುವ ಪೂಜಾ ಕುಣಿತದ ಹೆಜ್ಜೆಯ ವೈಭವ, ಕಹಳೆ ಊದುತ್ತಿರುವ ಉತ್ತರ ಕರ್ನಾಟಕದ ಕಲಾವಿದರು ಹಾಗೂ ಧಾರವಾಡ ಪ್ರಸಿದ್ಧ ಕಲೆ ಕೆಲಗೇರಿಯ ಜಗ್ಗಲಿಗೆ ಮೇಳದ ಕುಣಿತ ಕರ್ನಾಟಕ ರಾಜ್ಯ ಒಲಿಂಪಿಕ್ ಕ್ರೀಡಾಕೂಟದಲ್ಲಿ ಜಾನಪದ ಲೋಕವನ್ನೇ ಸೃಷ್ಟಿಸಿದ ಅನುಭವ.

ಕರ್ನಾಟಕ ರಾಜ್ಯ ಒಲಿಂಪಿಕ್ ಸಂಸ್ಥೆ, ಧಾರವಾಡ ಜಿಲ್ಲಾ ಆಡಳಿತದ ಸಹಯೋಗದೊಂದಿಗೆ ಆರ್ ಎನ್ ಶೆಟ್ಟಿ ಕ್ರೀಡಾಂಗಣದಲ್ಲಿ ಫೆ.3 ರಿಂದ 10 ರವರೆಗೆ ಆಯೋಜಿಸಿದ ರಾಜ್ಯ ಒಲಿಂಪಿಕ್ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಏರ್ಪಡಿಸಿದ್ದ ಜಾನಪದ ಕಾರ್ಯಕ್ರಮ ನೃತ್ಯ ವೈಭವದಲ್ಲಿ ರಾಜ್ಯದ 24 ಜಿಲ್ಲೆಗಳ 56 ಕಲಾ ತಂಡಗಳ 550ಕ್ಕೂ ಹೆಚ್ಚು ಕಲಾವಿದರು ಏಕಕಾಲಕ್ಕೆ ಭಾಗವಹಿಸಿ ಜಾನಪದ ಕಲೆಗಳನ್ನು ಪ್ರದರ್ಶಿಸಿದ  ದೃಶ್ಯಕಾವ್ಯ ವೈಭವ ನೋಡುಗರ ಮೈ ನವಿರೇಳಿಸುವಂತೆ ಮಾಡಿತು.

ಈ ಜಾನಪದ ಜಾತ್ರೆಯ ಕಲಾವೈಭವದಲ್ಲಿ ಧಾರವಾಡದ ಶ್ರೀ ಮಂಜುನಾಥ ಮಾದರ ತಂಡದವರ ಜಗ್ಗಲಿಗೆ, ಶ್ರೀಮತಿ ರೇಣುಕಾ ಲಮಾಣಿ ತಂಡದವರಿಂದ ಲಂಬಾಣಿ ನೃತ್ಯ, ಜಾನಪದ ನೃತ್ಯ, ತುಮಕೂರಿನ ಕಂಸಾಳೆ, ವಿಜಯಪುರದ ಏಕತಾಲಿಕ್ ಪದಗಳು, ಬೆಳಗಾವಿಯ ಕರಡಿ ಮಜಲು, ಮೈಸೂರಿನ ನಗಾರಿ, ಪೂಜಾ ಕುಣಿತ, ಚರ್ಮವಾದ್ಯ, ಕೊಪ್ಪಳದ ಷಹನಾಯಿ ವಾದನ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೋಮನ ಕುಣಿತ, ಉರುವೆವಾದನ, ವೀರಗಾಸೆ, ಚಾಮರಾಜನಗರದ ಜಾನಪದ ನೃತ್ಯ, ವೀರಮಕ್ಕಳ ಕುಣಿತ, ಗೊರವರು, ಸುಗ್ಗಿ ಕುಣಿತ, ಬಳ್ಳಾರಿಯ ಮಹಿಳಾ ಡೊಳ್ಳು, ರಾಮನಗರದ ತಮಟೆ ಹಾಗೂ ಪೂಜಾ ಕುಣಿತ, ಬಳ್ಳಾರಿಯ ಕಹಳೆವಾದನ, ಉತ್ತರ ಕನ್ನಡದ ಯಕ್ಷಗಾನ, ಗದಗಿನ ಕರಡಿ ಮಜಲು, ಹಾವೇರಿಯ ಹಲಗಿ ಮೇಳ, ಬೆಂಗಳೂರಿನ ಮಹಿಳಾ



ವೀರಗಾಸೆ, ಹಾಸನದ ಸೋಮನ ಕುಣಿತ, ಮಂಗಳೂರಿನ ಯಕ್ಷಗಾನ, ಮಂಡ್ಯದ ಪಂಜ ಕುಣಿತ, ದಾವಣಗೆರೆಯ ನಂದಿ ಧ್ವಜ ಹಾಗೂ ಮಂಗಳೂರು (ಕಾಪು) ಕರಗ ಕೋಲಾಟ ಕಲೆಗಳು ಪ್ರದರ್ಶನಗೊಂಡವು.

ಜಾನಪದ ಜಾತ್ರೆ ಹಾಗೂ ಜಾನಪದ ಕಲಾ ಮೇಳ ಮೆರವಣಿಗೆ ಮಾಡಿ ರಾಜ್ಯದಾದ್ಯಂತ ಹೆಸರು ಮಾಡಿರುವ ಶ್ರೇಷ್ಠ ರಂಗಕರ್ಮಿ ನಾಗರಾಜ ಮೂರ್ತಿ ಹಾಗೂ ತಂಡದ ನಿರ್ದೇಶಕ ಡಾ. ಬಾನಂದೂರು ಕೆಂಪಯ್ಯ, ಮುಖ್ಯ ಸಂಚಾಲಕ ಡಾ. ಅಪ್ಪಗೆರೆ ತಿಮ್ಮರಾಜು, ಪ್ರಧಾನ ಸಂಯೋಜಕ ಸಬ್ಬಳಹಳ್ಳಿ ರಾಜು, ಸಂಯೋಜಕ ಶಂಕರ ಭಾರತಪುರ ಹಾಗೂ ಅವರ ತಂಡದ ಪ್ರಮುಖರಾದ ಕಾಳಯ್ಯ, ರತ್ನ ಸಕಲೇಶಪುರ, ಗೌರಮ್ಮ ನರಸಿಂಹಮೂರ್ತಿ, ನಗಾರಿ ಮಂಜು, ಮತ್ತು ಚಲ್ಲಯ್ಯ ಅವರು ಒಲಿಂಪಿಕ್ ಪ್ರಾರಂಭದಲ್ಲಿ 550 ಕಲಾವಿದರರು ಒಂದೇ ಸಮಯಕ್ಕೆ ಜಾನಪದ ನೃತ್ಯ ಪ್ರದರ್ಶಿಸುವ ಮೂಲಕ ವಿಭಿನ್ನ



ಜಾನಪದ ಲೋಕವನ್ನು ಸೃಷ್ಟಿಸಿದ್ದು ವಿಶೇಷವಾಗಿತ್ತು.

ನಾಡಿನ ವಿವಿಧ ಸಂಸ್ಕೃತಿ ಕಲೆಗಳ ಪ್ರತೀಕವೆನಿಸಿದ ವೈವಿಧ್ಯಮಯ ಜಾನಪದ ಕಲೆಗಳನ್ನು ಸಂರಕ್ಷಿಸಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಈ ಜಾನಪದ ಜಾತ್ರೆ ಆರಂಭಿಸಿದೆ. ಈ ಮೂಲಕ ಜಾನಪದ ಕಲೆ ಕಲಾವಿದರು. ಜಾನಪದ ಸಂಸ್ಕೃತಿಯನ್ನು ಸಂರಕ್ಷಿಸಿ ಪ್ರೋತ್ಸಾಹಿಸುವದು ಈ ಜಾನಪದ ಜಾತ್ರೆಯ ಮುಖ್ಯ ಉದ್ದೇಶ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯಕ್ರಮ ವಿಭಾಗದ ಜಂಟಿ ನಿರ್ದೇಶಕ ಶ್ರೀ.ಕೆ.ಎಚ್.ಚನ್ನೂರ ಹೇಳಿದ್ದಾರೆ.

ಜಾನಪದ ಜಾತ್ರೆಯಲ್ಲಿ ಧಾರವಾಡದ ಪಂಡಿತ ಮಲ್ಲಿಕಾರ್ಜುನ ಮನಸೂರ ಹಾಗೂ ಪಂಡಿತ ಬಸವರಾಜ ರಾಜಗುರು ಸಂಗೀತ ಶಾಲೆಯ 100 ಮಕ್ಕಳಿಂದ ಸಾದರ ಪಡಿಸಿದ ನಾಡಗೀತೆ ಮನಸೂರೆಗೊಂಡಿತು.

ಆರ್‌ಎನ್ ಶೆಟ್ಟಿ ಕ್ರೀಡಾಂಗಣದಲ್ಲಿ ಫೆ.3 ರಂದು ಸಂಜೆ 4:30 ಗಂಟೆಗೆ ಮುಖ್ಯ ಮಂತ್ರಿ ಸಿದ್ದರಾಮಯ್ಯನವರು ಕ್ರೀಡಾಕೂಟಕ್ಕೆ ಚಾಲನೆ ನೀಡುತ್ತಿದ್ದಂತೆಯೇ ರಾಜ್ಯದ ವಿವಿಧ ಕಲಾ ಪ್ರಕಾರಗಳ ಕಲಾವಿದರು ಸಾಂಸ್ಕೃತಿಕ ಕಲಾ ವೈಭವ ಸೃಷ್ಟಿಸಿದರು. ಈ ಸಂದರ್ಭದಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರಾದ ಶ್ರೀ ಯು.ಟಿ.ಖಾದರ್, ಗಣಿ, ಭೂವಿಜ್ಞಾನ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ವಿನಯ ಕುಲಕರ್ಣಿ, ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರಾದ ಶ್ರೀ ಪ್ರಮೋದ ಮಧ್ವರಾಜ್, ಉನ್ನತ ಶಿಕ್ಷಣ ಸಚಿವರಾದ ಶ್ರೀ ಬಸವರಾಜ ರಾಯರಡ್ಡಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಶ್ರೀಮತಿ ಉಮಾಶ್ರೀ, ರಾಜ್ಯ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಹಾಗೂ ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿಗಳಾದ ಶ್ರೀ ಕೆ.ಗೋವಿಂದರಾಜು ಜಿಲ್ಲೆಯ ಶಾಸಕರು, ಯುವ ಸಬಲೀಕರಣ ಕ್ರೀಡಾ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಡಾ.ರಜನೀಶ್ ಗೋಯಿಲ್, ನಿರ್ದೇಶಕ ಅನುಪಮ್ ಅಗ್ರವಾಲ್, ಜಿಲ್ಲಾಧಿಕಾರಿ ಡಾ.ಎಸ್.ಬಿ.ಬೊಮ್ಮನಹಳ್ಳಿ ವಿವಿಧ ಜಿಲ್ಲೆಯ ಕ್ರೀಡಾಪಟುಗಳು, ನಗರದ ಸಾರ್ವಜನಿಕರು ಕಾರ್ಯಕ್ರಮ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

– ಪಿ. ಎಸ್. ಹಿರೇಮಠ



ಕ್ರೀಡಾಪಟುಗಳು 22 ಕ್ರೀಡೆಗಳಲ್ಲಿ ಭಾಗವಹಿಸಿದ್ದರು ಮೂರು ಹೊಸ ದಾಖಲೆಗಳು ಕ್ರೀಡಾಕೂಟದಲ್ಲಿ ದಾಖಲಿಸಲ್ಪಟ್ಟವು.

**ದಾಖಲೆಗಳು** : ಪ್ರತಿಸ್ಪರ್ಧಿಯನ್ನು 25 ಸೆಕೆಂಡುಗಳಿಗಿಂತಲೂ ಹೆಚ್ಚು ಕಾಲದ ಅಂತರದಲ್ಲಿ ಹಿಂದಿಕ್ಕಿ ಪುರುಷರ 1500 ಮೀಟರ್ಸ್ ಓಟದಲ್ಲಿ ಚಿನ್ನ ಗೆದ್ದ ಬೆಂಗಳೂರಿನ ವಿಶ್ವಾಂಬರ ಎಲ್.ಕೋಲೆಕರ್ ಈ ವಿಭಾಗದಲ್ಲಿ ಹೊಸ ದಾಖಲೆ ಬರೆದರು. ಜೊತೆಗೆ 800 ಮೀಟರುಗಳ ಓಟದಲ್ಲಿಯೂ ಚಿನ್ನ ಗೆದ್ದ ಅವರು, 1986 ರಲ್ಲಿ 30 ವರ್ಷಗಳ ಹಿಂದೆ ಸತ್ಯನಾರಾಯಣ ಅವರು ಬರೆದಿದ್ದ ದಾಖಲೆಯನ್ನು ಈ ಕ್ರೀಡಾಕೂಟದಲ್ಲಿ ವಿಶ್ವಾಂಬರ ತಮ್ಮ ಹೆಸರಿಗೆ ಬರೆದುಕೊಂಡರು.

ಮಹಿಳೆಯರ ಟ್ರಿಪಲ್ ಜಂಪ್ ನಲ್ಲಿ 13.13 ಮೀಟರ್ಸ್



ದೂರ ಜಿಗಿದ ಜಾಯ್ಲಿನ್ ಲೋಬೊ, ಈ ಹಿಂದೆ ರಾಜ್ಯ ಕ್ರೀಡಾಕೂಟದಲ್ಲಿ ಶಿಲ್ಪಾ ಸಿಕ್ವೇರಾ ನಿರ್ಮಿಸಿದ್ದ ದಾಖಲೆಯನ್ನು ಲಕ್ನೋದಲ್ಲಿ ನಡೆದ ಅಂತರರಾಜ್ಯ ಕ್ರೀಡಾಕೂಟದಲ್ಲಿ ಹಿಂದಿಕ್ಕಿದ್ದರು. ಈಗ ಧಾರವಾಡದ ರಾಜ್ಯ ಒಲಿಂಪಿಕ್ ಕ್ರೀಡಾಕೂಟದಲ್ಲಿ ಜಾಯ್ಲಿನ್ ತಮ್ಮದೇ ದಾಖಲೆಯನ್ನು ಉತ್ತಮ ಪಡಿಸಿಕೊಂಡರು.

ಓಟಗಾರ್ತಿ ಹೆಚ್.ಎಂ.ಜ್ಯೋತಿ ಹಾಗೂ ವಿಶ್ವಾಂಬರ ಕೋಲೆಕರ್ ಅವರಿಗೆ ಕ್ರಮವಾಗಿ ಕ್ರೀಡಾಕೂಟದ ಉತ್ತಮ ಮಹಿಳಾ ಹಾಗೂ ಪುರುಷ ಅಥ್ಲೀಟ್ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.




# ಹುಬ್ಬಳ್ಳಿ ಬಾಲಕಿಗೆ "ರಾಷ್ಟ್ರೀಯ ಶೌರ್ಯ" ಪ್ರಶಸ್ತಿ

ಪಿ.ಎಸ್. ಪಾರ್ವತಿ

ವಿದ್ಯುತ್ ಪ್ರವಹಿಸುತ್ತಿದ್ದ ವೈರ್ ಹಿಡಿದು ಸಾವು– ಬದುಕಿನ ಮಧ್ಯ ಹೋರಾಡುತ್ತಿದ್ದ ತಮ್ಮನನ್ನು ರಕ್ಷಿಸಿದ ಸಾಹಸಕ್ಕಾಗಿ ಹುಬ್ಬಳ್ಳಿಯ ಬಾಲಕಿ ಕುಮಾರಿ ಸಿಯಾ ಖೋಡೆ 2016 ನೇ ಸಾಲಿನ " ರಾಷ್ಟ್ರೀಯ ಶೌರ್ಯ" ಪ್ರಶಸ್ತಿಗೆ ಭಾಜನಳಾಗಿದ್ದಾಳೆ. ಪ್ರಾಣದ ಹಂಗು ತೊರೆದು ಅಪ್ರತಿಮ ಶೌರ್ಯ, ಸಾಹಸ ಮೆರೆದು ಸಂಕಷ್ಟದಲ್ಲಿದ್ದವರನ್ನು ರಕ್ಷಿಸುವ ನಿರ್ಭೀತ ಮಕ್ಕಳಿಗೆ ನವದೆಹಲಿಯ ಭಾರತೀಯ ಮಕ್ಕಳ ಕಲ್ಯಾಣ ಮಂಡಳಿ ಈ ಪ್ರಶಸ್ತಿಯನ್ನು ಗಣರಾಜ್ಯೋತ್ಸವದ ಸಂದರ್ಭದಲ್ಲಿ ಕೊಡಮಾಡುತ್ತದೆ. ಮಕ್ಕಳಲ್ಲಿ ಧೈರ್ಯ, ಶೌರ್ಯ ಮತ್ತು ಸಾಹಸಗಳನ್ನು ಪ್ರೋತ್ಸಾಹಿಸುವದು ಈ ಪ್ರಶಸ್ತಿಯ ಉದ್ದೇಶವಾಗಿದೆ.

ಈ ವರ್ಷ ಶೌರ್ಯ ಪ್ರಶಸ್ತಿ ಪಡೆಯಲಿರುವ ರಾಜ್ಯದ ಏಕೈಕ ಬಾಲಕಿ ಸಿಯಾ ವಾಮನಸಾ ಖೋಡೆ ಹುಬ್ಬಳ್ಳಿಯ ಜಗದ್ಗುರು ಮೂರು ಸಾವಿರ ಮಠದ ವಿದ್ಯಾವರ್ಧಕ ಸಂಘದ ಪ್ರೌಢ ಶಾಲೆ ಪ್ರಾಥಮಿಕ ವಿಭಾಗದಲ್ಲಿ ಏಳನೇ ತರಗತಿ ಓದುತ್ತಿರುವ ಬಾಲಕಿ . ವಾಮನಸಾ ಹಾಗೂ ಜಯಶ್ರೀ ಖೋಡೆ ದಂಪತಿಗಳಿಗೆ ಸಿಯಾ ಹಾಗೂ ಯಲ್ಲಪ್ಪ ಎಂಬ ಇಬ್ಬರು ಮಕ್ಕಳು. ತಂದೆ ಡಿಜಿಟಲ್ ಪ್ರಿಂಟಿಂಗ್ ಪ್ರೆಸ್ ನಡೆಸುತ್ತಿದ್ದಾರೆ.

**ಪ್ರಾಣ ಕಾಪಾಡಿದ ಅಕ್ಕ:** ಹನ್ನೆರಡು ವರ್ಷದ ಸಿಯಾ ತನ್ನ ತಮ್ಮ ಯಲ್ಲಪ್ಪನ ಪ್ರಾಣ ಕಾಪಾಡಿದ ಘಟನೆಯನ್ನು ಭಾವುಕಳಾಗಿ ವಿವರಿಸುತ್ತಾಳೆ. ಅಂದು 2015 ನೇ ಏಪ್ರಿಲ್ 14 ರಂದು ಸಂಜೆಗೆ ವಾಳ್ವೇಕರ ಗಲ್ಲಿಯಲ್ಲಿರುವ ನಮ್ಮ ಚಿಕ್ಕಪ್ಪನ ಮನೆಗೆ ತಮ್ಮನೊಂದಿಗೆ ಹೋಗಿದ್ದೆ. ಎಂದಿನಂತೆ ಚಿಕ್ಕಪ್ಪನ ಮಕ್ಕಳು ಹಾಗೂ ನಾನು ಆಟವಾಡಲು ಅವರ ಮನೆ ಮಹಡಿಗೆ ಹೋಗಿದ್ದೆವು. ನನ್ನ ತಮ್ಮ ಯಲ್ಲಪ್ಪ (6 ವರ್ಷ) ಸಹ ನಮ್ಮನ್ನು ಮಹಡಿಗೆ ಹಿಂಬಾಲಿಸಿದ್ದ. ಆದರೆ ಎಷ್ಟೊತ್ತಾದರೂ ಆತ ಆಟ ಮಹಡಿ ಮೇಲೆ ಬರದಿರುವುದನ್ನು ಗಮನಿಸಿದ ನಾನು ಆತನನ್ನು ಹುಡುಕುತ್ತಿದ್ದಾಗ , ಮಹಡಿ ಏರುವಲ್ಲಿದ್ದ ಗ್ರಿಲ್ ಹಿಡಿದುಕೊಂಡಿದ್ದ ಯಲ್ಲಪ್ಪ , ನಿಸ್ತೇಜವಾಗಿ ಅಲುಗಾಡದೇ ನಿಂತಿದ್ದು ಕಂಡು ಆಶ್ಚರ್ಯವಾಯಿತು. ಕೂಗಿದರೂ ಉತ್ತರ ಸಿಗಲಿಲ್ಲ. ಆತ ಹಿಡಿದ ಗ್ರಿಲ್ ಮುಟ್ಟಿದಾಗ ವಿದ್ಯುತ್ ಶಾಕ್‌ನಿಂದಾಗಿ ಕೈ ಝುಮ್ ಎಂದಿತು. ಆತ ಗ್ರೀಲ್ ಬದಿಯಿಂದ ಹಾಯ್ದು ಹೋದ ವಿದ್ಯುತ್ ಪ್ರವಹಿಸುತ್ತಿದ್ದ ತಂತಿ ಹಿಡಿದು ಅದರ ಸಂಪರ್ಕಕ್ಕೆ ಬಂದಿರುವುದು ಕಂಡು ಬಂದಿತು. ಸಹಾಯಕ್ಕಾಗಿ ಕೂಗಿದರೂ ತಕ್ಷಣ ನೆರವಿಗೆ ಬರಲು ಅಲ್ಲಿ ಯಾರೂ ಇರದ ಕಾರಣ ಆತನನ್ನು ಈ ಅವಘಡದಿಂದ ಪಾರು ಮಾಡುವ ಕುರಿತು ಒಂದು ಕ್ಷಣ ಯೋಚಿಸಿ , ಕೂಡಲೇ ನನ್ನೊಂದಿಗಿದ್ದವರಿಗೆ ಇತ್ತ ಬರಬೇಡಿರೆಂದು ತಾಕಿತು ಮಾಡುತ್ತ , ಬಟ್ಟೆ ವಿದ್ಯುತ್‌ಗೆ ನಾನ್‌ಕಂಡಕ್ಟರ್ ಎಂಬ ಓದಿನ ಅಂಶ ನೆನಪಾಗಿ, ನನ್ನ ತಮ್ಮನನ್ನು ಮುಟ್ಟದೇ ಆತ ತೊಟ್ಟಿದ್ದ ಶರ್ಟ್‌ಕಾಲರನ್ನು ಜೋರಾಗಿ ಹಿಡಿದು ಎಳೆದೆ. ಮೊದಲ ಪ್ರಯತ್ನದಲ್ಲಿ ಆತನನ್ನು ಸೆಳೆದುಕೊಳ್ಳಲು ಆಗಲಿಲ್ಲ. ಎರಡನೇ ಬಾರಿ ಎಲ್ಲ ಶಕ್ತಿಯನ್ನು ಒಗ್ಗೂಡಿಸಿ, ಧೈರ್ಯದಿಂದ ಎಳೆದಾಗ ಯಲ್ಲಪ್ಪ ಗ್ರಿಲ್ ಬಿಟ್ಟು ಬಂದಿದ್ದರಿಂದ ಆತ ಸಾವಿನ ದವಡೆಯಿಂದ ತಪ್ಪಿಸಿಕೊಂಡಿದ್ದ. ಕೂಡಲೇ ನಮ್ಮ ಚಿಕ್ಕಪ್ಪ ಆತನನ್ನು ಡಾಕ್ಟರ್ ಬಳಿ ಕರೆದೊಯ್ದು ಸುಟ್ಟ ಎಡ ಕೈಗೆ ಚಿಕಿತ್ಸೆ ಕೊಡಿಸಿದರು ಎಂದು ಹೇಳುವಾಗ ಅವಳ ಕಣ್ಣಲ್ಲಿ ಸಾಧನೆ ಮಾಡಿದ ಹೆಮ್ಮೆ ಮೂಡಿತ್ತು.

**ವರದಿ ತಂದ ಪ್ರಶಸ್ತಿ:** ಸಿಯಾಳ ಈ ಧೈರ್ಯ ಹಾಗೂ ಜಾಣ್ಮೆಯ ಸಾಧನೆ ಕುರಿತು ವಿಜಯವಾಣಿ ಪತ್ರಿಕೆ ವಿಸ್ತೃತ ವರದಿ ಪ್ರಕಟಿಸಿದ್ದರ ಪರಿಣಾಮವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವಾಮನಸಾ ಖೋಡೆ ಅವರನ್ನು ಸಂಪರ್ಕಿಸಿ , ಮಾಹಿತಿ ಪಡೆದುಕೊಂಡಿತು. ಇದರಿಂದಾಗಿ 2015 ನವೆಂಬರ್ 14ರಂದು ಮಕ್ಕಳ ದಿನಾಚರಣೆ ಸಂದರ್ಭದಲ್ಲಿ ಕರ್ನಾಟಕ ಸರಕಾರ ಸಿಯಾಳಿಗೆ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಆಗ ರಾಷ್ಟ್ರೀಯ ಶೌರ್ಯ ಪ್ರಶಸ್ತಿಗೆ ಅರ್ಜಿ ಕಳಿಸುವ ಕಾಲಮಿತಿ ದಾಟಿದ್ದರಿಂದಾಗಿ ರಾಷ್ಟ್ರೀಯ ಶೌರ್ಯ ಪ್ರಶಸ್ತಿಯನ್ನು 2016ರಲ್ಲಿ 'ಸಿಯಾ' ತನ್ನ ಮುಡಿಗೇರಿಸಿಕೊಂಡಿದ್ದಾಳೆ. ಇವಳ ಈ ಸಾಹಸವನ್ನು ಮೆಚ್ಚಿ ಧಾರವಾಡದ ಆರ್.ಕೆ. ಫೌಂಡೇಶನ್ , ತುಮಕೂರಿನ ರಾಮಕೃಷ್ಣ– ವಿವೇಕಾನಂದ ಆಶ್ರಮದ ವತಿಯಿಂದ ಸನ್ಮಾನಿಸಿ ಅಭಿನಂದನಾ ಪತ್ರ ಹಾಗೂ ನಗದು ಪ್ರೋತ್ಸಾಹಧನ ನೀಡಿ ಗೌರವಿಸಿದ್ದಾರೆ. ಶಾಸಕ ಅಬ್ಬಯ್ಯ ಪ್ರಸಾದ ಸಹ ನಗದು ನೀಡಿ ಪ್ರೋತ್ಸಾಹಿಸಿದ್ದಾರೆ. ದೆಹಲಿಯಿಂದ ಪ್ರಶಸ್ತಿ ಪಡೆದು ಬಂದ ನಂತರ ಹುಬ್ಬಳ್ಳಿ ನಗರದಲ್ಲಿ ಸಿಯಾಳನ್ನು ಮೆರವಣಿಗೆಯಲ್ಲಿ ಕರೆತಂದು ಸನ್ಮಾನಿಸಿ ಗೌರವಿಸಿದ್ದಾರೆ.


ಕುಟುಂಬದೊಂದಿಗೆ ಸಿಯಾ ಖೋಡೆ

**ಅಪರೂಪದ ಅವಕಾಶ:** ರಾಷ್ಟ್ರೀಯ ಶೌರ್ಯ ಪ್ರಶಸ್ತಿ ಪಡೆದ ಕರ್ನಾಟಕದ ಪ್ರತಿಭೆ "ಸಿಯಾ" ಇದೇ ಜನವರಿ 23 ರಂದು ದೆಹಲಿಗೆ ತನ್ನ ಪಾಲಕರೊಂದಿಗೆ ತೆರಳಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರಿಂದ ಪ್ರಶಸ್ತಿ ಪಡೆದದ್ದು ಅಪರೂಪದ ಹಾಗೂ ಅವಿಸ್ಮರಣೀಯ ಸಂಗತಿ ಎಂದು ಬಣ್ಣಿಸುತ್ತಾಳೆ. ಪ್ರಶಸ್ತಿ ಪಡೆದುದಕ್ಕಾಗಿ ಜನವರಿ 26 ರಂದು ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಭಾಗವಹಿಸುವ ಅವಕಾಶ ದೊರೆಯಿತಲ್ಲದೇ ಇವಳಂತೆ ಪ್ರಶಸ್ತಿ ಪಡೆದ 20 ಮಕ್ಕಳೊಂದಿಗೆ ಹತ್ತು ದಿನ ದೆಹಲಿಯಲ್ಲಿದ್ದು , ರಾಷ್ಟ್ರಪತಿಗಳು , ಉಪರಾಷ್ಟ್ರಪತಿಗಳು ಮತ್ತು ಸೇನಾ, ನೌಕಾ ಹಾಗೂ ವೈಮಾನಿಕ ದಳದ ಮುಖ್ಯಸ್ಥರಿಂದ ಆತಿಥ್ಯ ಸ್ವೀಕರಿಸಿ ಪ್ರಶಂಸೆ ಮತ್ತು ಕಾಣಿಕೆ ಪಡೆದದ್ದು ಜೀವಮಾನದ ಸಂತಸದ ಕ್ಷಣ ಎಂದು ಬಣ್ಣಿಸುತ್ತಾರೆ ಸಿಯಾಳ ಪಾಲಕರು.

**ಸಾಧನೆಗೆ ಸಂದ ಗೌರವ:** ರಾಷ್ಟ್ರೀಯ ಶೌರ್ಯ ಪ್ರಶಸ್ತಿ ಪುರಸ್ಕೃತೆ ಸಿಯಾಗೆ ಪ್ರಶಸ್ತಿ ಪ್ರಮಾಣಪತ್ರ , ಮೆಡಲ್ ಹಾಗೂ 20 ಸಾವಿರ ರೂ.ಗಳ ನಗದು ಬಹುಮಾನ ಲಭಿಸಿದೆ. ಇದಲ್ಲದೇ ಬ್ಯಾಂಕ್ ಆಫ್ ಪಟಿಯಾಲ ಇವಳ ಹೆಸರಲ್ಲಿ 20 ಸಾವಿರ ರೂ.ಗಳ ಠೇವಣಿ ಇಟ್ಟು ಪ್ರಮಾಣ ಪತ್ರ ನೀಡಿದೆ. ಸೆಂಟ್ರಲ್ ಬ್ಯಾಂಕ್ ಇಂಡಿಯಾ ಸಹ ಇವಳ ಹೆಸರಲ್ಲಿ ಖಾತೆ ತೆರೆದು 1100 ರೂ.ಗಳ ಠೇವಣಿ ನೀಡಿದೆ. ಸಿಯಾಗೆ 18 ವರ್ಷ ವಾಗುವವರೆಗೆ ಅವಳಿಗೆ ಹಾಗೂ ಅವಳ ಓರ್ವ ಸಹಾಯಕರಿಗೆ ಭಾರತೀಯ ರೇಲ್ವೆಯಲ್ಲಿ ಉಚಿತವಾಗಿ ದೇಶದಾದ್ಯಂತ ಸಂಚರಿಸಲು ಅವಕಾಶ ಒದಗಿಸಲಾಗಿದೆ. ಸಿಯಾ ಉನ್ನತ ಶಿಕ್ಷಣ ಪಡೆಯಲು ಮುಂದಾದಲ್ಲಿ ಅವಳ ಶಿಕ್ಷಣ ವೆಚ್ಚವನ್ನು ಸಹ ಕೇಂದ್ರ ಸರ್ಕಾರ ಭರಿಸಲಿದೆ.

**ದೇಶ ಸೇವೆಯ ಗುರಿ:** ಎಳೆ ವಯಸ್ಸಿನಲ್ಲಿ ಶೌರ್ಯ ಪ್ರಶಸ್ತಿ ಪಡೆದಿರುವ ಸಿಯಾ ಭವಿಷ್ಯದಲ್ಲಿ ಇಂಜಿನಿಯರಿಂಗ್ ಶಿಕ್ಷಣ ಪಡೆದು ಸೇನೆ ಸೇರುವ ಮೂಲಕ ದೇಶ ಸೇವೆ ಮಾಡುವ ಗುರಿ ಹೊಂದಿರುವುದಾಗಿ ತಿಳಿಸುತ್ತಾಳೆ. ಸಿಯಾಗೆ ಹಾಡು ನೃತ್ಯದಲ್ಲೂ ಆಸಕ್ತಿಯಿದೆ. ಸಿಯಾಳ ವ್ಯಕ್ತಿತ್ವ ರೂಪಿಸಬೇಕಾದ ಮಹತ್ವದ ಹೊಣೆ ಹೊತ್ತಿರುವ ಪಾಲಕರು ಯಶಸ್ವಿ ಹೆಜ್ಜೆಗಳನ್ನಿಡುವ ಮೂಲಕ ಅವಳ ಬಾಳ ಹಾದಿಯಲ್ಲಿ ಬಣ್ಣದ ಚಿತ್ತಾರ ಮೂಡಿಸಿದ್ದಾರೆ. " ನನ್ನ ಮಗಳು ಸಿಯಾಗೆ ರಾಷ್ಟ್ರೀಯ ಪ್ರಶಸ್ತಿ ದೊರೆತದ್ದು ಆಕಸ್ಮಿಕ . ಆದರೆ ಘಟನೆ ಮರೆಯಲಾರದ್ದು. ಈ ಅವಘಡದಲ್ಲಿ ನನ್ನ ಇಬ್ಬರೂ ಮಕ್ಕಳು ಉಳಿದಿದ್ದು, ರಾಷ್ಟ್ರೀಯ ಶೌರ್ಯ ಪ್ರಶಸ್ತಿಗಿಂತ ಹೆಚ್ಚಿನ ಸಂತೋಷ ತಂದಿದೆ " ಎನ್ನುತ್ತಾರೆ ತಂದೆ ವಾಮನಸಾ ಖೋಡೆ.

ಮಗಳಿಂದಾಗಿ ನಮಗೆ ಪ್ರಧಾನಿಯವರನ್ನು ಕಾಣುವ ಸೌಭಾಗ್ಯ ದೊರೆಯಿತು. ತಮ್ಮನ ಜೀವ ಉಳಿಸಿ ತಾಯಿಯಾಗಿ ಮೆರೆದಿದ್ದಾಳೆ. ನಾನು ಸಿಯಾಳ ತಾಯಿ ಎಂದು ಹೇಳಿಕೊಳ್ಳಲು ಬಹಳ ಹೆಮ್ಮೆಯಾಗುತ್ತದೆ ಎಂದು ಹರ್ಷದಿಂದ ಹೇಳುತ್ತಾರೆ



# ಮಹಿಳಾ ಸಬಲೀಕರಣ

## ಸವಾಲುಗಳು ಮತ್ತು ಪರಿಹಾರಗಳು

> ರಾಜಕೀಯ ಕ್ಷೇತ್ರದಲ್ಲಿ ಮಹಿಳಾ ಮೀಸಲಾತಿ ಅದರಲ್ಲಿಯೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಎಂದರೆ, ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳಲ್ಲಿ ಮಹಿಳಾ ಮೀಸಲಾತಿಯನ್ನು ಶೇಕಡಾ ಐವತ್ತಕ್ಕೇರಿಸಲಾಗಿದೆ. ಇದು ಈಗಾಗಲೇ ಜಾರಿಗೆ ಬಂದು ಉತ್ತಮ ಫಲಿತಾಂಶವೂ ಕೂಡ ಕಾಣಬರುತ್ತಿದೆ.

ಪಾರ್ವತಿ ಪಿಟಗಿ

ದೇಶವು ಆರ್ಥಿಕವಾಗಿ ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಮತ್ತು ಎಲ್ಲ ಕ್ಷೇತ್ರಗಳಲ್ಲಿಯೂ ಸುಧಾರಣೆ, ಬದಲಾವಣೆಗಳನ್ನು ತರುವಲ್ಲಿ ಮಹಿಳೆಯ ಪಾತ್ರ ಮಹತ್ವದ್ದು. ಆದ್ದರಿಂದ ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆಗೆ ಸಮಾನ ಅವಕಾಶ ಹಾಗೂ ಮಹಿಳೆಯ ಸಕ್ರಿಯ ಪ್ರಾತಿನಿಧ್ಯ ಅನಿವಾರ್ಯ ಎನ್ನುವ ಸತ್ಯವನ್ನು ಅರಿತಿದ್ದರಿಂದಲೇ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮಹಿಳಾ ಸಬಲೀಕರಣಕ್ಕೆ ಸಾಕಷ್ಟು ಕ್ರಮಗಳನ್ನು ಕೈಗೊಂಡಿವೆ. ಮಹಿಳಾ ಸಬಲೀಕರಣ ಎಂದರೆ, ಮಹಿಳೆಯರ ಸರ್ವತೋಮುಖ ಅಭಿವೃದ್ಧಿ. ಇದನ್ನು ಸಾಧಿಸಲು ಅಗತ್ಯವಾದ ಕ್ರಮಗಳನ್ನು ಸಂವಿಧಾನದ ರಾಜ್ಯ ನಿರ್ದೇಶಕ ತತ್ವಗಳಲ್ಲೇ ಪ್ರಸ್ತಾಪಿಸಲಾಗಿದೆ. ಉದಾಹರಣೆಗೆ ಅನುಚ್ಛೇದ 39 (ಎ) ಪುರುಷ ಹಾಗೂ ಮಹಿಳೆಗೆ ಜೀವನೋಪಾಯದ ಸಮಾನ ಅವಕಾಶಗಳನ್ನು ಸರ್ಕಾರ ಒದಗಿಸಬೇಕೆಂದು ಹೇಳುತ್ತದೆ. ಸಮಾನ ಕೆಲಸಗಳಿಗಾಗಿ ಪುರುಷ ಹಾಗೂ ಸ್ತ್ರೀಗೆ ಸಮಾನ ವೇತನ ನೀಡಬೇಕೆಂದು ಅನುಚ್ಛೇದ 39 (ಡಿ) ಹೇಳುತ್ತದೆ. ಅನುಚ್ಛೇದ 42 ಹೇಳುವುದೇನೆಂದರೆ ಮಹಿಳೆಗೆ ಕೆಲಸದ ವಾತಾವರಣ ಅಪಾಯಕಾರಿಯಲ್ಲದ್ದಾಗಿರಬೇಕು ಹಾಗೂ ಮಾನವೀಯವಾಗಿರಬೇಕು ಎಂದು ಹೇಳುವುದಲ್ಲದೇ ಮಹಿಳೆಗೆ ತಾಯ್ತನಕ್ಕೆ ಸಂಬಂಧಿಸಿದಂತೆ ಸವಲತ್ತುಗಳನ್ನು ನೀಡಬೇಕೆಂದು ಹೇಳುತ್ತದೆ. ಈ ನಿಟ್ಟಿನಲ್ಲಿ ಸಂಸತ್ ಹಲವಾರು ಕಾಯಿದೆಗಳನ್ನು ಜಾರಿಗೊಳಿಸಿದೆ. ಇವುಗಳಲ್ಲಿ ಪ್ರಮುಖ ಕಾನೂನುಗಳನ್ನು ಸರ್ಕಾರ ಜಾರಿಗೆ ತಂದಿದೆ. ಅವುಗಳೆಂದರೆ:

* ವರದಕ್ಷಿಣೆ ನಿಷೇಧ ಕಾಯಿದೆ, 1961
* ತಾಯ್ತನ ಸವಲತ್ತು ಕಾಯಿದೆ, 1961
* ವೈದ್ಯಕೀಯ ಗರ್ಭಪಾತ ಕಾಯಿದೆ, 1971
* ಸಮಾನ ವೇತನ ಕಾಯಿದೆ, 1976
* ಸತಿ ನಿಷೇಧ ಕಾಯಿದೆ, 1987
* ಬಾಲ್ಯವಿವಾಹ ನಿಷೇಧ ಕಾಯಿದೆ, 2006
* ನೌಕರಿಯ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ನಿಷೇಧ ಮತ್ತು ರಕ್ಷಣೆಯ ಕಾನೂನು, 2013

ಇವೆಲ್ಲವನ್ನೂ ಕೇಂದ್ರೀಯ ಶಾಸಕಾಂಗ ಮತ್ತು ಕಾರ್ಯಾಂಗ ಹಮ್ಮಿಕೊಂಡದ್ದು ಮಹಿಳೆಗೆ ಸವಲತ್ತುಗಳನ್ನು ನೀಡುವುದಲ್ಲದೇ ಆಕೆಗೆ ರಕ್ಷಣೆ ನೀಡಿ ಸಮಾಜದಲ್ಲಿ ಪುರುಷನಿಗೆ ಸರಿಸಮನಾಗಿ ನಿಂತು ಗೌರವಯುತವಾಗಿ ಬದುಕಲು ಅನುಕೂಲ ಹಾಗೂ ಅವಕಾಶಗಳನ್ನು ಕಲ್ಪಿಸುವುದಕ್ಕಾಗಿ. ಹೀಗೆ ಮಹಿಳೆಯನ್ನು ಪುರುಷನಿಗೆ ಸಮಾನಳನ್ನಾಗಿಸುವ ಉದ್ದೇಶದಿಂದ ಸಾಕಷ್ಟು ಕ್ಷೇತ್ರಗಳಲ್ಲಿ ಮಹಿಳಾ ಮೀಸಲಾತಿಯನ್ನು ಜಾರಿಗೊಳಿಸಲಾಗಿದೆ. ಅಷ್ಟೇ ಅಲ್ಲ, ಸುಸ್ಥಿರ ಅಭಿವೃದ್ಧಿ ಗುರಿ ಯಲ್ಲಿ ಮಹಿಳಾ ಸಬಲೀಕರಣವನ್ನು ಮೂರನೆಯ ಪ್ರಮುಖ ಗುರಿಯನ್ನಾಗಿಸಿದೆ ಮತ್ತು 2001ರಲ್ಲಿ ಮಹಿಳಾ ಸಬಲೀಕರಣ ಸಲುವಾಗಿ ರಾಷ್ಟ್ರೀಯ ನೀತಿಯನ್ನು ಮತ್ತು 2008ರಲ್ಲಿ ವಿಶ್ವಸಂಸ್ಥೆಯ ಮಹಿಳಾ ಕಾರ್ಯಕ್ರಮದ ಮೂಲಕ ಮಹಿಳೆಯರನ್ನು ರಾಜಕೀಯವಾಗಿ ಉತ್ತೇಜಿಸಲು ಸಾಕಷ್ಟು ಮಹತ್ವ ನೀಡಲಾಗಿದೆ.

ಸರಕಾರ ನೀಡಿದ ಸವಲತ್ತುಗಳ ಜೊತೆಗೆ, ಇಂದಿನ ಶಿಕ್ಷಿತ ಸ್ತ್ರೀಯ ಜಾಗೃತಿ ಪ್ರಜ್ಞೆ ರಾಜಕೀಯ, ಆರ್ಥಿಕ, ಸಾಮಾಜಿಕ ಎಲ್ಲ ರಂಗಗಳಲ್ಲಿಯೂ ಸಮಾನತೆಯನ್ನು ಪಡೆಯುವತ್ತ ದಾಪುಗಾಲು ಹಾಕುತ್ತಿವೆಯಾದರೂ ಎಲ್ಲ ಕ್ಷೇತ್ರದಲ್ಲೂ ತನ್ನ ಹಕ್ಕನ್ನು ಪೂರ್ಣವಾಗಿ ಪಡೆಯುವಲ್ಲಿ ಮಹಿಳೆ ಸಫಲವಾಗಿಲ್ಲ. ರಾಜಕೀಯರಂಗವೂ ಕೂಡ ಇದರಿಂದ ಹೊರತಾಗಿಲ್ಲ. ರಾಜಕೀಯ ಕ್ಷೇತ್ರದ ಮಹತ್ವವನ್ನು ಗಮನಿಸಿ ಆ ಕ್ಷೇತ್ರದಲ್ಲಿ ಮಹಿಳಾ ಸಬಲೀಕರಣದ ಪ್ರಯತ್ನ, ಸಾಧನೆ ಹಾಗೂ ವೈಫಲ್ಯಗಳನ್ನು ಈ ಲೇಖನದಲ್ಲಿ ಪ್ರಮುಖವಾಗಿ ಚರ್ಚೆಗೆತ್ತಿಕೊಳ್ಳಲಾಗಿದೆ.

ರಾಜಕೀಯ ಕ್ಷೇತ್ರದಲ್ಲಿ ಮಹಿಳಾ ಮೀಸಲಾತಿ ಅದರಲ್ಲಿಯೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಎಂದರೆ, ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳಲ್ಲಿ ಮಹಿಳಾ ಮೀಸಲಾತಿಯನ್ನು ಶೇಕಡಾ ಐವತ್ತಕ್ಕೇರಿಸಲಾಗಿದೆ. ಇದು ಈಗಾಗಲೇ ಜಾರಿಗೆ ಬಂದು ಉತ್ತಮ ಫಲಿತಾಂಶವೂ ಕೂಡ ಕಾಣಬರುತ್ತಿದೆ. ಹೀಗೆ ರಾಜಕೀಯ ಕ್ಷೇತ್ರದಲ್ಲಿ ಹೆಚ್ಚಿದ ಮಹಿಳಾ ಪ್ರಾತಿನಿಧ್ಯ ಹಾಗೂ ರಾಜಕೀಯ ಪ್ರಭಾವ ಸಹಜವಾಗಿಯೇ ಮಹಿಳಾ ಸಮಾನತೆಯನ್ನು ಹೆಚ್ಚಿಸಲು ಅನುಕೂಲವಾಗಿದೆ.

ಈ ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿಯ ಜೊತೆಗೆ ಮಹಿಳೆಯರ ಭಾಗವಹಿಸುವಿಕೆಯ ಪ್ರಮಾಣವೂ ಸಾಕಷ್ಟು ಹೆಚ್ಚಾಗಿದೆ. ಪರಿಣಾಮವಾಗಿ ಶೇಕಡಾ ಐವತ್ತಕ್ಕಿಂತ ಹೆಚ್ಚು ಮಹಿಳಾ ಗ್ರಾಮ ಪಂಚಾಯತ್ ಸದಸ್ಯರು ಸದ್ಯ ನಮ್ಮ ರಾಜ್ಯದಲ್ಲಿದ್ದಾರೆ. ಮತ್ತು ಸಾಕಷ್ಟು ಗ್ರಾಮ ಪಂಚಾಯತಿಗಳಲ್ಲಿ ಮಹಿಳಾ ಸದಸ್ಯರುಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೂ ಇಲ್ಲಿಯೂ ಕೂಡ ಸಂಪೂರ್ಣವಾಗಿ ಮಹಿಳಾ ಸಬಲೀಕರಣವಾಗಿದೆ ಎಂದು ಹೇಳಲಾಗುವುದಿಲ್ಲ ಮತ್ತು ಮಹಿಳೆ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದ್ದಾಳೆಂದೂ ಹೇಳಲಾಗುವುದಿಲ್ಲ.

ಮಹಿಳಾ ಜನಪ್ರತಿನಿಧಿಗಳು ಸಂಪೂರ್ಣವಾಗಿ ತಮ್ಮ ಪ್ರಾಬಲ್ಯ ಮೆರೆಯಲು ಸಾಧ್ಯವಾಗದೇ ಇರುವುದಕ್ಕೆ ಹಲವು ಸಾಮಾಜಿಕ ಹಾಗೂ ಧಾರ್ಮಿಕ ಕಾರಣಗಳಿವೆ. ಪ್ರಪಂಚದ ಎಲ್ಲಾ



ಜನಾಂಗಗಳಲ್ಲಿ ಹೆಣ್ಣನ್ನು ಎರಡನೆಯ ದರ್ಜೆಯ ವ್ಯಕ್ತಿಯನ್ನಾಗಿ ಕಾಣುವ ಪ್ರವೃತ್ತಿ ಇದ್ದೇ ಇದೆ. ಈ ರೀತಿಯ ಸಂಗತಿಗಳೇ ಒಂದು ಸಾಮಾಜಿಕ ವ್ಯವಸ್ಥೆಯಾಗಿ ರೂಪುಗೊಂಡಿದ್ದು ಅವು ಪುರುಷನ ಪರವಾಗಿವೆ. ಹಾಗಾಗಿ ಇಂದಿಗೂ ಪುರುಷಪ್ರಧಾನ ವ್ಯವಸ್ಥೆ ಮಹಿಳೆಯನ್ನು ಆಳುವಂತಾಗಿದೆ. ಆದ್ದರಿಂದ ಇಂತಹ ಪುರುಷಪ್ರಧಾನ ರಾಷ್ಟ್ರಗಳಲ್ಲಿ ಮಹಿಳಾ ಸಬಲೀಕರಣ ಬಲು ಕಷ್ಟಕರವಾಗಿದೆ.  ಸಹಜವಾಗಿಯೇ ಇದು ರಾಜಕೀಯ ಕ್ಷೇತ್ರದಲ್ಲೂ ಕಾಣಿಸುತ್ತದೆ.

ಪುರುಷಪ್ರಧಾನ ಸಮಾಜ ರೂಢಿಗತಗೊಳಿಸಿಕೊಂಡಿರುವ ರೀತಿ ರಿವಾಜು, ನೀತಿ ನಿಯಮಗಳ ಪರಿಣಾಮವಾಗಿ ಮಹಿಳಾ ಜನಪ್ರತಿನಿಧಿಗಳು ಎಷ್ಟೇ ಶಿಕ್ಷಿತರಾಗಿದ್ದರೂ, ಅದೆಷ್ಟೇ ಜಾಣೆಯರಿದ್ದರೂ ಕೂಡ ಗಂಡನ ಮಾತಿಗೆ ಪ್ರಾಶಸ್ತ್ಯ ನೀಡಲೇಬೇಕು ಎನ್ನುವ ಕಟ್ಟುಪಾಡಿಗೆ ಒಳಪಟ್ಟಿರುವ ಕಾರಣದಿಂದಾಗಿ ಹಾಗೂ ಸಾಮಾನ್ಯವಾಗಿ ಮಹಿಳೆ ಜೀವನೋಪಾಯ ಗಳಿಕೆಗಾಗಿ ಗಂಡನ ಅಥವಾ ಮನೆಯ ಇತರ ಗಂಡಸರನ್ನು ಅವಲಂಬಿಸಿರುವುದರಿಂದಾಗಿ ಸಹಜವಾಗಿಯೇ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷೆಯರೂ, ಸದಸ್ಯೆಯರೂ ಆದ ಮಹಿಳೆಯರೂ ಕೂಡಾ ಮನೆಯಲ್ಲಿನ ಪುರುಷರ ಮಾತಿಗೆ ತಲೆಬಾಗುವ ಮೂಲಕ ತಮ್ಮ ಸ್ವಂತ ನಿಲುವನ್ನೇ ಕಳೆದುಕೊಂಡಿದ್ದಾರೆ. ಇಂಥ ಸದಸ್ಯೆಯರ ಧ್ವನಿ ಅವರ ಗಂಡಸರ ಪ್ರತಿಧ್ವನಿಯಾಗಿದೆ ಎಂದರೆ ತಪ್ಪಾಗಲಾರದು. ಹೀಗಾಗಿ ಅವರು ಗ್ರಾಮದ ಅಭಿವೃದ್ಧಿಪರ ಯೋಜನೆಗಳ ಕುರಿತಾಗಿ ಸ್ವಂತ ನಿರ್ಧಾರಗಳನ್ನು ತಳೆಯುವಲ್ಲಿ ಸೋಲುತ್ತಿದ್ದಾರೆ.

ರಾಜಕೀಯ ವಿಷಯದಲ್ಲಿ ಹೆಂಗಸರು ಕಡಿಮೆ ತಿಳುವಳಿಕೆ ಹೊಂದಿರುವುದು ಅವರ ರಾಜಕೀಯ ಸಬಲೀಕರಣ ನಿರೀಕ್ಷಿತ ಪ್ರಮಾಣದಲ್ಲಿ ಆಗದಿರಲು ಮತ್ತೊಂದು ಪ್ರಮುಖ ಕಾರಣವಾಗಿದೆ. ಒಬ್ಬ ಅನಕ್ಷರಸ್ತ ಪುರುಷ ಮತ್ತು ಒಬ್ಬಳು ಅನಕ್ಷರಸ್ತ ಮಹಿಳೆ ಇಬ್ಬರಲ್ಲಿಯೂ ಸಾಕಷ್ಟು ವ್ಯತ್ಯಾಸವಿದೆ. ಇಬ್ಬರೂ ಅನಕ್ಷರಸ್ತರೇ ಆದರೂ ಕೂಡ ಪುರುಷ ರಾಜಕೀಯ ವಿಷಯಗಳನ್ನು ಆಗುಹೋಗುಗಳನ್ನು ಬಲ್ಲವನಾಗಿರುತ್ತಾನೆ. ಆದರೆ ಮಹಿಳೆ ಅಷ್ಟಾಗಿ ಅರಿತಿರುವುದಿಲ್ಲ. ಗಂಡಸರು ನಾಲ್ಕೈದು ಜನ ಸೇರಿ ಏನಾದರೂ ಚರ್ಚಿಸುತ್ತಿದ್ದರೆ, ಅಥವಾ ಮಾತನಾಡುತ್ತಿದ್ದರೆ, ಖಂಡಿತವಾಗಿಯೂ ಅದು ರಾಜಕೀಯ ವಿಷಯವಾಗಿರುತ್ತದೆ. ನಾಲ್ಕೇ ನಾಲ್ಕು ಮನೆಗಳ ಹಳ್ಳಿಯಾಗಿದ್ದರೂ ಅಲ್ಲಿ ರಾಜಕೀಯವಿದ್ದೇ ಇರುತ್ತದೆ. ಮತ್ತು ಅದು ಹೆಚ್ಚು ಗಂಡಸರಿಂದ ಚರ್ಚಿಸಲ್ಪಡುತ್ತಿರುತ್ತದೆ.

ಹೆಂಗಸರು ಗಂಡಸರಿಗಿಂತ ಹೆಚ್ಚು ಗುಂಪಾಗಿ ಸೇರುತ್ತಾರೆ ಮತ್ತು ಅವರಿಗಿಂತ ಹೆಚ್ಚು ಮಾತನಾಡುತ್ತಾರೆ. ಆದರೆ ಅವರು ಚರ್ಚಿಸುವ ವಿಷಯ ಮಾತ್ರ ಮುಖ್ಯವಾಗಿ ಒಡವೆಗಳು, ವಸ್ತ್ರಗಳು ಒಟ್ಟಿನಲ್ಲಿ ಉಡುಗೆ ತೊಡುಗೆಯ ಹೆಚ್ಚೆಂದರೆ ಖಾಸಗೀ ಚಾನೆಲ್‌ಗಳಲ್ಲಿ ಹರಿದು ಬರುವ ಕಳಪೆ ಧಾರಾವಾಹಿಗಳು ಮತ್ತು ರಿಯಾಲಿಟಿ ಶೋಗಳದ್ದಾಗಿರುತ್ತದೆ. ಹಾಗಾಗಿ ರಾಜಕೀಯ ವಿಷಯಗಳಿಂದ ಅವರು ತುಂಬಾ ದೂರವಿರುತ್ತಾರೆ. ಹೀಗಾಗಿ ಒಬ್ಬ ಅನಕ್ಷರಸ್ತ ಸ್ತ್ರೀ ಯಾವುದೇ ಒತ್ತಡಕ್ಕೆ ಮಣಿದು ರಾಜಕೀಯ ಕ್ಷೇತ್ರಕ್ಕೆ ಧುಮುಕಿದಾಗ, ಆಕೆ ಅಷ್ಟೊಂದು ಸಶಕ್ತವಾಗಿ ಕೆಲಸ ಮಾಡಲಾಗುವುದಿಲ್ಲ. ಆದರೆ ರಾಜಕೀಯದ ಪ್ರತಿಯೊಂದು ಮುಖವನ್ನು ಬಲ್ಲವನಾದ ಪುರುಷ ಸರಳವಾಗಿ ಕೆಲಸ ನಿಭಾಯಿಸಿ ತನ್ನ ಪ್ರಾಬಲ್ಯ ಮೆರೆಯಬಲ್ಲ.

ಪುರುಷರು ದೈಹಿಕವಾಗಿ ಮಹಿಳೆಯರಿಗಿಂತ ಪ್ರಬಲರು ಎಂಬ ನೈಸರ್ಗಿಕ ವಾಸ್ತವದಿಂದಲೇ ಮೊದಲಿನಿಂದ ಪುರುಷ ದೈಹಿಕವಾಗಿ ಕಠಿಣ ಕೆಲಸಗಳಾದ ಭಾರ ಎತ್ತುವ ಕೆಲಸ, ರೆಂಟೆ ಹೊಡೆಯುವ ಕೆಲಸ ಮುಂತಾದವುಗಳನ್ನು ಮಾಡುತ್ತಿದ್ದ. ಅದೇ ರೀತಿ ದುಡಿದು ಬಂದ ಪುರುಷನಿಗೆ ಮಹಿಳೆ ಅಡುಗೆ ಕೆಲಸ ಮಾಡುತ್ತಿದ್ದಳಷ್ಟೇ. ಅದು ಬಿಟ್ಟು ಅಡುಗೆ ಕೆಲಸ ಮಹಿಳೆಗೇ ಮೀಸಲು ಎಂದೇನಲ್ಲ. ಈಗ ಮಹಿಳೆ ಪುರುಷನಿಗೆ ಸರಿಸಮಾನಳಾಗಿ ಕಛೇರಿಯಲ್ಲಿ ದುಡಿಯುತ್ತಿರುವಾಗ ಪುರುಷನೇ ಏಕೆ ಅಡುಗೆ ಕೆಲಸ ನಿರ್ವಹಿಸಬಾರದು ಅಥವಾ ಅದನ್ನು ಮಹಿಳೆಯೊಂದಿಗೆ ಹಂಚಿಕೊಳ್ಳಬಾರದು? ಮಹಿಳೆಯೊಬ್ಬಳೇ ಮನೆ ಹಾಗೂ ಅಡುಗೆ ಕೆಲಸಗಳಿಗೆಲ್ಲ ಹೊಣೆಗಾರಳೇ?

ರಾಜಕೀಯ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರೂ ಕೂಡ ಮನೆಯ ಎಲ್ಲ ಕೆಲಸಗಳನ್ನು ನಿಭಾಯಿಸಿಕೊಂಡು ನಂತರ ತಮ್ಮ ಕೆಲಸಗಳಿಗೆ ತೊಡಗುವುದರಿಂದ ಗಂಡಸರ ಹಾಗೇ ಸಂಪೂರ್ಣವಾಗಿ ತಮ್ಮನ್ನು ತಾವು ತಮ್ಮ ಕೆಲಸದಲ್ಲಿ ತೊಡಗಿಸಿಕೊಳ್ಳಲಾಗದೇ ಇರುವುದು ಕೂಡ ಮಹಿಳಾ ಸದಸ್ಯೆಯರ ಸಮಸ್ಯೆಯಾಗಿದೆ.

ಗ್ರಾಮ ಪಂಚಾಯತಿ ಸದಸ್ಯೆಯರಿಗಂತೂ ತಿಂಗಳಿಗೊಮ್ಮೆ ಹಮ್ಮಿಕೊಳ್ಳುವ ಸಾಮಾನ್ಯ ಸಭೆಗೆ ಹಾಜರಾಗುವುದು ಕೂಡ ದುಸ್ತರವಾಗಿದೆ. ಸಾಮಾನ್ಯ ಸಭೆಗೆ ಹಾಜರಾಗುವುದು ಕಡ್ಡಾಯವಾಗಿರುವುದರಿಂದ ಈ ಮಹಿಳಾ ಜನಪ್ರತಿನಿಧಿಗಳೇನೋ ಕಡ್ಡಾಯವಾಗಿ ಹಾಜರಾಗುವರು ಆದರೆ, ಸಭೆಯಲ್ಲಿ ನಡೆಯುವ ಚರ್ಚೆಗಳ ಬಗ್ಗೆ ಯಾವ ತಿಳುವಳಿಕೆ ಇಲ್ಲದೇ ಇರುವುದರಿಂದ ಯಾರನ್ನೂ ಕೂಡ ಏನನ್ನೂ ಪ್ರಶ್ನಿಸದೇ, ಚರ್ಚೆಗಳಲ್ಲಿ





**ಮಹಿಳಾ ಸಬಲೀಕರಣವೆಂದರೆ ಸಮಾಜದ, ರಾಷ್ಟ್ರದ ಸಬಲೀಕರಣ ಎಂಬ ಅಂತಿಮ ಸತ್ಯವನ್ನು ಎಲ್ಲರೂ ಅರಿತುಕೊಂಡು ಆ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕಾರ್ಯಪ್ರವೃತ್ತರಾಗಬೇಕು.**



ಭಾಗಿಯಾಗದೇ ಹಾಗೇ ಕುಳಿತು ಹಾಗೇ ಎದ್ದು ಬರುವಂತಾಗುತ್ತದೆ.

ಇದರ ಜತೆಗೇ, ಸಮಾಜದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಮಹಿಳಾ ಶೋಷಣೆ, ಅತ್ಯಾಚಾರ, ಭ್ರೂಣ ಹತ್ಯೆ ಮತ್ತು ಹೆಣ್ಣು ಮಕ್ಕಳ ವ್ಯಾಪಾರದಂತಹ ವಿಷಯಗಳು ಮಹಿಳೆಯರ ಆತ್ಮವಿಶ್ವಾಸ ಹಾಗೂ ಧೈರ್ಯವನ್ನು ಕುಂದಿಸಿ ಆಕೆ ಯಾವುದೇ ಕೆಲಸದಲ್ಲಿ ಪೂರ್ಣವಾಗಿ, ಸಕ್ರಿಯವಾಗಿ ತೊಡಗಿಸಿಕೊಳ್ಳದಂತೆ ಮಾಡುತ್ತಿವೆ.

ಯಾವುದೇ ಕೆಲಸ ಇರಲಿ ಅದರಲ್ಲಿ ನಮ್ಮನ್ನು ನಾವು ಸಂಪೂರ್ಣವಾಗಿ ತೊಡಗಿಸಿಕೊಂಡಾಗ ಮಾತ್ರ ಯಶಸ್ಸನ್ನು ಕಾಣುವುದು ಸಾಧ್ಯ. ಹೆಂಗಸರಾಗಲಿ ಗಂಡಸರಾಗಲಿ ಆ ಕೆಲಸದ ಸಂಪೂರ್ಣ ತಿಳುವಳಿಕೆ ಹೊತ್ತು ತಮ್ಮ ತಮ್ಮ ವಾರ್ಡುಗಳ ಸಂಪೂರ್ಣ ಮಾಹಿತಿ ಇರುವುದು ಅವಶ್ಯ. ಯಾವುದೇ ಒಂದು ಸಮಸ್ಯೆಗೆ ಒಂದು ಪರಿಹಾರವೆಂದು ಇದ್ದೇ ಇರುತ್ತದೆ. ಹಾಗೆಯೇ ಈ ರಾಜಕೀಯರಂಗದ ಮಹಿಳೆಯರ ಸಮಸ್ಯೆಗಳಿಗೂ ಪರಿಹಾರಗಳು ಇದ್ದೇ ಇವೆ. ಇವುಗಳಲ್ಲಿ ಮೊದಲನೆಯದೆಂದರೆ ಪುರುಷನ ಮನೋಭಾವದಲ್ಲಿ ಬದಲಾವಣೆಯ ಅಗತ್ಯ. ಗಂಡಸರು ಮೊದಲು ಹೆಂಗಸರನ್ನು ತಮ್ಮ ಸರಿಸಮ ಎಂದು ಭಾವಿಸಬೇಕು. ಅವರಿಗೆ ಅವರ ಕೆಲಸಗಳ ಮೇಲೆ ಸಂಪೂರ್ಣ ಅಧಿಕಾರ ಹಾಗೂ ಸರ್ವ ಸ್ವಾತಂತ್ರ್ಯವನ್ನು ನೀಡಬೇಕು. ಮತ್ತು ಅವರಲ್ಲಿ ಸ್ವತಃ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವಂತೆ ಪ್ರೋತ್ಸಾಹಿಸಬೇಕು.

ಒಬ್ಬ ಮಹಿಳಾ ಸದಸ್ಯೆಗೆ ತಮ್ಮ ವಾರ್ಡಿನ ಯಾವುದೋ ಒಂದು ಸಮಸ್ಯೆಯ ಪರಿಹಾರಕ್ಕಾಗಿ, ಆಕೆಯ ಮನೆಯವರು ಬೇಕೆಂದರೆ, ತಿಳುವಳಿಕೆ ನೀಡಬಹುದು. ಆದರೆ ಆಕೆ ತೆಗೆದುಕೊಳ್ಳುವ ನಿರ್ಣಯವನ್ನು ಸಂಪೂರ್ಣವಾಗಿ ಅವಳಿಗೇ ಬಿಟ್ಟುಕೊಡಬೇಕು. ಅದು ಬಿಟ್ಟು ಸಮಸ್ಯೆಯ ಪರಿಹಾರ ಮಾಡುವ ನೆಪದಲ್ಲಿ ಇಂಥದೇ, ಈ  ಬಗೆಯಲ್ಲೇ ನಿರ್ಣಯ ತೆಗೆದುಕೊಳ್ಳಬೇಕೆನ್ನುವ ಒತ್ತಡವನ್ನು ಹಾಕಕೂಡದು. ಹೊಸದಾಗಿ ಆಯ್ಕೆಯಾದ ಎಲ್ಲ ಜನಪ್ರತಿನಿಧಿಗಳಿಗೆ ತಾಲ್ಲೂಕು ಪಂಚಾಯತಿಯಲ್ಲಿ ತರಬೇತಿಗಳನ್ನು ಹಮ್ಮಿಕೊಂಡಿರುತ್ತಾರೆ. ಇಂತಹ ತರಬೇತಿಗಳಲ್ಲಿ ಮುಖ್ಯವಾಗಿ ಮಹಿಳಾ ಜನ ಪ್ರತಿನಿಧಿಗಳು ಕಡ್ಡಾಯವಾಗಿ ಭಾಗವಹಿಸಿ, ಗ್ರಾಮ ಪಂಚಾಯತಿಗಳ ಚಟುವಟಿಕೆಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆದು, ಪಂಚಾಯತಿಯಲ್ಲಿ ತಮ್ಮ ತಮ್ಮ ಪಾತ್ರ ಹಾಗೂ ಜವಾಬ್ದಾರಿಗಳನ್ನು ಅರ್ಥಮಾಡಿಕೊಳ್ಳಬೇಕು.

ಈ ಮಹಿಳಾ ಜನಪ್ರತಿನಿಧಿಗಳು, ಜನರ ಸಮಸ್ಯೆಗಳನ್ನು ಪರಿಶೀಲಿಸಿ ಅವರಿಗೆ ಸ್ಪಂದಿಸಿ ಅವರ ಸಮಸ್ಯೆಗಳ ಪರಿಹಾರಕ್ಕಾಗಿ ಮಾರ್ಗೋಪಾಯಗಳನ್ನು ಕಂಡು ಹಿಡಿದು ಉತ್ತಮ ಹಾಗೂ ಪರಿಣಾಮಕಾರಿಯಾದ ನಾಯಕತ್ವವನ್ನು ವಹಿಸಲು ಆಕೆಗೆ ಕೌಟುಂಬಿಕ ಸದಸ್ಯರಲ್ಲದೇ ಗ್ರಾಮದ ಜನತೆ ಹಾಗೂ ಅಧಿಕಾರಿಗಳೂ ಕೂಡ ಹೆಚ್ಚು ಪ್ರೋತ್ಸಾಹ ನೀಡಬೇಕು.

ಮಹಿಳೆಯರು ತಮ್ಮ ಗ್ರಾಮಗಳಲ್ಲಿ ತಮ್ಮ ಗ್ರಾಮ ಪಂಚಾಯತಿಗಳಲ್ಲಿ ಏನೇನು ನಡೆಯುತ್ತಿದೆ? ಸರಕಾರ ಯಾವ ಯಾವ ಸೌಲಭ್ಯಗಳನ್ನು ನೀಡುತ್ತಿದೆ? ಮತ್ತು ಅವು ತಲುಪಬೇಕಾದವರಿಗೆ ತಲುಪುತ್ತಿವೆಯೇ? ಮುಂತಾದ ವಿಷಯಗಳ ಬಗ್ಗೆ ಗ್ರಾಮದ ಪ್ರತಿಯೊಬ್ಬ ಮಹಿಳೆಯೂ ಕೂಡ ಅರಿತುಕೊಳ್ಳಲೇಬೇಕಿದೆ.

ಮಹಿಳಾ ಸದಸ್ಯೆಯರು ತಮ್ಮ ಮನೆಯ ಬಗ್ಗೆ ಗಮನ ಹರಿಸಿದಷ್ಟೇ ತಮ್ಮ ವಾರ್ಡುಗಳ ಮೇಲೆಯೂ ಗಮನ ಹರಿಸಿ, ಕ್ಷೇತ್ರಭೇಟಿಯಂತಹ ಕೆಲಸಗಳಿಗೂ ಸಮಯ ವಿನಿಯೋಗಿಸಿ ಕೆಲಸ ಮಾಡಬೇಕು. ಕ್ಷೇತ್ರಭೇಟಿ ಕೆಲಸ ತುಂಬಾ ಪರಿಣಾಮಕಾರಿಯಾದದ್ದು ಏಕೆಂದರೆ, ಸ್ವತಃ ಕಣ್ಣಿಂದ ನೋಡಿ ಸಮಸ್ಯೆಯನ್ನು ಅಭ್ಯಸಿಸಿದಾಗ ನಿಜವಾದ ಸಮಸ್ಯೆಗಳನ್ನು ಅರಿಯಬಹುದು ಹಾಗೆ ಅದಕ್ಕೆ ಪರಿಹಾರವನ್ನು ಕೂಡ ಕಂಡುಹಿಡಿಯಬಹುದು.

ಈ ನಿಟ್ಟಿನಲ್ಲಿ ಸರ್ಕಾರೇತರ ಸಂಸ್ಥೆಗಳೂ ಕಾರ್ಯಪ್ರವೃತ್ತವಾಗುವ ಅಗತ್ಯವಿದೆ. ಸ್ಥಳೀಯ ಸಂಸ್ಥೆಗಳ ಸದಸ್ಯೆಯರಿಗೆ ಅವರ ಕರ್ತವ್ಯಗಳು ಮತ್ತು ಹಕ್ಕುಗಳ ಪರಿಚಯ ಮಾಡಿಕೊಡುವುದನ್ನು ಇವುಗಳು ಮಾಡಬಹುದು. ಕರ್ತವ್ಯಗಳ ಮೂಲಕ ಸಮಾಜವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ಅವಕಾಶ ಹಾಗೂ ಹಕ್ಕುಗಳ ಮೂಲಕ ತನ್ನ ಬದುಕನ್ನು ಉನ್ನತಗೊಳಿಸಿಕೊಳ್ಳುವ ಅವಕಾಶ ಮಹಿಳೆಗಿದೆ ಎನ್ನುವುದನ್ನು ಸದಸ್ಯೆಯರು ಮನದಟ್ಟು ಮಾಡಿಕೊಡಲು ಸರ್ಕಾರೇತರ ಸಂಸ್ಥೆಗಳು ಮುಂದಾಗಬೇಕು. ಒಟ್ಟಿನಲ್ಲಿ ಮಹಿಳಾ ಸಬಲೀಕರಣವೆಂದರೆ ಸಮಾಜದ, ರಾಷ್ಟ್ರದ ಸಬಲೀಕರಣ ಎಂಬ ಅಂತಿಮ ಸತ್ಯವನ್ನು ಎಲ್ಲರೂ ಅರಿತುಕೊಂಡು ಆ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕಾರ್ಯಪ್ರವೃತ್ತರಾಗಬೇಕು.

# ಅನಕ್ಷರಸ್ಥ ಜಾನಪದ ಕೋಗಿಲೆ ಸುಕ್ರಜ್ಜಿಗೊಲಿದ ಪದ್ಮಶ್ರೀ

ಬನ್ನೂರು ಕೆ.ರಾಜು

ಸುಕ್ರಿ ಬೊಮ್ಮನಗೌಡ ಅವರು ಬರೀ ಜಾನಪದ ಹಾಡುಗಾರ್ತಿಯಷ್ಟೇ ಅಲ್ಲ, ತನ್ನ ಹುಟ್ಟು ಬುಡಕಟ್ಟು ಸಂಸ್ಕೃತಿಯ ಸಂರಕ್ಷಣಾಕಾರ್ತಿಯೂ ಹೌದು. ಹಾಲಕ್ಕಿಗಳ ಪ್ರಾಚೀನ ಪರಂಪರೆಯ ಪ್ರತಿರೂಪದಂತಿರುವ ಇವರು ಎಲ್ಲೇ ಹೋದರೂ ಸಹ ತನ್ನ ಮೂಲ ಸಂಸ್ಕೃತಿಯನ್ನು ಹೊತ್ತುಕೊಂಡೇ ಹೋಗುತ್ತಾರಲ್ಲದೆ ದೂರದ ದೆಹಲಿ ಸೇರಿದಂತೆ ಬೆಂಗಳೂರು, ಮೈಸೂರು ... ಅಂತೆಲ್ಲಾ ದೇಶದ ಪ್ರಮುಖ ತಾಣಗಳನ್ನೆಲ್ಲಾ ಬರಿಗಾಲಲ್ಲೇ ಸುತ್ತಿ ಅಲ್ಲೆಲ್ಲಾ ಜಾನಪದ ಹಾಡುಗಳ ಮೂಲಕ ತನ್ನ ಸಮುದಾಯದ ಸಂಸ್ಕೃತಿಯ ದೀಪಮಾಲೆ ಹಚ್ಚಿದ್ದಾರೆ.

**ಸಾ**ವಿರದ ಒಂಬೈನೂರ ನಲವತ್ತರ ದಶಕದ ಆಸುಪಾಸಿರಬಹುದು. ಉತ್ತರಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನ ಶಿರಕುಳಿ ಗ್ರಾಮದ ಹಾಲಕ್ಕಿ ಬುಡಕಟ್ಟು ಜನಾಂಗದ ಹತ್ತನ್ನೆರಡು ವಯಸ್ಸಿನ ಪುಟ್ಟಬಾಲೆಗೆ ಬಡಿಗೇರಿ ಗ್ರಾಮದ ನಲವತ್ತೆಂಟು ದಾಟಿದ ವ್ಯಕ್ತಿಯೊಡನೆ ಮದುವೆ. ಅದರಲ್ಲೂ ಕಡುಬಡತನದ ಇಂತಹ ಸಮುದಾಯದಲ್ಲಿ ಇದು ಆಗೆಲ್ಲ ಸರ್ವೆ ಸಾಮಾನ್ಯ. ಆ ಹಾಲಕ್ಕಿ ಬಾಲೆಗೆ ಮದುವೆ ಅಂದರೇನೆಂದು ಸರಿಯಾಗಿ ಅರಿವಾಗುವಷ್ಟರಲ್ಲೇ ಪತಿ ತೀರಿಕೊಂಡಿದ್ದರು. ಆ ಪುಟ್ಟ ವಯಸ್ಸಿನಲ್ಲಿ ಈ ಬಡತನದ ಬೇಗೆಯಲ್ಲಿ ಮುಂದೆ ತಾನು ಬದುಕುವುದಾದರೂ ಹೇಗೆಂಬ ಚಿಂತೆ ಅವಳನ್ನು ಆವರಿಸಿತು. ಆದರೂ ಕಡುಕಷ್ಟದ ಹಾದಿಯಲ್ಲೇ ದಿಟ್ಟವಾಗಿ ನಡೆದೇಬಿಟ್ಟಳು...!

ಕಾಡು ಮೇಡುಗಳಲ್ಲಿ ಅಲೆದು, ಸೌದೆ ಸೊಪ್ಪುಗಳನ್ನು ತಂದು, ಅದನ್ನೇ ಮಾರಿ ತಿಂದುಂಡು ಅದರಲ್ಲೇ ಜೀವನ ಕಟ್ಟಿಕೊಳ್ಳತೊಡಗಿದಳು. ಹೀಗೆ ಹಲವಾರು ದಶಕಗಳು ಸಾಗಿಬಂದ ಈ ಬಾಲೆ ಅನಕ್ಷರಸ್ಥಳಾದರೂ ರಕ್ತಗತವಾಗಿ ಬಂದಿದ್ದ ಹಾಡುಕಟ್ಟಿ ಹೇಳುವ ಜನಪದ ಕಲೆಗಾರಿಕೆಯಿಂದಾಗಿ ಅಜ್ಜಿಯಾಗುವ ಹೊತ್ತಿಗೆ ತನಗರಿವಿಲ್ಲದಂತೆಯೇ ಜಾನಪದ ಸಿರಿಕಣಜವಾಗಿ ರೂಪುಗೊಂಡಳೆಂದರೆ ಆಶ್ಚರ್ಯದ ಜೊತೆಗೆ ವಿಸ್ಮಯವೆನಿಸುತ್ತದೆ! ಕಡುಕಷ್ಟವನ್ನೆಲ್ಲಾ ಮೆಟ್ಟಿನಿಂತು, ತನ್ನ ಹಾಲಕ್ಕಿ ಒಕ್ಕಲಿಗ ಸಮುದಾಯದ ಪರಂಪರಾನುಗತ ಜಾನಪದ ಪ್ರತಿಭೆಯನ್ನೇ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಮೇಲೆ ಬಂದ ಇವರ ಉಡಿಯಲ್ಲೀಗ ಹತ್ತಾರಲ್ಲ, ನೂರಾರಲ್ಲ, ಸಹಸ್ರಾರು ಜಾನಪದ ಹಾಡುಗಳು ತುಂಬಿ ತುಳುಕುತ್ತಿವೆ. ಇಲ್ಲಿ ಎಂದೋ ಅಳಿದುಹೋಗುವುದರಲ್ಲಿದ್ದ ಹಾಲಕ್ಕಿ ಜಾನಪದ ಗೀತೆಗಳ ಒಂದು ಅದ್ಭುತ ಲೋಕವೇ ಇದೆ. ಡಾ. ರಾಜ್‌ಕುಮಾರ್, ಡಾ.ದೇಜಗೌ, ಡಾ. ಪಾಟೀಲ ಪುಟ್ಟಪ್ಪ, ಡಾ. ಸಿಪಿಕೆ, ಡಾ.ನಿಸಾರ್ ಅಹಮದ್, ಡಾ.ಶಾಂತರಸ, ಡಾ.ಸಿದ್ದಲಿಂಗಯ್ಯ ಮುಂತಾದ ನಾಡಿನ ಅಗ್ರಗಣ್ಯರು ಪಡೆದ 'ನಾಡೋಜ ಪುರಸ್ಕಾರ'ವನ್ನು ತಾನೂ ಪಡೆಯುವಷ್ಟರ ಮಟ್ಟಿಗೆ ಜಾನಪದ ಶಿಖರವಾಗಿ ಬುಡಕಟ್ಟು ಜನಾಂಗದ ಓರ್ವ ಪುಟ್ಟ ಬಾಲೆ ಬೆಳೆದಳೆಂದರೆ ಇದು ಸಾಮಾನ್ಯ ವಿಷಯವಲ್ಲ. ಇದೊಂದು ಜಾನಪದ ವಿಸ್ಮಯ!

ತನ್ನ ಬದುಕಿನಲ್ಲಿ ಇಂಥ ವಿಸ್ಮಯವನ್ನು ಕಂಡ ಆ ಹಾಲಕ್ಕಿ ಬುಡಕಟ್ಟಿನ ಪುಟ್ಟ ಬಾಲೆಯೇ ಇಂದು ಜಾನಪದ ಕೋಗಿಲೆ,





ಜಾನಪದ ಭಂಡಾರ, ಜಾನಪದ ಕಣಜ ಎಂದೆಲ್ಲಾ ಹೆಸರಾಗಿರುವ ಜಾನಪದ ಕಲಾವಿದೆ ಸುಕ್ರಿ ಬೊಮ್ಮಗೌಡ. ಬೊಮ್ಮಗೌಡ ತೀರಿಹೋದ ಅವರ ಪತಿ. ಉತ್ತರಕನ್ನಡ ಜಿಲ್ಲೆಯಾದ್ಯಂತ ಅದರಲ್ಲೂ ವಿಶೇಷವಾಗಿ ಅಂಕೋಲ ತಾಲ್ಲೂಕಿನ ಸುತ್ತಮುತ್ತ 'ಸುಕ್ರಜ್ಜಿ' ಎಂದೇ ಪ್ರೀತಿಯಿಂದ ಕರೆಸಿಕೊಳ್ಳುವ ಇವರು ಬಾಯ್ಬಿಟ್ಟರೆ ಜಾನಪದ ರಸಗಂಗೆಯೇ ಉಕ್ಕಿ ಹರಿಯುತ್ತದೆ. ಎಂಥವರನ್ನೂ ಭಾವಪರವಶಗೊಳಿಸುವ ಮಧುರನಾದ ಇಲ್ಲುಂಟು. ಸುಕ್ರಿ ಬೊಮ್ಮಗೌಡರ ಸಿರಿಕಂಠದ ಮೋಡಿ ಅಂಥಾದ್ದು. ಜಾನಪದ ಮಾಧುರ್ಯದ ಸಿಹಿ ಹೊನಲು. ಇವರು ಚಂದನರಾಯಕತೆ, ಮಹದೇವರಾಯಕತೆ, ರಾಮಾಯಣ, ಮಹಾಭಾರತ, ಸೀತೆ ಕತೆ, ಕುಂತೀಕತೆ, ಐರಾವತ ಕತೆ, ಸಿರಿಕವುಲಿ ಮುಂತಾದ ಕಥನ ಗೀತೆಗಳನ್ನು ಸ್ವತಃಕಟ್ಟಿ ಹೇಳುವುದನ್ನು, ಸೋಬಾನೆ ಹಾಡು, ಮದುವೆ ಹಾಡು, ಸುಗ್ಗಿ ಹಾಡುಗಳನ್ನು ಇಂಪಾಗಿ ಹಾಡುವುದನ್ನು ಮತ್ತು ಬಲೀಂದ್ರರಾಯ, ಗೋವಿಂದರಾಯ, ಕರಿದೇವರ ಬಗೆಗಿನ ಮಹಾಕಥನಗಳನ್ನು ಮಧುರವಾಗಿ ಸ್ವರಗೈಯುವುದನ್ನು ಕಣ್ಣಾರೆ ಕಂಡು ಕಿವಿಯಾರೆ ಕೇಳಿದ ಮಂದಿ ಎಂದೂ ಇವರನ್ನು ಮರೆಯದೆ ಮೆಚ್ಚುಗೆಯಿಂದ ಸದಾ ನೆನಪಿಸಿಕೊಳ್ಳುತ್ತಲೇ ಇರುತ್ತಾರೆ. ಅಂಥ ಆಕರ್ಷಕ ಜನಪದ ಹಾಡುಗಾರಿಕೆ ಇವರದು.

ಸುಕ್ರಿ ಬೊಮ್ಮನಗೌಡ ಅವರು ಬರೀ ಜಾನಪದ ಹಾಡುಗಾರ್ತಿಯಷ್ಟೇ ಅಲ್ಲ, ತನ್ನ ಹುಟ್ಟು ಬುಡಕಟ್ಟು ಸಂಸ್ಕೃತಿಯ ಸಂರಕ್ಷಣಾಕಾರ್ತಿಯೂ ಹೌದು. ಹಾಲಕ್ಕಿಗಳ ಪ್ರಾಚೀನ ಪರಂಪರೆಯ ಪ್ರತಿರೂಪದಂತಿರುವ ಇವರು ಎಲ್ಲೇ ಹೋದರೂ ಸಹ ತನ್ನ ಮೂಲ ಸಂಸ್ಕೃತಿಯನ್ನು ಹೊತ್ತುಕೊಂಡೇ ಹೋಗುತ್ತಾರಲ್ಲದೆ ದೂರದ ದೆಹಲಿ ಸೇರಿದಂತೆ ಬೆಂಗಳೂರು, ಮೈಸೂರು ... ಅಂತೆಲ್ಲಾ ದೇಶದ ಪ್ರಮುಖ ತಾಣಗಳನ್ನೆಲ್ಲಾ ಬರಿಗಾಲಲ್ಲೇ ಸುತ್ತಿ ಅಲ್ಲೆಲ್ಲಾ ಜಾನಪದ ಹಾಡುಗಳ ಮೂಲಕ ತನ್ನ ಸಮುದಾಯದ ಸಂಸ್ಕೃತಿಯ ದೀಪಮಾಲೆ ಹಚ್ಚಿದ್ದಾರೆ. ತಲೆ ತಲಾಂತರದಿಂದ ತಮ್ಮಲ್ಲಿ ಸಾಗಿಬಂದಿರುವ ಜನಪದ ವೈದ್ಯದಲ್ಲೂ ಆಳವಾದ ಅನುಭವ ಹೊಂದಿರುವ ಇವರು ಸುತ್ತಮುತ್ತಲಿನ ಗ್ರಾಮೀಣ ಜನರ ಪಾಲಿಗೆ ಜನಪದ ಧನ್ವಂತರಿಯೇ ಆಗಿದ್ದಾರೆ. ನಾಡು ಸುತ್ತಿದರೂ ಕಾಡುಹಕ್ಕಿಯಾಗಿಯೇ ಉಳಿಯುವ ಇವರು ನವನಾಗರಿಕತೆಯ ನಡುವೆಯೂ ತನ್ನ ಸಮುದಾಯದ, ಸಂಪ್ರದಾಯದ, ಸಂಸ್ಕೃತಿಯ ಬೇರುಗಳನ್ನು ಗಟ್ಟಿಗೊಳಿಸುವ ಕಾಯಕದಲ್ಲಿ ನಿರತವಾಗಿದ್ದು ಈಗಲೂ ಬುಡಕಟ್ಟು ಜನರನ್ನು ಸಂಘಟಿಸಿ ಗತಕಾಲದಿಂದ ಇವರಲ್ಲಿ ಬಂದಿರುವ ಜಾನಪದ ಕುಣಿತಗಳಾದ ತಾರ್ಲೆ, ಬಿದರಂಡೆ, ಪಗಡೆ ಮುಂತಾದ ನೃತ್ಯಕಲೆಗಳನ್ನು ಕಲಿಸುತ್ತಿದ್ದಾರೆ. ಹೀಗೆ ಕಲಿತ ಹಾಲಕ್ಕಿ ಮಹಿಳೆಯರನ್ನು ತಂಡಗಳಾಗಿ ವಿಂಗಡಿಸಿ, ಈ ತಂಡಗಳನ್ನೆಲ್ಲಾ ಹಲವು ಹತ್ತು ಕಡೆ ಸ್ವತಃ ತಾನೇ ಕರೆದೋಯ್ದು ಇವರ ಕಲೆಯನ್ನು ಪ್ರದರ್ಶಿಸಿ ಸಾಧ್ಯವಾದ ಕಡೆಗಳಲ್ಲೆಲ್ಲಾ ಹಾಲಕ್ಕಿ ಜನಪದ ಸಂಸ್ಕೃತಿಯನ್ನು ಬಿತ್ತಿದ್ದಾರೆ. ಈ ಮುಖೇನ ತಮ್ಮ ಪೂರ್ವಿಕರ ಪಾರಂಪರಿಕ ಜನಪದ ಸಾಹಿತ್ಯ, ದೈವಾರಾಧನೆ, ಹಬ್ಬಹರಿದಿನ, ಆಚಾರ ವಿಚಾರ, ಆಹಾರ, ವೇಷಭೂಷಣಗಳು ಸೇರಿದಂತೆ ಒಟ್ಟಾರೆ ಒಂದು ಶ್ರೇಷ್ಠ ಜನಪದ ಪರಂಪರೆಯ ಜ್ವಲಂತತೆಯು ಗತಿಸಿ ಹೋಗದಂತೆ ಈ ಕ್ಷಣದವರೆಗೂ ಕಾಪಾಡಿಕೊಂಡು ಬರುತ್ತಿದ್ದಾರೆ.



ಹಾಗೆಯೇ ಹಾಡು ಹಾಡುತ್ತಲೇ ಹಲವಾರು ಸಾಮಾಜಿಕ ಅನಿಷ್ಟಗಳ ವಿರುದ್ಧ ರಣಕಹಳೆ ಮೊಳಗಿಸುವ ಸುಕ್ರಿ ಬೊಮ್ಮಗೌಡ ಅವರದು ಪರಿಸರ ಚಳವಳಿ ಮತ್ತು ಮದ್ಯಪಾನ ವಿರೋಧಿ ಚಳವಳಿಯಲ್ಲಿ ಸದಾ ಮಂಚೂಣಿಯಲ್ಲಿರುವ ಹೆಸರು.  ಚಳವಳಿಗೆ ಸುಕ್ರಿ ಧುಮುಕಿದರೆಂದರೆ ಆ ಭಾಗದ ಜನರಲ್ಲಿ ಒಂದು ರೀತಿ ಮಿಂಚಿನ ಸಂಚಾರವಾಗುತ್ತದೆ. ಈಗಲೂ ಒಂದಿಲ್ಲೊಂದು ರೀತಿಯಲ್ಲಿ ಇವರು ಮದ್ಯಪಾನ ವಿರೋಧಿ ಚಳವಳಿಯನ್ನು ಮತ್ತು ಬುಡಕಟ್ಟು ಸಂಸ್ಕೃತಿ ರಕ್ಷಣೆಯ ಹೋರಾಟವನ್ನು ನಿರಂತರವಾಗಿ ನಡೆಸುತ್ತಲೇ ಇದ್ದಾರೆ. ಉತ್ತರಕನ್ನಡಜಿಲ್ಲೆಯನ್ನು ಬುಡಕಟ್ಟು ಜಿಲ್ಲೆಯಾಗಿಸುವ ಮತ್ತು ಈ ಜಿಲ್ಲೆಯನ್ನು ಸಂಪೂರ್ಣವಾಗಿ ಪಾನಮುಕ್ತಗೊಳಿಸುವ ಮಹದಾಕಾಂಕ್ಷೆ ಸುಕ್ರಿ ಅವರಿಗಿದೆ. ಇದಕ್ಕಾಗಿಯೇ ತಮ್ಮ ಆಯುಷ್ಯ ಪೂರ್ತಿ ಹೋರಾಡಲು ಸಿದ್ಧವಿರುವ ಸಾರ್ಥಕಜೀವಿಯಿವರು.



ಇಂಥ ಸದುದ್ದೇಶ ಹೊತ್ತ ಆದಿವಾಸಿ ಜಗತ್ತಿನ ಉಜ್ವಲ ಪ್ರತಿನಿಧಿಯಾದ, ಮೌಖಿಕ ಪರಂಪರೆಯ ರಾಯಭಾರಿಯಾದ ಬುಡಕಟ್ಟು ಜನಾಂಗದ ಈ ಜಾನಪದ ಹಾಡುಗಾರ್ತಿಗೆ, ಜನಪರ ಹೋರಾಟಗಾರ್ತಿಗೆ ಗೌರವದ ಮಹಾಪೂರವಾಗಿ 1988ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿ, 1998ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 1999ರಲ್ಲಿ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಜಾನಪದ ಶ್ರೀ ಪ್ರಶಸ್ತಿ ಸೇರಿದಂತೆ ಸರ್ಕಾರದಿಂದ ಹಿಡಿದು ನಾಡಿನ ಪ್ರತಿಷ್ಠಿತ ಸಂಘ ಸಂಸ್ಥೆಗಳ ತನಕ ನೂರಾರು ಪ್ರಶಸ್ತಿ, ಪುರಸ್ಕಾರ, ಗೌರವಗಳು ಇವರತ್ತ ಪ್ರವಾಹದೋಪಾದಿಯಲ್ಲಿ ಹರಿದು ಬಂದಿವೆ.  ಇವರ ಜಾನಪದ ಸಿರಿಮುಡಿಯನ್ನು ಅಲಂಕರಿಸಿವೆ. ಇವೆಲ್ಲಕ್ಕೂ ಕಿರೀಟವಿಟ್ಟಂತೆ ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಈ ಜಾನಪದ ಶಿಖರಕ್ಕೆ 2008ರಲ್ಲಿ ನಾಡೋಜ ಪ್ರಶಸ್ತಿಯ ಬಾಗಿನ ನೀಡಿ ಸಮಸ್ತ ಕನ್ನಡಿಗರ ಪರವಾಗಿ ಗೌರವಿಸಿದೆ. 2009ರ ಗೌರವವಾಗಿ ಪ್ರತಿಷ್ಠಿತ ಆಳ್ವಾಸ್ ನುಡಿಸಿರಿ ಪ್ರಶಸ್ತಿ ಇವರನ್ನು ಅರಸಿಕೊಂಡು ಬಂದಿದೆ. 2015ರಲ್ಲಿ ಪ್ರತಿಷ್ಠಿತ ಜಾನಪದ ಜಂಗಮ ಡಾ.ಎಸ್.ಕೆ.ಕರೀಂಖಾನ್ ಪ್ರಶಸ್ತಿ ಸಂದಿದೆ. ಇದೀಗ ದೇಶದ ಎರಡನೇ ಅತ್ಯುನ್ನತ ನಾಗರಿಕ ಪುರಸ್ಕಾರವಾಗಿರುವ ಪದ್ಮಶ್ರೀ ಪ್ರಶಸ್ತಿ ದೊರೆತಿದೆ. ಆದರೆ ಎಂಥಾ ಪ್ರಶಸ್ತಿ ಬಂದರೂ 'ಹಾಡು ಹಕ್ಕಿಗೆ ಬೇಕೆ ಬಿರುದು ಸನ್ಮಾನ ...' ಎಂಬಂತಿರುವ ಇವರು 'ಎಲ್ಲಾ ಪ್ರಶಸ್ತಿಗಳಿಗಿಂತ ಜನರು ಸಾರಾಯಿ ಕುಡಿಯುವುದನ್ನು ಬಿಟ್ರೆ ಅದೇ ನನಗೆ ದೊಡ್ಡ ಪ್ರಶಸ್ತಿ' ಎನ್ನುತ್ತಾರೆಂದರೆ ಸುಕ್ರಜ್ಜಿಯ ಸಾಮಾಜಿಕ ಕಳಕಳಿಗೆ ಯಾವ ಪ್ರಶಸ್ತಿ ತಾನೆ ಸಾಟಿಯಾದೀತು?



# ಭಾರತೀಯ ಸೇನೆಯಲ್ಲಿ ಮಹಿಳೆಯರ ವಿಶಿಷ್ಟ ಸೇವೆ

ಕೆ. ಎಸ್. ಸೋಮೇಶ್ವರ

**ಭಾ**ರತೀಯ ಮಹಿಳೆಯರು ನಮ್ಮ ಜನ ಜೀವನದ ಎಲ್ಲ ಪ್ರಕಾರಗಳಲ್ಲೂ ಅತ್ಯಂತ ಯಶಸ್ವಿಯಾಗಿ ನಿಭಾಯಿಸುವಂತಹ  ಸಂಪೂರ್ಣ ಮಹಿಳೆ ಎನ್ನಿಸಿಕೊಂಡಿದ್ದಾರೆ. ಅವರು ತೆಗೆದುಕೊಳ್ಳುವ ಮನೆಯ ಜವಾಬ್ದಾರಿಯಿಂದ ಮೊದಲಾಗಿ ಹೊರಗಡೆ ಅವರುಗಳ ಕಾಯಕ್ಷೇತ್ರಗಳಲ್ಲಿನ  ಕರ್ತವ್ಯ ನಿರ್ವಹಣೆಯಲ್ಲಿ ಅವರ ಕೊಡುಗೆ ಅಸೀಮವಾದುದು. ಅದೇ ರೀತಿ ಮಹಿಳೆಯರು ನಮ್ಮ ಸೇನಾ ಪಡೆಗಳ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುವುದು ವಿಶಿಷ್ಟವೇ. ಇವರುಗಳನ್ನು ಇದುವರೆಗೂ ನೇರ ಯುದ್ಧ ಭೂಮಿಯ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದಿಲ್ಲ. ಆದರೆ, ಇತ್ತೀಚಿನ ಸರಕಾರದ ಕೆಲ ನಿರ್ಧಾರಗಳಿಂದ ಆಕೆ ಯುದ್ಧ ಸನ್ನದ್ಧ ತರಬೇತಿಗಳಲ್ಲಿ ಪಾಲ್ಗೊಳ್ಳುವ ಅವಕಾಶ ದೊರೆಯುವಂತೆ ಮಾಡಿದೆ.

ಈ ನಿಟ್ಟಿನಲ್ಲಿ ಭಾರತೀಯ ವಾಯು ಪಡೆಗೆ ಇತ್ತೀಚೆಗೆ ಮೂವರು ಮಹಿಳಾ ಪೈಲಟ್ ಗಳು ಪರಿಪೂರ್ಣ ತರಬೇತಿಯ ನಂತರ ಸೇರ್ಪಡೆಯಾಗಿದ್ದಾರೆ. ಅವರುಗಳೆಂದರೆ ಮಧ್ಯ ಪ್ರದೇಶದ ಸತ್ನಾಂ ನವರಾದ ಆವನಿ ಚತುರ್ವೇದಿ, ಬಿಹಾರದ ಬೇಗುಸರಾಯ್ ಮೂಲದ ಭಾವನಾ ಕಾಂತ ಮತ್ತು ಝುನ್ ಝುನಾ, ರಾಜಾಸ್ಥಾನದ ಮೊಹೆನಾ ಸೇನ್ ರವರು

ನಮ್ಮ ಭಾರತೀಯ ಸೇನಾ ಪಡೆಯಲ್ಲಿ ಇತ್ತೀಚಿನ ಸರಕಾರದ ಅಂಕಿ ಅಂಶಗಳ  ಪ್ರಕಾರ ಸರಿ ಸುಮಾರು 8400 ಮಹಿಳೆಯರು ಸೇನೆಯ ವಿವಿಧ ವಿಭಾಗಗಳಲ್ಲಿ

> **ಮಹಿಳೆಯರು ನಮ್ಮ ಸೇನಾ ಪಡೆಗಳ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುವುದು. ಇವರುಗಳನ್ನು ಇದುವರೆಗೂ ನೇರ ಯುದ್ಧ ಭೂಮಿಯ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದಿಲ್ಲ. ಆದರೆ, ಇತ್ತೀಚಿನ ಸರಕಾರದ ಕೆಲ ನಿರ್ಧಾರಗಳಿಂದ ಆಕೆ ಯುದ್ಧ ಸನ್ನದ್ಧ ತರಬೇತಿಗಳಲ್ಲಿ ಪಾಲ್ಗೊಳ್ಳುವ ಅವಕಾಶ ದೊರೆಯುವಂತೆ ಮಾಡಿದೆ.**





Major general Rakhi Singh honour by Punjab CM



Maj Gen Rakhi Singh

ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಮಿಲಿಟರಿಯ ವೈದ್ಯಕೀಯ ಮತ್ತು ನರ್ಸಿಂಗ್ ಸೇವೆಗಳೂ ಸೇರಿವೆ. ಇನ್ನು ಅರೆ ಮಿಲಿಟರಿ, ಗಡಿ ರಕ್ಷಣಾ ಪಡೆ, ಕೇಂದ್ರ ಮೀಸಲು ಪಡೆ, ಕೋಸ್ಟಲ್ ಗಾರ್ಡ್ ಎನ್.ಎಸ್.ಜಿ ಇವುಗಳಲ್ಲಿ ಸೇವೆ ಸಲ್ಲಿಸುತ್ತಿರುವವರೂ ಸೇರಿದಂತೆ ಈ ಸಂಖ್ಯೆ 25000 ಕ್ಕೂ ಮೀರಿದೆ.

ನಮ್ಮ ವಿವಿಧ ಸೇನಾ ವಿಭಾಗಗಳಲ್ಲಿ ವಿಶಿಷ್ಟ ಅಥವ ಮೊದಲ ಮಹಿಳೆಯರೆಂದು ಗುರುತಿಸಿರುವ ಹಲವರಲ್ಲಿ ಕೆಲವರನ್ನು ನೆನಪಿಸುವ ಯತ್ನ ಈ ಲೇಖನದಲ್ಲಿದೆ. 1968 ರಲ್ಲಿ ಭಾರತೀಯ ವಾಯು ಪಡೆಗೆ ಸೇರಿದ ಪದ್ಮಾವತಿ ಬಂದೋಪಾಧ್ಯಾಯ ಎಂಬುವರು ನಮ್ಮ ವಾಯು ಪಡೆಯ ಪ್ರಥಮ ಮಹಿಳಾ ಏರ್ ಮಾರ್ಷಲ್ ಆಗಿದ್ದರು. ಅದೇ ರೀತಿಯಲ್ಲಿ ಭಾರತೀಯ ಸೇನೆಯಲ್ಲಿ ಮೊದಲಿಗೆ 'SWORD OF HONOUR' ಹಿರಿಮೆಯನ್ನು ಗಳಿಸಿಕೊಂಡ ಮಹಿಳೆ ಚೆನ್ನೈನ ಅಜಿತಾರವರು (2010 ರಲ್ಲಿ). ಭಾರತೀಯ ಸೇನೆಯಲ್ಲಿ ಎರಡನೇ ಅತಿ ದೊಡ್ಡ ಸ್ಥಾನವಾದ ಲೆಫ್ಟಿನೆಂಟ್ ಜನರಲ್ ಹುದ್ದೆಗೆ ಆಯ್ಕೆಯಾದ ಮೊದಲ ಮಹಿಳೆ ಪುನೀತಾ ಅರೋರ ಎಂಬುವರು. ಇವರು ಮೊದಲ ಮಹಿಳಾ ವೈಸ್ ಅಡ್ಮಿರಲ್ ಆಗಿ ಕೂಡ ನೌಕಾ ಪಡೆಯಲ್ಲಿ ಸೇವೆ ಮಾಡಿದ್ದಾರೆ.

ಮಿಥಾಲಿ ಮಧುಮಿತಾ ಎಂಬುವರು 2011 ರಲ್ಲಿ ವಿಶಿಷ್ಟ ಶೌರ್ಯ ಪ್ರದರ್ಶನಕ್ಕಾಗಿ ಮೀಸಲಾಗಿರುವ ಸೇವಾ ಪದಕವನ್ನು ಗಳಿಸಿದಂತಹ ಮೊದಲ ಮಹಿಳೆಯಾಗಿದ್ದಾರೆ. ಮಹಿಳೆಯರು ನೇರ ಯುದ್ಧ ದಲ್ಲಿ ಭಾಗಿಯಾಗುವಂತಿಲ್ಲ. ಆದರೆ, ಅದಕ್ಕೆ ಅಪವಾದವೆಂಬಂತೆ ಇದ್ದ ಮೊದಲ ಮಹಿಳೆ Territorial Army ಯಲ್ಲಿ ಸೇವೆ ಮಾಡಿದ ಶಾಂತಿ ಟಿಗ್ಗಾ ರವರು. ಕಾರ್ಗಿಲ್ ಕಾರ್ಯಾಚರಣೆಯ ಸಮಯದಲ್ಲಿ ಕದನ ವಲಯದಲ್ಲಿ ಯುದ್ಧ ವಿಮಾನ ಹಾರಾಟ ನಡೆಸಿದ ಮೊದಲ ಮಹಿಳೆಯೆಂದರೆ ಫ್ಲೈಟ್ ಆಫೀಸರ್ ಗುಂಜನ್ ಸಕ್ಸೇನಾರವರು. ಇವರು ಶೌರ್ಯ ವೀರ ಪ್ರಶಸ್ತಿಗೂ ಭಾಜನರಾಗಿದ್ದಾರೆ. ಲೆಫ್ಟಿನೆಂಟ್ ಜನರಲ್ ಗಾನ್ ವೇ ಲಾಲ್ ಜಿ ಎಂಬಾಕೆ ಅತಿ ಕಿರಿಯ ವಯಸ್ಸಿನಲ್ಲೇ ಸೇನಾ ಕಮಾಂಡರ್ ರವರಿಗೆ ಗುಪ್ತಚರ ವಿಭಾಗದಲ್ಲಿ ಸಹಾಯಕಿಯಾಗಿ ಕೆಲಸ ಮಾಡಿದ ಮೊದಲ ಮಹಿಳೆ ಎನ್ನಿಸಿಕೊಂಡಿದ್ದಾರೆ.

ಸ್ಕ್ವಾಡ್ರನ್ ಲೀಡರ್ ವೀಣಾ ಸಹರಾನ ರವರು ಹೆಚ್ಚಿನ ತೂಕದ ಸಾರಿಗೆ ವಿಮಾನವಾದ I - 76 ವಿಮಾನವನ್ನು ದುರ್ಗಮ ಪ್ರದೇಶವಾದ ಲೇಹ್ ವಾಯು ನೆಲೆಯಲ್ಲಿ ಇಳಿಸಿದ ಮೊದಲಿಗ ಮಹಿಳೆ ಎನ್ನಿಸಿಕೊಂಡಿದ್ದಾರೆ. ಅದೇ ರೀತಿ ಸ್ಕ್ವಾಡ್ರನ್ ಲೀಡರ್ ನಿಧಿ ಹಂಡಾರವರು ಸೇವೆಯ ಸುಮಾರು ಆರು ವರ್ಷಗಳ ಕಡಿಮೆ ಅವಧಿಯಲ್ಲೇ B-Green ವರ್ಗಕ್ಕೆ ಸೇರಿದ್ದಾರೆ. ಈ ಗರಿಮೆ ಅವರಿಗೆ ವಿಮಾನಗಳಲ್ಲಿನ ಎಲ್ಲ ಬಗೆಯ ಕರ್ತವ್ಯ ಮತ್ತು ಎಲ್ಲ ವಿಭಾಗಗಳಲ್ಲಿ ನಾಯಕಿಯಾಗಿ ಕೆಲಸ ನಿರ್ವಹಿಸುವ ಅವಕಾಶ ಸಿಗುತ್ತದೆ. ಮೌಂಟ್ ಎವರೆಸ್ಟ್ ಪರ್ವತ ಶಿಖರವನ್ನು ಮೊದಲಿಗೆ ಏರಿದ ಮಹಿಳಾ ಪೈಲಟ್ ಫ್ಲೈಟ್ ಲೆಫ್ಟಿನೆಂಟ್ ನಿವೇದಿತಾ ಚೌಧುರಿ ಯವರಾಗಿದ್ದಾರೆ. ಫ್ಲೈಟ್ ಲೆಫ್ಟಿನೆಂಟ್ ಸ್ನೇಹಾ ಶೆಖಾವತ್ ರವರು 144 ಮಂದಿ ಪೈಲಟ್ ಗಳ ತಂಡವನ್ನು 2012 ರ 63 ನೇ ಗಣ ರಾಜ್ಯೋತ್ಸವ ಕವಾಯತಿ ಯಲ್ಲಿ ಮುನ್ನಡೆಸುವ ಕಾರ್ಯ ನಿರ್ವಹಿಸಿದ ಮೊದಲ ಮಹಿಳೆಯಾಗಿದ್ದಾರೆ. 2015 ರ ಗಣ ರಾಜ್ಯೋತ್ಸವ









ಸಂದರ್ಭದಲ್ಲಿ ಭಾರತೀಯ ಸೇನಾ ಪಡೆಯ ಮೂರೂ ವಿಭಾಗ ಗಳ ತಂಡದಿಂದ ಅಂದಿನ ಮುಖ್ಯ ಅತಿಥಿಯಾಗಿದ್ದ ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮ ರವರಿಗೆ ಗಾರ್ಡ್ ಆಫ್ ಆನರ್ ನೀಡುವಲ್ಲಿ ಮುನ್ನಡೆಸಿದ ಮೊದಲ ಮಹಿಳಾ ಅಧಿಕಾರಿ ವಿಂಗ್ ಕಮಾಂಡರ್ ಪೂಜಾ ಠಾಕೂರ್ ರವರು.

ಫ್ಲೈಟ್ ಲೆಫ್ಟಿನೆಂಟ್ ಗಳಾದ ಅಲಕಾ ಶುಕ್ಲ ಮತ್ತು ಎಂಪಿ ಸುಮತಿ ಎಂಬುವರು ಬೆಂಗಳೂರಿನ ಯಲಹಂಕ ವಾಯು ನೆಲೆಯಲ್ಲಿ Mi - 8 ಎಂಬ ಎರಡು ಎಂಜಿನ್ ಗಳುಳ್ಳ ಮಧ್ಯಮ ಗಾತ್ರದ ಹೆಲಿಕಾಪ್ಟರ್ ಚಾಲನೆಯಲ್ಲಿ ತರಬೇತಿ ಹೊಂದಿರುವ ಮೊದಲಿಗರಾಗಿದ್ದಾರೆ.

ಭಾರತೀಯ ಸೇನೆಯಲ್ಲಿ ಮಹಿಳೆಯರ ಪಾತ್ರ ತೆರೆಯ ಹಿಂದೆ ಅಂದರೆ ವೈದ್ಯಕೀಯ ಸೇವಾ ವಿಭಾಗದಲ್ಲಿ ಪಾಲ್ಗೊಂಡು ಹಿರಿಮೆ ಗಳಿಸುವಲ್ಲಿ ಯಶಸ್ವಿಯಾಗಿರುವ ಕೆಲವು ಮಹಿಳೆಯರನ್ನು ಪರಿಚಯಿಸುವ ಪ್ರಯತ್ನ ಇಲ್ಲಿದೆ. ಸೇನೆಯ ವಿವಿಧ ವಿಭಾಗಗಳಲ್ಲಿ ಸೈನಿಕರ ಆರೋಗ್ಯ ಮತ್ತು ಅನೇಕ ಸಂಕಷ್ಟ ಪರಿಸ್ಥಿತಿಯಲ್ಲಿ ಅವರುಗಳ ಆರೋಗ್ಯವನ್ನು ಕಾಪಿಡುವಲ್ಲಿ ಈ ಸೇವೆ ಬಹು ಮುಖ್ಯ.

ಮೇಜರ್ ಜನರಲ್ ರಾಖಿ ಸಿಂಗ್ – ಸೈನ್ಯದ ವೈದ್ಯಕೀಯ ಸೇವೆ ಸಲ್ಲಿಸಿರುವ ಹಿರಿಯ ಅಧಿಕಾರಿ ಮತ್ತು ಆಸ್ಪತ್ರೆ ಆಡಳಿತ ನಿರ್ವಹಣೆ ವಹಿಸಿಕೊಂಡ ಮೊದಲ ಮಹಿಳಾ ಅಧಿಕಾರಿ ಇವರಾಗಿದ್ದಾರೆ. ನ್ಯಾಷನಲ್ ಡಿಫೆನ್ಸ್ ಕಾಲೇಜಿನಲ್ಲಿ ಅಭ್ಯಸಿಸಲು ಆಯ್ಕೆಯಾದ ಪ್ರಥಮ ಮಹಿಳೆ ಇವರಾಗಿದ್ದಾರೆ. ಇವರ ಸುಧೀರ್ಘ ಸೇವಾವಧಿಯಲ್ಲಿ ಇವರು ದೇಶದ ಗಡಿಗಳಲ್ಲಿನ ಆಯಕಟ್ಟು ಪ್ರದೇಶಗಳಲ್ಲಿ ಆಸ್ಪತ್ರೆ ಗಳನ್ನು ನಿಭಾಯಿಸುವ ಕೆಲಸವನ್ನು ಮಾಡಿದ್ದಾರೆ. ಇವರು ಸೇನೆಯ ವಿಶಿಷ್ಟ ಸೇವಾ ಪದಕಕ್ಕೆ 2016 ರಲ್ಲಿ ಭಾಜನರಾಗಿದ್ದಾರೆ.

ಬ್ರಿಗೇಡಿಯರ್ ವಿಭಾ ದತ್ತ – ಈಕೆ ಸೇನಾ ವೈದ್ಯಕೀಯ ಸೇವಾ ವಿಭಾಗದಲ್ಲಿ ಉತ್ತಮ ಸೇವೆ ಸಲ್ಲಿಸಿ ಮೇಜರ್ ಜನರಲ್ ಹುದ್ದೆಗೆ ಏರಿದವರು. ಸೇನಾ ಆಸ್ಪತ್ರೆಯ ಪ್ರಯೋಗಾಲಯ ವಿಜ್ಞಾನ ಮತ್ತು ಮಾಲಿಕ್ಯೂಲ್ ಔಷಧಿಗಳ ವಿಭಾಗದಲ್ಲಿ ಮುಖ್ಯಸ್ಥರಾಗಿ ಕೆಲಸ ಮಾಡಿರುವುದೇ ಅಲ್ಲದೇ ಕ್ಯಾನ್ಸರ್ ಚಿಕಿತ್ಸೆಗೆ ಪೂರಕವಾದ ಆಂಕೋಪೆಥಾಲಜಿ ಯಲ್ಲಿ ವಿಶೇಷ ಜ್ಞಾನ ಸಂಪಾದಿಸಿದ್ದಾರೆ. ಇವರ ಸೇವೆಯನ್ನು ಗುರುತಿಸಿ ಇವರಿಗೆ 2003 ರಲ್ಲಿ GOC-in-C ಗೌರವವನ್ನು ನೀಡಿದ್ದಾರೆ. ಅದೇ ಅಲ್ಲದೇ ವಿಶಿಷ್ಟ ಸೇವಾ ಪದಕವನ್ನು 2006 ರಲ್ಲಿ ಮತ್ತು CQAS ಗೌರವವನ್ನು 2014 ರಲ್ಲಿ ನೀಡಿದ್ದಾರೆ. ಇವುಗಳ ಜೊತೆಯಲ್ಲಿ ಇವರು ಸ್ತನ ಕ್ಯಾನ್ಸರ್ ಸಂಬಂಧಿಸಿದ ವಿವಿಧ ವಿಷಯಗಳಲ್ಲಿ ವೈಜ್ಞಾನಿಕ ಸಂಶೋಧನೆಯನ್ನೂ ಮಾಡಿದ್ದಾರೆ.

ಬ್ರಿಗೇಡಿಯರ್ ರಶ್ಮಿ ದತ್ತಾ – ಈಕೆ ಶಿಮ್ಲಾದ ಗಾಂಧಿ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದವರು. ಅರಿವಳಿಕೆ ವಿಜ್ಞಾನದಲ್ಲಿ ಈಕೆ ಹೆಸರು ಮಾಡಿದವರು. ಅನೇಕ ವೈದ್ಯಕೀಯ ವಿಜ್ಞಾನದ ಪ್ರಬಂಧಗಳೂ ಇವರಿಂದ ಪ್ರಕಟವಾಗಿವೆ. ಇವರ ಕಾರ್ಯ ಕ್ಷಮತೆಯನ್ನು ಗುರುತಿಸಿ ಇವರಿಗೆ ಎರಡು ಬಾರಿ ಅಂದರೆ 2006 ಮತ್ತು 2010 ರಲ್ಲಿ ಸೇನೆಯು ಗೌರವಿಸಿದೆ. 2016 ರಲ್ಲಿ ಸೇನೆಯ ವಿಶಿಷ್ಟ ಸೇವಾ ಪದಕಕ್ಕೂ ಈ ಮಹಿಳೆ ಭಾಜನರಾಗಿದ್ದಾರೆ.

ಕರ್ನಲ್ ಅಮಿತಾ ಚತುರ್ವೇದಿ – ಈಕೆ 1985 ರಲ್ಲಿ ಸೇನಾ ವೈದ್ಯಕೀಯ ವಿಭಾಗದಲ್ಲಿ ಕೆಲಸ ಆರಂಭಿಸಿ ಹಲವು ವಿಭಾಗಗಳಲ್ಲಿ ಕೆಲಸ ಮಾಡಿದ್ದಾರೆ. ಇವರ ಬಹು ಪಾಲು ಸೇವೆ ದೇಶದ ಈಶಾನ್ಯ ಭಾಗದಲ್ಲೇ ನಡೆದು ಸೇವೆಯಲ್ಲಿ ಹಿರಿಮೆಯನ್ನು ಗಳಿಸಿದ್ದಾರೆ. ಅಲ್ಲದೇ ವೈದ್ಯಕೀಯ ಅಧಿಕಾರಿಯಾಗಿ ಜಮ್ಮು ಕಾಶ್ಮೀರ ವಿಭಾಗದ ಕಮ್ಯಾಂಡೆಂಟ್ ಮಿಲಿಟರಿ ಆಸ್ಪತ್ರೆಯಲ್ಲಿ ಕೆಲಸ ಮಾಡಿ ಅನೇಕ ವಿಷಮ ಸನ್ನಿವೇಶಗಳನ್ನು ನಿಭಾಯಿಸಿದ ಹೆಗ್ಗಳಿಕೆ ಇವರದಾಗಿದೆ. ಭಾರತೀಯ ಸೇನೆಯಲ್ಲಿ ಇವರ ಸೇವೆಯನ್ನು ಗುರುತಿಸಿ ಇವರಿಗೆ 2016 ರಲ್ಲಿ ವಿಶಿಷ್ಟ ಸೇವಾ ಪದಕವನ್ನು ನೀಡಲಾಗಿದೆ.

ಹೀಗೆ ಇಂತಹ ವಿಶಿಷ್ಟ ಮಹಿಳೆಯರ ಪಾತ್ರ ನಮ್ಮಲ್ಲಿ ಹಲವಾರು ಸಿಗುತ್ತದೆ. ನಾವು ಪ್ರತಿವರ್ಷ ಆಚರಿಸುವ ಮಹಿಳಾ ದಿನಾಚರಣೆಯಂದು ಇಂತಹ ಅನುಕರಣೀಯ ಮಹಿಳೆಯರನ್ನು ನೆನಪು ಮಾಡಿ ಕೊಳ್ಳುವ ಮೂಲಕ ಅವರ ಹಾದಿ ಇಂದಿನವರಿಗೆ ಮಾದರಿಯಂತಾಗಲಿ. ಇಲ್ಲಿ ಇವರುಗಳ ಸೇವೆಯೇ ಅಲ್ಲದೇ ನಾವು ನಮ್ಮ ನಗರಗಳಲ್ಲಿ ದಿನ ನಿತ್ಯ ನೋಡುವ ಮಹಿಳಾ ಪೋಲೀಸರು, ಕೂಡು ರಸ್ತೆಗಳಲ್ಲಿ ವಾಹನ ದಟ್ಟಣೆಯನ್ನು ನಿಭಾಯಿಸುವ ಮಹಿಳೆಯರು, ಗೃಹ ರಕ್ಷಕ ದಳದಲ್ಲಿ ಸೇವೆ ಮಾಡುವವರು ಇವರೆಲ್ಲರ ಸೇವೆಯೂ ಇಂದಿನ ಯುವ ಸಮಾಜಕ್ಕೆ ಯಾವಾಗಲೂ ಮಾದರಿಯಾಗಿರಲಿ.

## ಸ್ವಚ್ಛತೆ, ಶುಚಿತ್ವಕ್ಕೆ ವಿಜಯಪುರ

# ಜಿಲ್ಲಾಸ್ಪತ್ರೆಗೆ ಪ್ರಶಸ್ತಿಯ ಗರಿ







ಗುರುರಾಜ ಕನ್ನೂರ

ಸರ್ಕಾರಿ ಆಸ್ಪತ್ರೆಗಳೆಂದರೆ ದೂರ ಉಳಿಯುವ ಇಂದಿನ ದಿನಗಳಲ್ಲಿ ಗುಣಮಟ್ಟ ಹಾಗೂ ಸೋಂಕು ರಹಿತ ಸೇವೆಗೆ ಮುಂದಾಗಿ ಸಾರ್ವಜನಿಕರು ಹೊಗಳುವಂತಹ ಸಾಧನೆ ಮಾಡಿ ಸತತವಾಗಿ ಎರಡು ಬಾರಿ ಕೇಂದ್ರ ಸರ್ಕಾರದ 'ಕಾಯಕಲ್ಪ' ಪ್ರಶಸ್ತಿಯ ಗರಿ ವಿಜಯಪುರದ ಸರ್ಕಾರಿ ಆಸ್ಪತ್ರೆಗೆ ಲಭಿಸಿರುವುದು ರಾಜ್ಯದಲ್ಲಿ ಸರ್ಕಾರಿ ಆಸ್ಪತ್ರೆಗಳು ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಿವೆ ಎನ್ನುವುದಕ್ಕೆ ತಾಜಾ ಉದಾಹರಣೆ.

ರಾಜ್ಯದಲ್ಲೇ ಮೊದಲ ಅತ್ಯುತ್ತಮ ಸೇವಾ ಪ್ರಶಸ್ತಿ ಹಾಗೂ ಅತ್ಯುತ್ತಮ ಕಾಯಕಲ್ಪ ಪ್ರಶಸ್ತಿಗೆ ಭಾಜನವಾಗಿದೆ ವಿಜಯಪುರ ಸರ್ಕಾರಿ ಜಿಲ್ಲಾಸ್ಪತ್ರೆ.

**2ನೇ ಬಾರಿಗೆ ಪ್ರಶಸ್ತಿಗೆ ಭಾಜನ:**


ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ನರೇಂದ್ರ ಮೋದಿ ಅವರ ಕನಸಿನ ಸ್ವಚ್ಛ ಭಾರತ ಅಭಿಯಾನದಡಿ ಕೊಡ ಮಾಡುವ ಪ್ರಶಸ್ತಿ ಇದಾಗಿದೆ. ಕಳೆದ 2015–16ನೇ ಸಾಲಿನಲ್ಲಿ ಹಾಗೂ 2016–17ರಲ್ಲಿ ಸತತ ಎರಡು ಬಾರಿ ಸ್ವಚ್ಛ ಭಾರತಕ್ಕೆ ಓಗೊಟ್ಟು ರಾಜ್ಯದಲ್ಲೇ ವಿಜಯಪುರ ಜಿಲ್ಲಾಸ್ಪತ್ರೆ ಈ ಪ್ರಶಸ್ತಿಗೆ ಭಾಜನವಾಗಿದ್ದು ವಿಶೇಷ. ಪ್ರಶಸ್ತಿಯೊಂದಿಗೆ 50 ಲಕ್ಷ ರೂ. ಬಹುಮಾನ ನೀಡಲಾಗುತ್ತದೆ. ರಾಜ್ಯದ 20 ಜಿಲ್ಲಾಸ್ಪತ್ರೆಗಳ ಪೈಕಿ ಈ ಆಸ್ಪತ್ರೆಗೆ ಪ್ರಶಸ್ತಿ ಒಲಿದಿರುವುದು ಈ ಆಸ್ಪತ್ರೆಯ ಹೆಗ್ಗಳಿಕೆ. ಶಿವಮೊಗ್ಗದ ಮೆಗ್ಗಾನ್ ಜಿಲ್ಲಾಸ್ಪತ್ರೆ 480 ಅಂಕ ಪಡೆದು ಎರಡನೇ ಸ್ಥಾನ ಪಡೆದಿದ್ದು, ಬೆಂಗಳೂರಿನ ವಾಣಿ ಜಿಲ್ಲಾಸ್ಪತ್ರೆ ತೃತೀಯ ಸ್ಥಾನಕ್ಕೆ ತೃಪ್ತಿ ಪಡೆದುಕೊಂಡಿದೆ.



**ಆಯ್ಕೆ ಹೇಗೆ?**

ತ್ಯಾಜ್ಯಗಳ ವಿಲೇವಾರಿ, ಮರುಬಳಕೆ, ಒಳ ರೋಗಿಗಳ ವಾರ್ಡ್ ಸ್ವಚ್ಛತೆ, ಶೌಚಾಲಯ, ಪರಿಸರ, ಸಿಬ್ಬಂದಿ ಲಭ್ಯತೆ ಸೇರಿದಂತೆ ಪ್ರಮುಖ ಅಂಶಗಳ ಆಧಾರದ ಮೇಲೆ ಕೇಂದ್ರ 500 ಅಂಕಗಳನ್ನು ನಿಗದಿಪಡಿಸಿರುತ್ತದೆ. ಅದರಂತೆ ವಿಜಯಪುರ ಜಿಲ್ಲೆ ಕಳೆದ ಬಾರಿ 417, ಪ್ರಸ್ತುತ 487 ಅಂಕ ಪಡೆದಿದೆ.

"ಸ್ವಚ್ಛತೆಯೇ ಆರೋಗ್ಯ" ಎನ್ನುವ ಧ್ಯೇಯ ಹೊಂದಿರುವ ಈ ಜಿಲ್ಲಾಸ್ಪತ್ರೆ ವೈದ್ಯಕೀಯ ಸೇವೆ ಜತೆಗೆ ಸ್ವಚ್ಛತೆ, ಶುಚಿತ್ವಕ್ಕೆ ಹೆಚ್ಚು ಒತ್ತು ನೀಡುತ್ತಿದೆ. ಎಲ್ಲಿ ಸ್ವಚ್ಛತೆ , ಶಿಸ್ತು ಇರುತ್ತದೋ ಅಲ್ಲಿ ಉತ್ತಮ ಆರೋಗ್ಯ ಇರುತ್ತದೆ ಎನ್ನುವುದು ಇಲ್ಲಿನ ಸಿಬ್ಬಂದಿಗಳ ಅಭಿಮತ.





**ಸಿಬ್ಬಂದಿಗೆ ತರಬೇತಿ:**

ಈ ಆಸ್ಪತ್ರೆಯಲ್ಲಿ 44 ಖಾಯಂ ಸಿಬ್ಬಂದಿಗಳಿದ್ದು. 34 ಸಿಬ್ಬಂದಿಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ಸ್ವಚ್ಛತೆ ಕಾಪಾಡಲು ನಿಯೋಜಿಸಲಾಗಿದೆ. ದಿನಕ್ಕೆ ಐದು ಬಾರಿ ವಾರ್ಡ್‌ಗಳ, ಹೊರಾಂಗಣ ಪ್ರಾಂಗಣ, ಆಸ್ಪತ್ರೆ ಸುತ್ತಮುತ್ತ ಸ್ವಚ್ಛತೆ ಕಾಪಾಡಲು ಸಿಬ್ಬಂದಿಗಳಿಗೆ ಪ್ರತಿದಿನ ತರಬೇತಿ ನೀಡಲಾಗಿತ್ತು.

**ಸ್ವಾತಂತ್ರ ಪೂರ್ವದಲ್ಲಿ ಸ್ಥಾಪನೆ:**

ಸ್ವಾತಂತ್ರ ಪೂರ್ವ 1920ರಲ್ಲೇ 146 ಎಕರೆ ವಿಸ್ತಾರವಾದ ಪ್ರದೇಶದಲ್ಲಿ ಸ್ಥಾಪನೆಯಾಗಿರುವ ಈ ಆಸ್ಪತ್ರೆಗೆ ಒಟ್ಟು 400 ಹಾಸಿಗೆಗಳಿವೆ. ಎಲ್ಲ ವಿಭಾಗಗಳಲ್ಲೂ ಯಾವುದೇ ಖಾಸಗಿ ಹೈಟೆಕ್ ಆಸ್ಪತ್ರೆಗೆ ಕಡಿಮೆಯಿಲ್ಲದಂತೆ ಕಾರ್ಯನಿರ್ವಹಿಸುತ್ತ ಜಿಲ್ಲೆಯಿಂದ ನಿತ್ಯ ಆಗಮಿಸುವ ಸಾವಿರಾರು ರೋಗಿಗಳ ಪಾಲಿಗೆ ಧನ್ವಂತರಿಯಂತೆ ಸೇವೆ ಒದಗಿಸುತ್ತಿದೆ. ವಾರ್ಡ್ ಸ್ವಚ್ಛತೆ ಕಾಪಾಡುವುದು ಕಷ್ಟಕರ. ಆದರೆ ಇಲ್ಲಿನ ಸಿಬ್ಬಂದಿ ಅದನ್ನು ಸವಾಲಾಗಿ ಸ್ವೀಕರಿಸಿದ್ದಾರೆ.



### ಮಾದರಿ ಮಕ್ಕಳ ತೀವ್ರ ನಿಗಾ ಘಟಕ:

ಹುಟ್ಟಿದ ತಕ್ಷಣವೇ ಕೆಲವು ಮಕ್ಕಳಿಗೆ ವಿಶೇಷವಾದ ತೊಂದರೆಗಳು ಕಾಣಿಸಿಕೊಳ್ಳತೊಡಗುತ್ತವೆ. ಅದು ಉಸಿರಾಟದ ತೊಂದರೆಯಾಗಿರಬಹುದು, ತೂಕ ಕಡಿಮೆಯಾಗಿರಬಹುದು, ಇಲ್ಲವೇ ಸೋಂಕಿನಿಂದ ಬಳಲುತ್ತಿರಬಹುದು, ಇಂಥ ಸೂಕ್ಷ್ಮ ಮಕ್ಕಳ ರಕ್ಷಣೆ, ಸೂಕ್ತ ಚಿಕಿತ್ಸೆಗಾಗಿಯೇ ಈ ಆಸ್ಪತ್ರೆಯಲ್ಲಿ ಒಂದು ಸುಸಜ್ಜಿತ, ವೈಜ್ಞಾನಿಕ, ತಾಂತ್ರಿಕ ಶ್ರೇಷ್ಠತೆಯುಳ್ಳ ಚಿಕ್ಕ ಮಕ್ಕಳ ತೀವ್ರ ನಿಗಾ ಘಟಕ ಕಾರ್ಯನಿರ್ವಹಿಸುತ್ತಿದೆ.

ಆರಂಭದಲ್ಲಿ ಕೇವಲ ಜಿಲ್ಲಾಸ್ಪತ್ರೆಗೆ ಸೇರಿದ ಮಕ್ಕಳ ಚಿಕಿತ್ಸೆ ಮಾತ್ರ ಮಾಡುತ್ತಿದ್ದ ಘಟಕ ಸಧ್ಯ ಬೇರೆ ಆಸ್ಪತ್ರೆಗಳ ಮಕ್ಕಳ ರಕ್ಷಣೆಯನ್ನು ಮಾಡುವಷ್ಟು ಬೆಳೆದು ನಿಂತಿದೆ. ತನ್ನ ಅತ್ಯುತ್ತಮ ಚಿಕಿತ್ಸೆ ಗುಣದಿಂದಲೇ ಆರಂಭದಲ್ಲಿ ಕೇವಲ 40 ರಿಂದ 50 ಮಕ್ಕಳ ಪ್ರವೇಶವಿದ್ದು, ಪ್ರಸ್ತುತ ವರ್ಷದಲ್ಲಿ 100ಕ್ಕೂ ಅಧಿಕ ಮಕ್ಕಳು ಪ್ರವೇಶ ಬಯಸಿ ಗುಣಮುಖರಾಗುವಷ್ಟು ಸೂಕ್ತ ಮತ್ತು ಸುರಕ್ಷಿತ ಚಿಕಿತ್ಸೆಗೆ ಹೆಸರು ಮಾಡುತ್ತಿದೆ.

### ಲಭ್ಯವಿರುವ ಯೋಜನೆಗಳು:

ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಎಲ್ಲ ಯೋಜನೆಗಳು ಹೊರ ಹಾಗೂ ಒಳರೋಗಿಗಳಿಗೆ ಸಂಬಂಧಿಸಿದಂತಹ ಚಿಕಿತ್ಸೆ ಈ ಆಸ್ಪತ್ರೆಯಲ್ಲಿ ಲಭ್ಯವಿದೆ. ಅಲ್ಲದೇ ಯಶಸ್ವಿನಿ, ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ, ಮಡಿಲು ಕಿಟ್, ಜನನಿ ಸುರಕ್ಷಾ ಯೋಜನೆಗಳು ಲಭ್ಯವಿವೆ. ಇನ್ನೂ ಪ್ರತಿನಿತ್ಯ ಬಂದು ಹೋಗುವ ಸಾವಿರಾರು ರೋಗಿಗಳಿಗೆ ನೀರು ಹಾಸಿಗೆ, ಕೆಲವು ಬಡ ರೋಗಿಗಳಿಗೆ ಊಟದ ವ್ಯವಸ್ಥೆ ಹೀಗೆ ಹತ್ತು ಹಲವು ಕಾರಣಗಳಿಂದ ಈ ಆಸ್ಪತ್ರೆ ಜನಸ್ನೇಹಿಯಾಗಿದೆ.

ಇಲ್ಲಿ ಒಂದು ಪ್ರಕೃತಿ ಚಿಕಿತ್ಸಾ ಕೇಂದ್ರ, ಕಿರಿಯ ಆರೋಗ್ಯ ತರಬೇತಿ ಕೇಂದ್ರ, ಶುಶ್ರೂಷಕಿಯರ ತರಬೇತಿ ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ. ಅಲ್ಲದೇ ಅಪೌಷ್ಟಿಕತೆ ನಿವಾರಣಾ ಕೇಂದ್ರವೂ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.

10 ಡಯಾಲಿಸಿಸ್ ಯಂತ್ರಗಳನ್ನು ಹೊಂದಿದ ಸುಸಜ್ಜಿತ ವಿಭಾಗ, 12 ಯಂತ್ರಗಳನ್ನು ಒಳಪಟ್ಟ ಮಕ್ಕಳ ತೀವ್ರ ನಿಗಾ ಘಟಕ, 6 ವಯಸ್ಕ ರೋಗಿಗಳ ತೀವ್ರ ನಿಗಾ ಘಟಕ, 5 ಸುಸಜ್ಜಿತ ಶಸ್ತ್ರ ಚಿಕಿತ್ಸಾ ಕೊಠಡಿ, ಮಹಿಳಾ ಶಸ್ತ್ರ ಚಿಕಿತ್ಸಾ ಕೊಠಡಿಗಳನ್ನು ಹೊಂದಿದ ಈ ಜಿಲ್ಲಾಸ್ಪತ್ರೆಗೆ ನಿತ್ಯವೂ 700 ರಿಂದ 1000 ರೋಗಿಗಳು ಒಳರೋಗಿಗಳಾಗಿ ಬಂದರೆ 1200 ಕ್ಕೂ ಹೆಚ್ಚು ಜನ ಹೊರರೋಗಿಗಳಾಗಿ ಬರುತ್ತಾರೆ.



### ಸಂಪೂರ್ಣವಾಗಿ ಉಚಿತ ಸೇವೆ:

ಮಗುವಿನೊಂದಿಗೆ ತಾಯಂದಿರನ್ನೂ ದಾಖಲಾತಿ ಮಾಡಿಕೊಳ್ಳುವ ವೈದ್ಯರು ಅದಕ್ಕಾಗಿ ಒಟ್ಟಿಗೆ 6 ಹಾಸಿಗೆಗಳನ್ನು ತಯಾರಿಯಲ್ಲಿಟ್ಟಿರುತ್ತಾರೆ. ಒಟ್ಟಿಗೆ ಆರು ಜನ ತಾಯಿಯಂದಿರು ಅಲ್ಲಿ ಸೂಕ್ತ ಚಿಕಿತ್ಸೆಗೆ ಸಿದ್ಧತೆ ಮಾಡಿಕೊಳ್ಳಬಹುದು. ಜೊತೆಗೆ ಮುಖ್ಯವೆಂದರೆ ಈ ಎಲ್ಲವೂ ಸಂಪೂರ್ಣ ಉಚಿತ ಸೇವೆ ಎಂಬುದು ಗಮನಾರ್ಹ ಸಂಗತಿಯಾಗಿದೆ. ತಾಯಿಗೆ ಎರಡು ಹೊತ್ತಿನ ಊಟ, ಹಾಸಿಗೆ, ಔಷಧೋಪಚಾರ ಎಲ್ಲವೂ ಉಚಿತವಾಗಿ ನಿರ್ವಹಿಸಲಾಗುತ್ತಿದೆ.

ಹೆಚ್ಚಿನ ಸ್ವಚ್ಛತೆಗೆ ಆದ್ಯತೆ ನೀಡುವ ಉದ್ದೇಶದಿಂದ ಇನ್ನೂ ಹೆಚ್ಚುವರಿ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ. ವೈದ್ಯಕೀಯ ಸೇವೆಯಲ್ಲಿ ಗುಣಮಟ್ಟ ಕಾಪಾಡಲು ಹೆಚ್ಚುವರಿ ವೈದ್ಯರ ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ. ಇದರಿಂದ ವೈದ್ಯರ ಕೊರತೆ ಕಡಿಮೆಯಾಗಲಿದೆ. ವೈದ್ಯಕೀಯ ಸೇವೆ ಜತೆಗೆ ಸ್ವಚ್ಛತೆಗೂ ಆದ್ಯತೆ ನೀಡಲಾಗುತ್ತಿದೆ. ಗುಣಮಟ್ಟ ಸೇವೆ ನೀಡಲು ಸಿಬ್ಬಂದಿ ಹಾಗೂ ಸಾರ್ವಜನಿಕರ ಪಾಲು ಹೆಚ್ಚಿನದಿದೆ. ನಿರಂತರವಾಗಿ ಸಿಬ್ಬಂದಿ ಹಾಗೂ ರೋಗಿಗಳಿಗೆ ಸ್ವಚ್ಛತೆ ಕುರಿತಾಗಿ ಶಿಕ್ಷಣ ಹಾಗೂ ತಿಳುವಳಿಕೆ ನೀಡಲಾಗಿತ್ತು ಎಂದು ಜಿಲ್ಲಾಸ್ಪತ್ರೆ ಸರ್ಜನ್ ಎ.ಎನ್ ದೇಸಾಯಿ ಹೇಳುತ್ತಾರೆ.

ಆಸ್ಪತ್ರೆಯ ಹಿರಿಯ ಆಪ್ತ ಸಮಾಲೋಚಕ ರವಿ ಕಿತ್ತೂರ ಈ ಪ್ರಶಸ್ತಿಯಿಂದ ನಮ್ಮ ಸಿಬ್ಬಂದಿ ವರ್ಗದವರ ಸಂತೋಷ ಇಮ್ಮಡಿಯಾಗಿದೆ. ನಿರಂತರವಾಗಿ ಹ್ಯಾಟ್ರಿಕ್ ಸಾಧನೆ ನಿಟ್ಟಿನಲ್ಲಿ ನಮ್ಮ ಶ್ರಮವಿದೆ. ಇದರೊಂದಿಗೆ ಕೇವಲ ಪ್ರಶಸ್ತಿಗೆ ಅಪೇಕ್ಷೆ ಪಡದೆ ಬಡ ರೋಗಿಗಳ ಸೇವೆಯಲ್ಲಿ ನಮ್ಮ ಚಿತ್ತವಿದೆ ಎನ್ನುತ್ತಾರೆ. ■



## ಶುಚಿತ್ವದಲ್ಲಿ ಶಿವಮೊಗ್ಗ ಸರ್ಕಾರಿ

# ಮೆಗ್ಗಾನ್ ಆಸ್ಪತ್ರೆಗೆ ರಾಜ್ಯದಲ್ಲಿ 2ನೇ ಸ್ಥಾನ




**ಕೇಂದ್ರ ಸರ್ಕಾರದ ಸ್ವಚ್ಛ ಭಾರತ ಅಭಿಯಾನದ 'ಕಾಯಕಲ್ಪ' ಕಾರ್ಯಕ್ರಮದಡಿ ಸಾರ್ವಜನಿಕ ಆರೋಗ್ಯ ಕೇಂದ್ರಗಳ ನಿರ್ವಹಣೆ, ದುರಸ್ತಿ, ನೈರ್ಮಲ್ಯ ಮತ್ತು ಶುಚಿತ್ವ ಕಾಪಾಡುವಿಕೆಯಲ್ಲಿ ಶಿವಮೊಗ್ಗ ಸರ್ಕಾರಿ ಮೆಡಿಕಲ್ ಕಾಲೇಜ್‌ನ ಬೋಧನಾ ಆಸ್ಪತ್ರೆಯೂ ಆಗಿರುವ, ರಾಜ್ಯದ ಬೃಹತ್ ಸರ್ಕಾರಿ ಆಸ್ಪತ್ರೆಗಳಲ್ಲೊಂದಾದ ಮೆಗ್ಗಾನ್ ಆಸ್ಪತ್ರೆ ರಾಜ್ಯದಲ್ಲಿ 2 ನೇ ಸ್ಥಾನ ಪಡೆದುಕೊಳ್ಳುವ ಮೂಲಕ ಎಲ್ಲರ ಗಮನ ಸೆಳೆದಿದೆ.**

ಬಿ. ರೇಣುಕೇಶ್

ಕೇಂದ್ರ ಸರ್ಕಾರ ಸ್ವಚ್ಛ ಭಾರತ ಅಭಿಯಾನದಡಿ 'ಕಾಯಕಲ್ಪ' ಕಾರ್ಯಕ್ರಮ ರೂಪಿಸಿದೆ. ಇದರಲ್ಲಿ ರಾಜ್ಯದ ಎಲ್ಲ ಜಿಲ್ಲಾ, ತಾಲೂಕು, ಸಮುದಾಯ ಹಾಗೂ ಪ್ರಾಥಮಿಕ ಆಸ್ಪತ್ರೆಗಳಲ್ಲಿನ ಸ್ವಚ್ಛತೆ, ಶುಚಿತ್ವದ ಮೌಲ್ಯಮಾಪನ ಮಾಡಿ ವಾರ್ಷಿಕ ಪ್ರಶಸ್ತಿಗಳನ್ನು ನೀಡಿ ಗೌರವಿಸುತ್ತದೆ.

ಇದರಲ್ಲಿ ರಾಜ್ಯದ ವಿಜಯಪುರ ಜಿಲ್ಲಾಸ್ಪತ್ರೆಯು ಶೇ. 97.2 ಅಂಕ ಪಡೆದು ಪ್ರಥಮ ಸ್ಥಾನದೊಂದಿಗೆ 50 ಲಕ್ಷ ರೂ. ಬಹುಮಾನವನ್ನು ತನ್ನದಾಗಿಸಿಕೊಂಡಿದ್ದರೆ, ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಯು ಶೇ. 96 ಅಂಕ ಗಳಿಸಿ ದ್ವಿತೀಯ ಸ್ಥಾನ ಸಂಪಾದಿಸಿ 20 ಲಕ್ಷ ರೂ. ಬಹುಮಾನ ಪಡೆದುಕೊಂಡಿದೆ. ಉಳಿದಂತೆ ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆ, ತುಮಕೂರು ಜಿಲ್ಲಾಸ್ಪತ್ರೆ, ಕೋಲಾರ ಜಿಲ್ಲಾಸ್ಪತ್ರೆ, ದಕ್ಷಿಣ ಕನ್ನಡದ ವೆನ್‌ಲಾಕ್ ಜಿಲ್ಲಾಸ್ಪತ್ರೆ ಸಮಾಧಾನಕರ ಪ್ರಶಸ್ತಿಯೊಂದಿಗೆ ತಲಾ 3 ಲಕ್ಷ ರೂ. ಬಹುಮಾನ ಗಳಿಸಿವೆ.

ಆಯ್ಕೆ ಹೇಗೆ?: ಪ್ರಶಸ್ತಿಗೆ ಆಯ್ಕೆ ಮಾಡುವುದಕ್ಕೂ ಮುನ್ನ ಒಟ್ಟಾರೆ 6 ವಿಷಯಗಳಡಿ ಮೌಲ್ಯಮಾಪನ ನಡೆಸಲಾಗುತ್ತಿದೆ. ಆಸ್ಪತ್ರೆ ಕಟ್ಟಡದ ನಿರ್ವಹಣೆ–ದುರಸ್ತಿ, ನೈರ್ಮಲ್ಯ ಮತ್ತು ಶುಚಿತ್ವ ಕಾಪಾಡುವಿಕೆ, ಬೆಂಬಲ ಸೇವೆಗಳು, ಸೋಂಕು ತಡೆಗಟ್ಟುವಿಕೆ, ವೈದ್ಯಕೀಯ ತ್ಯಾಜ್ಯ ನಿರ್ವಹಣೆ, ಘನ್ಯತ್ಯಾಜ್ಯ ವಿಲೇವಾರಿ, ಸ್ವಚ್ಛತೆಯ ಬಗ್ಗೆ ಪ್ರಚಾರ ಕಾರ್ಯವನ್ನು ಯಾವ ರೀತಿಯಲ್ಲಿ ನಡೆಸಲಾಗುತ್ತದೆ ಎಂಬುವುದನ್ನು ತಜ್ಞರ ಸಮಿತಿ ಭೇಟಿಯಿತ್ತು ಪರಿಶೀಲನೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸುತ್ತದೆ.

ಈ ವರದಿಯನ್ನು ಪರಿಶೀಲಿಸುವ ಮತ್ತೊಂದು ಸಮಿತಿಯು ಪ್ರತಿಯೊಂದು ವಿಷಯಕ್ಕೂ ಅಂಕಗಳನ್ನು ನೀಡುತ್ತದೆ. ಅದರ ಆಧಾರದ ಮೇಲೆ ಅತ್ಯುತ್ತಮ ಆಸ್ಪತ್ರೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಆಯ್ಕೆ ಮಾಡಲಾಗುತ್ತದೆ.

**ಮೆಚ್ಚುಗೆ:** ಸುತ್ತಮುತ್ತಲಿನ ಜಿಲ್ಲೆಗಳಿಂದಲೂ ಸರ್ಕಾರಿ ಮೆಗ್ಗಾನ್ ಆಸ್ಪತ್ರೆಗೆ ರೋಗಿಗಳು ಚಿಕಿತ್ಸೆಗೆ ಆಗಮಿಸುತ್ತಾರೆ. ರೋಗಿಗಳು, ಅವರ ಕಡೆಯವರು ಸೇರಿದಂತೆ ನೂರಾರು ಜನರು ನಾನಾ ಕೆಲಸ ಕಾರ್ಯದ ನಿಮಿತ್ತ ಆಸ್ಪತ್ರೆಗೆ ಆಗಮಿಸುತ್ತಾರೆ. ಇಂತಹ ದೊಡ್ಡ ಆಸ್ಪತ್ರೆಯನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ನಿಜಕ್ಕೂ ಸವಾಲಿನ ಕೆಲಸವಾಗಿದೆ. ಈ ಸವಾಲನ್ನು ಮೆಗ್ಗಾನ್ ಆಸ್ಪತ್ರೆ ಆಡಳಿತ ಮಂಡಳಿಯು ಯಶಸ್ವಿಯಾಗಿ ನಿರ್ವಹಣೆ ಮಾಡಿಕೊಂಡು ಬರುತ್ತಿರುವುದು ನಿಜಕ್ಕೂ ಅಭಿನಂದನೀಯ, ಶ್ಲಾಘನೀಯ ಸಂಗತಿಯಾಗಿದೆ ಎಂದು ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ■



# ಯುಗಾದಿ ಮರಳಿ ಬರುತಿದೆ...

ಗುರುರಾಜ ಪೋಶೆಟ್ಟಿಹಳ್ಳಿ

**ಯು**ಗಾದಿ ಎಂದರೆ ಹೊಸತು, ಹೊಸ ಋತುವಿನತ್ತ ಪಯಣ, ಭೂಮಿ ಮತ್ತು ಚಂದ್ರನ ಚಲನೆಯನ್ನು ಗುಣಿಸಿ, ಯುಗಾದಿಯ ಆರಂಭವನ್ನು ನಿರ್ಧರಿಸಲಾಗುತ್ತದೆ.

ಭಾರತೀಯ ವರ್ಷದ ಆದಿ ದಿನವಾದ ಯುಗಾದಿಯು ಪರಿಸರದಲ್ಲೆಲ್ಲ ಪ್ರಸನ್ನತೆಯನ್ನು ಪ್ರಚೋದಿಸುವ ಪರ್ವಕಾಲವಾಗಿದೆ. ಈ ಹಬ್ಬಕ್ಕೆ ಆಧ್ಯಾತ್ಮಿಕವಾಗಿ, ವೈಜ್ಞಾನಿಕವಾಗಿ ಮನಃಶಾಸ್ತ್ರ ಸಂಬಂಧ ಇರುವ ಮಹತ್ವ ವಿಶೇಷವಾಗಿದೆ.

ದೇವತೆಗಳು, ಯಕ್ಷ, ಗಂಧರ್ವ ಮಾನವರಿಗೆಲ್ಲ ಕಾಲ ಗಣನೆಯೇ ಆದಿಯಾಗಿರುವುದರಿಂದ ಇದನ್ನು ಯುಗ ಪ್ರತಿಪದೆ ಅಥವಾ ಯುಗಾದಿ ಎನ್ನುವರು. ಅಖಂಡವಾದ ಕಾಲವನ್ನು ವ್ಯವಹಾರ ದೃಷ್ಟಿಯಿಂದ ವರ್ಷ, ಅಯನ, ಋತುಮಾಸ, ವಾರಗಳಾಗಿ ವಿಭಾಗ ಮಾಡಿರುವುದು ಪ್ರಸಿದ್ಧವಾಗಿದೆ. ಕಾಲವನ್ನು ವಿಭಜಿಸುವ ಕಾರ್ಯದ ಮೊದಲನೆ ದಿನವನ್ನೇ ಯುಗಾದಿ ಎಂದು ಕರೆದಿದ್ದಾರೆ.

ಯುಗಾದಿಯು ಒಂದು ವರ್ಷದ ಕಾಲಮಿತಿಯನ್ನು, ಆಗು ಹೋಗುಗಳನ್ನು ಸ್ಥೂಲವಾಗಿ ಸೂಚಿಸುತ್ತದೆ. ಕಾಲ, ದೇಶಗಳ ಮೇಲಿನಿಂದ ನಮ್ಮ ವ್ಯವಹಾರ ಪ್ರಭಾವಿತವಾಗಿರುತ್ತದೆ.

ವರ್ಷಾ ಕಾಲವು ಭೂಮಿಯಲ್ಲಿ ಬೀಜದ ಸಂಪರ್ಕವಾದಾಗ ಅದನ್ನು ಅಂಕುರಿಸುವಂತೆ ಮಾಡುತ್ತದೆ. ಗ್ರೀಷ್ಮದಲ್ಲಿ ಆ ಕಾರ್ಯ ಆಗುವುದಿಲ್ಲ. ಸೃಷ್ಟಿಯಲ್ಲಿ ಉತ್ಸಾಹವನ್ನು ತುಂಬಿ ಪ್ರಸನ್ನತೆಯನ್ನುಂಟು ಮಾಡುವ ಕಾಲ ವಸಂತೆ; ಅದರ ಆರಂಭವೇ ಯುಗಾದಿ. ಪ್ರೇಮೋತ್ಕರ್ಷದಿಂದ ಉತ್ತರ ದಕ್ಷಿಣ ಧ್ರುವಗಳವರೆಗೆ ಚುಂಬಕ ಶಕ್ತಿಯನ್ನುಂಟು ಮಾಡುವ ಕಾಲ ವಿಶೇಷ ಯುಗಾದಿಯೆನಿಸಿದೆ.

ಯುಗಾದಿಯ ಅಭ್ಯಂಗವು ಆದಿಭೌತಿಕವಾಗಿದ್ದು ದೇಹದಾರ್ಢ್ಯ ಆಕರ್ಷಣೆಗೆ ಸಹಾಯಕವಾಗಿರುವುದು. ಶರೀರ ಆರ್ದ್ರತೆಯನ್ನು ಒಣಹವೆಯಿಂದ ಕಳೆದುಕೊಳ್ಳುತ್ತಿರುವಾಗ ಅಭ್ಯಂಗವು ಹೊಸ ಚೈತನ್ಯ ನೀಡುತ್ತದೆ.

ಪಂಚಾಂಗ ಶ್ರವಣವು ನಮ್ಮ ಜೀವನದ ದಿಶೆಯನ್ನು ತೋರಿಸುವುದು. ನಮ್ಮ ದೇಶ, ನಮ್ಮ ದೇಹ, ನಮ್ಮ ಚಟುವಟಿಕೆಗಳ ಮೇಲೆ ಭವಚಕ್ರದ ಗತಿಯ ಪರಿಣಾಮವೇನೆಂಬುದನ್ನು ತಿಳಿದುಕೊಂಡಲ್ಲಿ ನಮ್ಮ ಅನುಕೂಲಕ್ಕೆ ತಕ್ಕಂತೆ ವ್ಯವಹಾರವನ್ನು ರೂಪಿಸಿಕೊಳ್ಳಬಹುದು.

ಬೇವು ಬೆಲ್ಲಗಳ ಸೇವನೆ ಆಧ್ಯಾತ್ಮಿಕದ ಸಂಕೇತವಾಗಿದೆ. ಸುಖದುಃಖಗಳನ್ನು ಸಮಾನವಾಗಿ ಸ್ವೀಕರಿಸಬೇಕೆಂಬ ಸಾಂಕೇತಿಕ ಸೂಚನೆ ಮಾತ್ರವಾಗಿ ಈ ಸೇವನೆಯು ಇಲ್ಲಿನ ಸುಖದುಃಖಗಳನ್ನು ಉದ್ವೇಗವಿಲ್ಲದೇ ಸ್ವೀಕರಿಸಿ ಸ್ಥಿರಮನಸ್ಕರಾಗಬೇಕೆಂದು ಸೂಚಿಸುತ್ತದೆ.

ವರ್ಷವೆಂಬ ರಥಕ್ಕೆ ಉತ್ತರಾಯಣ ಮತ್ತು ದಕ್ಷಿಣಾಯಣ ಎಂಬ ಎರಡು ಚಕ್ರಗಳು. ಈ ರಥಯಾತ್ರೆಯ ದಾರಿಯುದ್ದಕ್ಕೂ ಹಲವು ಏರುಪೇರುಗಳು ಬರುತ್ತದೆ. ಇವುಗಳನ್ನು ದಾಟಿ ಮುನ್ನಡೆದಾಗ ರಥಯಾತ್ರೆ ಯಶಸ್ವಿಯಾಗುತ್ತದೆ.

**ವರ್ಷೋದಯ, ಹರ್ಷೋದಯ**

ಚೈತ್ರ ಶುದ್ಧ ಪ್ರತಿಪದೆ, ಯುಗಾದಿ ಹಬ್ಬ – ವಿಜಯನಾಮ ಸಂವತ್ಸರಕ್ಕೆ ಸ್ವಾಗತ, ಯುಗಾದಿಯ ಅರುಣೋದಯ ಹರ್ಷೋದಯ; ಮನೆಮನೆಯ ಆಬಾಲ ವೃದ್ಧರ ತನುಮನಗಳಿಗೆ ಹಿರಿತನದ ಅನುಭವ ಕೊಡುವ ವರ್ಷೋದಯ! ಸುಣ್ಣಬಣ್ಣ, ತಳಿರು ತೋರಣ, ಅಭ್ಯಂಜನ, ಇಷ್ಟದೈವ ಸ್ಮರಣೆಯೊಂದಿಗೆ ನೂತನ ವಸ್ತ್ರಾಭರಣ ಧಾರಣೆ, ಪಂಚಾಂಗ ಪಠಣ–ಶ್ರವಣ, ಹೋಳಿಗೆ–ಪಾಯಸ ಭೋಜನ! ಅಲ್ಲದೆ ಬೇವು–ಬೆಲ್ಲ ಸೇವನೆ ಹಬ್ಬದ ಭಾಗಗಳಾಗಿವೆ.

**ಯುಗಾದಿಯೆಂದರೆ ಜೀವಂತಿಕೆ**

ನೂತನ ಆನಂದ, ಯೌವನೋತ್ಸಾಹಗಳನ್ನು ಬೆಳೆಸುವ ವಸಂತನ ಆಗಮನವಾಗುವುದು ಯುಗಾದಿಯಿಂದಲೇ.

ಸುಂದರ ನವ ಸಂವತ್ಸರವೊಂದು ಈ ಪರಿ ಧರೆಗಿಳಿದು ಬರಲು ಭೂದೇವಿಯ ತ್ರಿಭಂಗಿಯ ನರ್ತನವೇ ಕಾರಣ. ದಿನಕ್ಕೊಮ್ಮೆ ತನ್ನ ಅಕ್ಷದ ಮೇಲೆ ಸುತ್ತುವಳು. ವರುಷಕ್ಕೊಮ್ಮೆ ಸೂರ್ಯನ ಸುತ್ತ ಗಿರಗಟ್ಟೆಯಾಡುತ್ತಲೇ ಸುತ್ತುವಳು. ಸುತ್ತುವ ದಾರಿಯಲ್ಲಿ ಈ ಓರೆಯಿಂದ ಆ ವೋರೆ ಒಯ್ಯನೆ ಬಾಗುತ್ತ ವರುಷ ತುಂಬುವ ವೇಳೆಗೆ ತನ್ನ ಹಿಂದಿನ ಓರೆಗೇ ತಲುಪಿ ಒಂದು ಘಳಿಗೆಯೂ ನಿಲ್ಲದೆ ಪುನಃ ಪ್ರಯಾಣ ಪ್ರಾರಂಭಿಸುವಳು.

**ವರ್ಷಾ ಕಾಲವು ಭೂಮಿಯಲ್ಲಿ ಬೀಜದ ಸಂಪರ್ಕವಾದಾಗ ಅದನ್ನು ಅಂಕುರಿಸುವಂತೆ ಮಾಡುತ್ತದೆ. ಗ್ರೀಷ್ಮದಲ್ಲಿ ಆ ಕಾರ್ಯ ಆಗುವುದಿಲ್ಲ. ಸೃಷ್ಟಿಯಲ್ಲಿ ಉತ್ಸಾಹವನ್ನು ತುಂಬಿ ಪ್ರಸನ್ನತೆಯನ್ನುಂಟು ಮಾಡುವ ಕಾಲ ವಸಂತೆ; ಅದರ ಆರಂಭವೇ ಯುಗಾದಿ. ಪ್ರೇಮೋತ್ಕರ್ಷದಿಂದ ಉತ್ತರ ದಕ್ಷಿಣ ಧ್ರುವಗಳವರೆಗೆ ಚುಂಬಕ ಶಕ್ತಿಯನ್ನುಂಟು ಮಾಡುವ ಕಾಲ ವಿಶೇಷ ಯುಗಾದಿಯೆನಿಸಿದೆ.**

ನೆತ್ತಿಗೆ ಬೆಳಕಾದರೆ ಕಾಲುಗಳಿಗೆ ಕತ್ತಲು, ಕರ್ಕಾಟಕ ವೃತ್ತಕ್ಕೆ ಬಿಸಿಲಿನ ಸಿಂಚನೆಯಾದರೆ, ಮಕರ ರೇಖೆಗೆ ಮಂಜಿನ ಹೊದಿಕೆ. ಭೂಮಿಯೊಡಲನ್ನಾಶ್ರಯಿಸಿದ ಕೋಟ್ಯಾಂತರ ಜೀವಿಗಳಿಗೆ ಔಷಧಿಯ ಪೂರೈಕೆ, ಸಸ್ಯಲೋಕದಲ್ಲಾದರೋ ಬಿಸಿಲಿನ, ಋತುಗಳ ಆಚರಣೆಯಿಂದ ಚಿಗುರು–ಹೂ–ಹಣ್ಣುಗಳ ಮೆರವಣಿಗೆ, ಕವಿಗಳ ಬಣ್ಣನೆಗೆ ಕೋಡು. ಪ್ರಕೃತಿಯ ಪರ್ವಕಾಲ.

ಇಂದಿನ ದಿನ ಶ್ರೀರಾಮನು ರಾವಣನನ್ನು ಜಯಿಸಿ ಮರಳಿ ಅಯೋಧ್ಯೆಗೆ ಬಂದು ರಾಜ್ಯಭಾರ ಮಾಡಿದನೆಂಬ ಪ್ರತೀತಿ. ಇಂದಿನ ದಿನವೇ ವಿಷ್ಣುವು ಮತ್ಸ್ಯಾವತಾರವನ್ನು ತಳೆದದ್ದೆಂದೂ ಶಾಲಿವಾಹನ ವಿಕ್ರಮಾದಿತ್ಯನನ್ನು ಜಯಿಸಿ ಶಾಲಿವಾಹನ ಶಕೆ ಎಂದೂ ನವಭಾರತವನ್ನು ನಿರ್ಮಿಸಿದನೆಂದೂ ಚರಿತ್ರೆಯಲ್ಲಿ ನಮೂದಿಸಿರುವರು. ಯುಗಾದಿ ಭರವಸೆ ನೀಡುವ ಅಭಯ ಹಸ್ತ! ಜಗತ್ತು ನಿಂತಿರುವುದೇ ಭರವಸೆಯ ಮೇಲೆ, ಆತ್ಮವಿಶ್ವಾಸ ಬೇರೆಯಲ್ಲ, ಯುಗಾದಿ ಬೇರೆಯಲ್ಲ! ಎಲ್ಲೋ ಒಂದು ಕಡೆ ಅದು ಹಿಂದಿನ ಯುಗಾದಿಯೂ ಆಗಿರಬಹುದು, ಕಳೆದುಕೊಂಡ ಆತ್ಮವಿಶ್ವಾಸವನ್ನು ಮರಳಿ ಪಡೆಯುವುದು ಈಗ ಮನೆಯ ಕದ ತಟ್ಟುತ್ತಿರುವ ಹೊಸ ಯುಗಾದಿಯಲ್ಲೇ!

ಯುಗಾದಿ ಹತ್ತು ಹಲವು ಪರಂಪರೆಯ ಆರಂಭ ದಿನ, ವರ್ಷದ ಹಗಲು ಮತ್ತು ರಾತ್ರಿ ಎರಡೂ ಸಮನಾಗಿರುವ ದಿವಸ. ವರ್ಷದ ಮೂರೂವರೆ ಶುಭ ದಿನಗಳಲ್ಲಿ ಮೊದಲ ಮುಹೂರ್ತ ದಿನ. 'ಋತೂನಾಂ ಕುಸುಮಾಕರ' ಎಂಬ ಗೀತಾಚಾರ್ಯನ ವಾಣಿಯಂತೆ ಋತುರಾಜ ವಸಂತದ ಶುಭಾಗಮನ ದಿನ.

ಅಭ್ಯಂಜನ ಸ್ನಾನ ಬಹಿರಂಗ ಶುದ್ಧಿಯ ಸಾಧನ. ಶುಭನೂತನ ವಸ್ತ್ರಧಾರಣೆ ಅಲಂಕಾರದ ಸಾಧನ. ದೇವತಾಪೂಜೆ ಪರಮಶಕ್ತಿಗೆ ತೋರುವ ಕೃತಜ್ಞತೆ. ಭಕ್ಷ್ಯ, ಭೋಜನಗಳ ಆಸ್ವಾದನೆ ದೇವತೆಗಳು ನೀಡಿರುವ ಅನುಕೂಲಗಳ ಅನುಭವ. ಈ ಎಲ್ಲ ಕಾರ್ಯಕ್ರಮಗಳ ಹಿಂದೆ ಒಂದು ಅಂತರಾರ್ಥವಿದೆ. ಹಳತನ್ನೆಲ್ಲ ಕಳೆದು ಹೊಸತನ್ನು ಆವಿಷ್ಕಾರಗೊಳಿಸುವ ಉದ್ದೇಶ ಅದು. ಜಡತೆಯನ್ನು ಕಳಚಿ, ಉತ್ಸಾಹ ತುಂಬಿಕೊಂಡು, ಚೈತನ್ಯ ದಾಗರವಾಗೋಣ.

ಹಬ್ಬವೆಂದರೆ ಊಟೋಪಚಾರ, ಮಕ್ಕಳಿಗಂತೂ ಆಟ–ತಿಂಡಿಗಳ ಸಂಭ್ರಮ. ಮನೆಯ ಸ್ತ್ರೀಯರು ಒಟ್ಟಿಗೆ ಬೆರೆತು, ಹರಟೆ ಹೊಡೆಯುತ್ತ ತಿಂಡಿಗಳ ತಯಾರಿಯಲ್ಲಿ ಮಗ್ನರಾಗಿರುವುದು 'ಕೌಟುಂಬಿಕ ಬಾಂಧವ್ಯ'ದ ಪ್ರತೀಕ.

ಆ ದಿನ ಬೇವು – ಬೆಲ್ಲ ತಿನ್ನುವುದು ಬದುಕಿನ ಹಿಗ್ಗು–ಕುಗ್ಗುಗಳನ್ನು ಸಮಭಾವದಿಂದ ಅಂಗೀಕರಿಸುವುದರ ಸಂಕೇತ. ಬೇವನ್ನು ಬಿಸಾಡಿ ಬೆಲ್ಲವನ್ನೇ ತಿನ್ನುವ ಸ್ವಪ್ನವಿಹಾರ ಎಲ್ಲರ ಹಣೆಬರಹಕ್ಕಿರುವ ಭಾಗ್ಯವಲ್ಲ. ಸ್ಥಿತಪ್ರಜ್ಞನಾಗಿ, ಜೀವನದ ಆಗು–ಹೋಗುಗಳನ್ನು 'ಸಮರಸವೇ ಜೀವನ' ಎಂದು ಸ್ವೀಕರಿಸಲು ಯುಗಾದಿ ಮಾರ್ಗದರ್ಶಿ. ■



# ವಿಶ್ವ ಜಲದಿನ ಮತ್ತು ನೀರಿನ ಮಹತ್ವ

ಕೆ. ಎನ್. ಶ್ರೀನಿವಾಸಯ್ಯ

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ನಿರ್ಣಯದಂತೆ 2005 ರಿಂದ 2015ರ ದಶಕವನ್ನು "ಅಂತರ ರಾಷ್ಟ್ರೀಯ ಜೀವಕ್ಕಾಗಿ ನೀರು" ದಶಕವೆಂದು ಆಚರಿಸಲಾಯಿತು.

ವಿಶ್ವದ ಶೇಕಡ 70% ಕ್ಕೂ ಹೆಚ್ಚು ಭಾಗ ನೀರಿನಿಂದಲೇ ಕೂಡಿದ್ದರೂ ವಾಸಿಸುವ ಜೀವಿಗಳಿಗೆ ಬೇಕಾಗುವ ಸಿಹಿ ನೀರು ಸಿಗುವುದು ಕಷ್ಟ ಅದು ಶೇಕಡ 2ಕ್ಕಿಂತಲೂ ಕಡಿಮೆ ಇದೆ. ಈ ಹಿನ್ನೆಲೆಯಲ್ಲಿ ವಿಶ್ವದ ಜೀವಕೋಟಿಗೆ ಸ್ವಚ್ಛವಾದ ಶುದ್ಧವಾದ ನೀರನ್ನು ನೀಡುವುದು ಸುಲಭದ ಕೆಲಸವಲ್ಲ. ಇದರ ಜಾಗೃತಿಗಾಗಿ ವಿಶ್ವಸಂಸ್ಥೆ ಹೀಗೆ ಘೋಷಿಸಿತು.

ಬ್ರೆಜಿಲ್‌ನ ರಿಯೋ ಡಿಜನೈರೋದಲ್ಲಿ 1993ರಲ್ಲಿ ನಡೆದ ವಿಶ್ವಸಂಸ್ಥೆಯ ಪರಿಸರ ಮತ್ತು ಅಭಿವೃದ್ಧಿ ಸಮಾವೇಶದಲ್ಲಿ ಜಲ ಸಂರಕ್ಷಣೆಯ ಮಹತ್ವವನ್ನು ಸಾರಲಾಯಿತು. ಆಗ ತೆಗೆದುಕೊಂಡ ತೀರ್ಮಾನದಂತೆ ಪ್ರತಿ ವರ್ಷ ಮಾರ್ಚ್–22 ದಿನವನ್ನು ವಿಶ್ವ ಜಲದಿನವೆಂದು ಆಚರಿಸಲು ನಿರ್ಧರಿಸಲಾಯಿತು.

ಅಂದು ತೆಗೆದುಕೊಂಡ ವಿಶ್ವಸಂಸ್ಥೆಯ ನಿರ್ಣಯಗಳನ್ನು ಅದರ ಸದಸ್ಯ ರಾಷ್ಟ್ರಗಳು ಪಾಲಿಸುತ್ತಿವೆ. ಆ ದಿನದಿಂದ ಜಲ ಜಾಗೃತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ. ಈ

1994 ರಿಂದ ಪ್ರತಿ ವರ್ಷ ನೀರಿನ ಸಂರಕ್ಷಣೆ ಮತ್ತು ನೀರಿನ ಮಹತ್ವ ಅರಿಯಲು ಜಲ ದಿನದ ಘೋಷಣೆಗಳನ್ನು ಘೋಷಿಸಲಾಗಿದೆ.

| | |
|---|---|
| 1994 | – ಎಲ್ಲರ ಚಿತ್ತ ಜಲಸಂಪನ್ಮೂಲ ದತ್ತ |
| 1995 | – ಮಹಿಳೆ ಮತ್ತು ನೀರು |
| 1996 | – ಬಾಯಾರಿದ ನಗರಗಳಿಗೆ ನೀರು |
| 1997 | – ಜಗತ್ತಿನಲ್ಲಿರುವ ನೀರು ಸಾಲುತ್ತದೆಯೇ? |
| 1998 | – ಅಂತರ್ಜಲ ಗುಪ್ತ ಸಂಪನ್ಮೂಲ |
| 1999 | – ಕೆಳಸ್ತರದಲ್ಲಿ ಬದುಕುವವರಿಗೂ ನೀರು |
| 2000 | – 21 ನೇ ಶತಮಾನದಲ್ಲಿ ಜಲ,ನೆಲ |
| 2001 | – ಉತ್ತಮ ಆರೋಗ್ಯಕ್ಕೊಂದು ಯಶಸ್ವೀ ನೀರಿನ ಸೂತ್ರ |
| 2002 | – ಅಭಿವೃದ್ಧಿಯ ಪಥದತ್ತ ನೀರು |
| 2003 | – ಭವಿಷ್ಯದ ಉಳಿವಿಗಾಗಿ ನೀರು |
| 2004 | – ನೀರು ಮತ್ತು ಪ್ರವಾಹ |
| 2005 | – ಬದುಕಿಗೆ ನೀರು ಆಧಾರ |
| 2006 | – ಸಂಪ್ರದಾಯ ಮತ್ತು ನೀರು |
| 2007 | – ಜಲ ಕ್ಷಾಮದ ನಿರ್ವಹಣೆ |
| 2008 | – ಉತ್ತಮ ಒಳಚರಂಡಿ ವ್ಯವಸ್ಥೆ |
| 2009 | – ಶುದ್ಧ ನೀರು ಮತ್ತು ಅಚ್ಚುಕಟ್ಟಾದ ಚರಂಡಿ |
| 2010 | – ಆರೋಗ್ಯಕ್ಕಾಗಿ ಸ್ವಚ್ಛ ನೀರು |
| 2005–15 | – ನೀರಿನ ಜಾಗೃತ ವರ್ಷ***** |

ಕಾರ್ಯಕ್ರಮದಲ್ಲಿ ಹಲವು ಸರ್ಕಾರೇತರ ಸಂಸ್ಥೆಗಳು , ಸ್ವಯಂ ಸೇವಾ ಸಂಸ್ಥೆಗಳು ಸಹಕಾರ ನೀಡುತ್ತಿವೆ. 1997ರಿಂದ ಪ್ರತಿ 3 ವರ್ಷಕ್ಕೊಮ್ಮೆ 'ವಿಶ್ವ ಜಲ ಸಮಿತಿ' ವಿಶ್ವ ಜಲ ದಿನದಂದು ವಿಶ್ವ ಜಲ ಮೋರ್ಚಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

**ಜನಸಂಖ್ಯೆ ಮತ್ತು ಅವಶ್ಯಕತೆ:** ಸಮೀಕ್ಷೆಗಳಲ್ಲಿ ಉಲ್ಲೇಖವಾಗಿರುವ ಅಂಕಿ ಅಂಶಗಳು ದಿಗಿಲು ಹುಟ್ಟಿಸುವಂತಿದೆ. ಜನಸಂಖ್ಯೆಯ ದೃಷ್ಟಿಯಿಂದ ಭಾರತ ವಿಶ್ವದ 2ನೇ ದೊಡ್ಡ ರಾಷ್ಟ್ರವಾಗಿದೆ. ಹವಾಮಾನ ವೈಪರೀತ್ಯ, ಜಾಗತಿಕ ತಾಪಮಾನ, ಪರಿಸರ ಮಾಲಿನ್ಯ ಮತ್ತಿತರ ಕಾರಣಗಳಿಂದ ಈಗಾಗಲೇ ನೀರಿನ ಅಭಾವ ಎದುರಿಸುತ್ತಿರುವ ನಮಗೆ ಮತ್ತಷ್ಟು ಜಲ ಹೊರೆ ಬೀಳಲಿದೆ.

**ಕುಗ್ಗುತ್ತಿರುವ ತೇವಾಂಶ ಪದರ:** ಕ್ರಮವಾಗಿ ವಿಶ್ವದ ಪ್ರಾಣಿ ಮತ್ತು ಸಸ್ಯ ಸಂಪತ್ತಿನ ಶೇ.6 ಮತ್ತು 12.5 ರಷ್ಟು ಪಾಲು ಭಾರತದಲ್ಲಿದೆ. ಇನ್ನು ನಮ್ಮ ಸಾಗರಗಳಲ್ಲಿರುವ 2,200 ಕ್ಕೂ ಮಿಗಿಲಾದ ವಿವಿಧ ಜಾತಿ ಮೀನುಗಳಲ್ಲಿ ಶೇ.3.3 ಮೀನುಗಳ ಸಂತತಿ ಅವನತಿಯ ಹಾದಿಯಲ್ಲಿದೆ. ಭಾರತದಲ್ಲಿ ಶೇ.40 ಹೆಕ್ಟೇರ್ ದಶಲಕ್ಷ ಪ್ರದೇಶ ಜೌಗು ತಾಣವಾಗಿದೆ. ಅಂದರೆ 193,000 ಟನ್‌ನಷ್ಟು ತ್ಯಾಜ್ಯ ನೀರು ಕಡಲನ್ನು ಸೇರಿಕೊಳ್ಳುತ್ತಿದೆ.

**ಅಂತರ್ಜಲ ಕುಸಿತಕ್ಕೆ ಕಾರಣ..?** ಭೂಮಿಯ ಶಿಲಾ ರಚನೆಯಲ್ಲಿ ಇತ್ತೀಚಿನ ದಶಕಗಳಲ್ಲಿ ಬದಲಾವಣೆಯಾಗದಿದ್ದರೂ, ಅಂತರ್ಜಲ ಇಳಿಕೆಗೆ ಭೂಮಿಯ ಮೇಲ್ಮೈ ಚಟುವಟಿಕೆಗಳೇ ಪ್ರಮುಖ ಕಾರಣ. ಕಾಡುಗಳು ಮಳೆ ಸುರಿಸುತ್ತವೆ. ಸುರಿದ ಮಳೆ ನೀರನ್ನು ಭೂಮಿಗೆ ಇಂಗಿಸುತ್ತವೆ. ಆದರೆ ಅರಣ್ಯ ನಾಶ ಅವ್ಯಾಹತವಾಗಿದೆ. ಭೂಮಿ ಬಂಜರಾದಾಗ, ಮೇಲ್ಮಣ್ಣು ಕೊಚ್ಚಿ ಕಡಿಮೆಯಾದಾಗ ನೀರು ಇಂಗುವ ಪ್ರಮಾಣವೂ ಕಡಿಮೆಯಾಗುತ್ತದೆ. ಹೆಚ್ಚೆಚ್ಚು ನೀರಾವರಿ ಬೆಳೆ ಬೆಳೆಯುವುದು ಮತ್ತು ಜಾಗತಿಕವಾಗಿ ನೀರಿನ ಬಳಕೆ ವಿಪರೀತವಾಗಿ ಹೆಚ್ಚಿರುವುದು. ಅವೈಜ್ಞಾನಿಕ ಪದ್ಧತಿಯಿಂದ ಹೆಚ್ಚು ನೀರು ಮೇಲೆತ್ತುವುದು. ಅಕ್ಕಪಕ್ಕದಲ್ಲೇ ಕೊಳವೆ ಬಾವಿ ಕೊರೆಯುವುದು. ಅಗತ್ಯಕ್ಕಿಂತ ಹೆಚ್ಚು ನೀರನ್ನು ಕೃಷಿ, ಗೃಹೋಪಯೋಗಿ ಕೆಲಸಕ್ಕೆ ಬಳಸುವುದು.

**ಜಲಮಾಲಿನ್ಯ :** ಈಗಾಗಲೇ ಲಭ್ಯವಿರುವ ಮೇಲ್ಮೈ ಜಲ ಮೂಲದ ಶೇ.70 ರಷ್ಟು ಮತ್ತು ಬಹು ಪ್ರಮಾಣದಲ್ಲಿ ಅಂತರ್ಜಲ ಕಲುಷಿತಗೊಂಡಿದೆ. 1995ರಲ್ಲೇ ದೇಶದ 14 ಪ್ರಮುಖ ನದಿಗಳು ಕಲುಷಿತಗೊಂಡಿವೆ ಎಂದು ವಿಶ್ವ ಬ್ಯಾಂಕ್ ಎಚ್ಚರಿಸಿತ್ತು.

**ಜಲ ಮಾಲಿನ್ಯದ ಮೂಲಗಳು :** ಮನೆ, ಸಂಸ್ಥೆ, ಸ್ನಾನ ಗೃಹ, ಅಡುಗೆ ಮನೆ, ಆಸ್ಪತ್ರೆ ಇತ್ಯಾದಿ ಪಾತ್ರೆ, ಬಟ್ಟೆಗಳಿಂದ ಉತ್ಪಾದನೆಯಾಗುವ ತ್ಯಾಜ್ಯ ನೀರನ್ನು ಗ್ರೇ ವಾಟರ್ ಎನ್ನುತ್ತಾರೆ. ಇನ್ನು ಶೌಚ ಮತ್ತು ಕೈಗಾರಿಕೆಗಳು ಹೊರಸೂಸುವ ನೀರನ್ನು ಬ್ಲಾಕ್ ವಾಟರ್ ಎನ್ನುತ್ತಾರೆ. ಬೃಹತ್ ಕೈಗಾರಿಕೆಗಳು ಹೊರ ಬಿಡುವ ನೀರನ್ನು ಸ್ಟಾರ್ಮ್ ವಾಟರ್ ಎನ್ನುವುದುಂಟು.

**ನೀರು– ಆರೋಗ್ಯ ಸಮಸ್ಯೆ :** ಆರೋಗ್ಯ ನೀಡುವ ಜಲವೇ ಇಂದು ಕಲುಷಿತವಾಗಿದೆ. ನೀರಿನಲ್ಲಿ ಪ್ಲೋರೈಡ್ ಮತ್ತು ಆರ್ಸೆನಿಕ್ ಹೆಚ್ಚಿ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿವೆ. ನೀರಿನಲ್ಲಿ 1.5 ಪಿಪಿಎಂ ನಷ್ಟು ಇರಬೇಕಾದ – ಪ್ಲೋರೈಡ್ ಅಂಶ ರಾಜ್ಯದ ಕೆಲವೆಡೆ 7 ಪಿಪಿಎಂನಷ್ಟು ಹೆಚ್ಚಿದೆ.

ಶುದ್ಧ ಅಂತರ್ಜಲ ಕಲುಷಿತವಾಗಲು ಪ್ರಮುಖ ಕಾರಣಗಳು ಶೌಚಗುಂಡಿಯ ಕಲ್ಮಶ ರೋಗಕಾರಕ ಬ್ಯಾಕ್ಟೀರಿಯಾಗಳೊಂದಿಗೆ ಅಂತರ್ಜಲ ಸೇರಿರುವುದು. ವಿಷಯುಕ್ತ ಮತ್ತು ಭಾರಲೋಹ ಅಂತರ್ಜಲ ಸೇರಿದ್ದು, ಅವ್ಯವಸ್ಥಿತ ಚರಂಡಿ, ಕಲ್ಮಶ ನೀರು ನಿಲ್ಲುವ ಸ್ಥಳಗಳಿಂದ ನೀರು ಅಂತರ್ಜಲ ಸೇರುತ್ತದೆ. ಕೃಷಿಗೆ ಬಳಸಿದ ಅಪಾರ ರಸ ಗೊಬ್ಬರ, ಕೀಟ ನಾಶಕಗಳು ಅಂತರ್ಜಲ ಸೇರಿರುವುದು.

**ಆರೋಗ್ಯ ಕಾಪಾಡುವುದರಲ್ಲಿ ನೀರಿನ ಮಹತ್ವ :** ಪ್ರಪಂಚದ ಪುರಾತನ ವೈದ್ಯಕೀಯ ಶಾಸ್ತ್ರವಾದ ಆಯುರ್ವೇದದಲ್ಲಿ ನೀರಿನ ಮಹತ್ವವನ್ನು ಹಲವಾರು ಕಡೆಗಳಲ್ಲಿ ಹೇಳಿದ್ದಾರೆ.

ಶುದ್ಧವಾದ ಕುಡಿಯುವ ನೀರು ಉತ್ತಮ ಆಹಾರ. ನಾವು ದಿನವನ್ನು ಪ್ರಾರಂಭ ಮಾಡುವಾಗ 2ರಿಂದ 3 ಲೋಟ ಬೆಚ್ಚಗಿನ ನೀರು ಕುಡಿಯುವುದರಿಂದ ಆರೋಗ್ಯಕ್ಕೆ ಸಹಾಯಕಾರಿ. ಇದು ನಮ್ಮ ಜಠರದಲ್ಲಿನ ಆಮ್ಲತೆಯನ್ನು ಕಡಿಮೆ ಮಾಡುತ್ತದೆ. ಮಲ, ಮೂತ್ರ ವಿಸರ್ಜನೆಯಲ್ಲಿ ಹಾಗೂ ಮುಖ್ಯವಾಗಿ ಮಲಬದ್ಧತೆಯನ್ನು ತಡೆಯುವುದರಲ್ಲಿ ಉಪಯೋಗಕರ.

ಪ್ರತಿ ಘಂಟೆಗೆ ಒಂದು ಬಾರಿ 1 ಲೋಟ ಬೆಚ್ಚಗಿನ ನೀರು ಕುಡಿಯುವುದರಿಂದ ನಮ್ಮ ಜೀರ್ಣ ಕ್ರಿಯೆ ಉತ್ತಮವಾಗುತ್ತದೆ. ಹಾಗೂ ಕಫ ದೇಹದಲ್ಲಿ ಸೇರುವುದು ನಿಲ್ಲುತ್ತದೆ. ಗಂಟಲು ಕೆರೆತದಲ್ಲಿ ಬಿಸಿನೀರಿಗೆ ಸ್ವಲ್ಪ ಉಪ್ಪು ಮಿಶ್ರಣ ಮಾಡಿ ಗಳಗಳ ಮಾಡುವುದು ಎಲ್ಲರಿಗೂ ಗೊತ್ತಿರುವ ವಿಷಯವೇ।

ಆಹಾರವನ್ನು ತೆಗೆದುಕೊಳ್ಳುವ ಮೊದಲು ಒಂದು ಗುಟುಕು ನೀರು ಸಾಕು. ಹೆಚ್ಚು ನೀರು ಕುಡಿದರೆ ಜೀರ್ಣ ಕ್ರಿಯೆಗೆ ಸಹಾಯಕಾರಿ ಆದ ಜಠರಾಗ್ನಿ ಕಡಿಮೆ ಆಗಿ ಅಜೀರ್ಣವಾಗುತ್ತದೆ. ಪದೇ ಪದೇ ನೀರು ಕುಡಿಯುವುದು ಬೇಡ. ಆಹಾರ ತೆಗೆದುಕೊಂಡ 20 ನಿಮಿಷದ ನಂತರವೇ ನೀರು ಕುಡಿಯುವುದು ಜೀರ್ಣ ಕ್ರಿಯೆಗೆ ಸಹಾಯಕಾರಿ. ಇಲ್ಲದಿದ್ದರೆ ಜಠರ ನೀರಿನಿಂದ ತುಂಬಿ, ಹೊಟ್ಟೆ ಉಬ್ಬರವಾಗಿ ಆಹಾರವು ಸರಿಯಾಗಿ ಜೀರ್ಣ ವಾಗುವುದಿಲ್ಲ.


ಕೆಮ್ಮು ಕಫ ಸಹಿತವಾಗಿದ್ದರೆ ಪುನಃ ಪುನಃ ಬಿಸಿ ನೀರು ಕುಡಿಯುವುದು ಅತ್ಯುತ್ತಮ. ಇದು ಕಫ ಕರಗಿಸಲು ಸಹಕಾರಿಯಾಗಿ ಕೆಮ್ಮು ಹೆಚ್ಚಾಗದಂತೆ ತಡೆಯುತ್ತದೆ.

ಬಿಸಿ ನೀರಿನ ಸ್ನಾನ ದೇಹದ ದಣಿವಿಗೆ ಉಪಯುಕ್ತ. ಮೈ, ಕೈನೋವು ಇದ್ದಾಗ, ನೋವು ಇರುವ ಭಾಗದಲ್ಲಿ ಬಿಸಿ ನೀರಿನ ಶಾಖ ಕೊಡುವುದು ನಮಗೆಲ್ಲರಿಗೂ ತಿಳಿದಿರುವ ವಿಷಯವೇ।

ತಣ್ಣೀರಿನ ಸ್ನಾನ ದೇಹಕ್ಕೆ ಉತ್ಸಾಹ, ಲವಲವಿಕೆ ತಂದುಕೊಡುತ್ತದೆ. ತಣ್ಣೀರಿನ ಅಭ್ಯಾಸ ಒಳ್ಳೆಯದು. ಶೀತಕಾಲದಲ್ಲಿ ಬೆಚ್ಚಗಿನ ನೀರಿನ ಸ್ನಾನ ಆರೋಗ್ಯ ಕಾಪಾಡುತ್ತದೆ. ಅತಿ ಬಿಸಿ ನೀರಿನ ಸ್ನಾನ ಮಾಡುವುದು ಅಪಾಯಕಾರಿ.

ವಿಶ್ವ ಕ್ಷಯರೋಗ ದಿನಾಚರಣೆ – 2017

# ಕ್ಷಯರೋಗ ತಡೆಗಟ್ಟಿ...



**ಸರ್ಕಾರದ ವತಿಯಿಂದ ರಾಜ್ಯಾದ್ಯಂತ ಎಲ್ಲಾ ಆಸ್ಪತ್ರೆಗಳಲ್ಲೂ, ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತ ಚಿಕಿತ್ಸೆಗೆ ವ್ಯವಸ್ಥೆ ಮಾಡಿದೆ. ಕ್ಷಯರೋಗದಿಂದ ಬಳಲುತ್ತಿರುವವರು ಈ ಅವಕಾಶವನ್ನು ಉಪಯೋಗಿಸಿಕೊಂಡು ಪೂರ್ಣಾವಧಿ ಚಿಕಿತ್ಸೆ ಪಡೆದು ತಾವು ರೋಗ ಮುಕ್ತರಾಗಿ ಜನರಿಗೆ ಕ್ಷಯರೋಗವನ್ನು ಹರಡದಂತೆ ಸಹಕರಿಸಬೇಕು**

ಡಾ॥ ಹೆಚ್. ಎಸ್. ರುದ್ರೇಶ್

ಪ್ರತಿ ವರ್ಷ ವಿಶ್ವ ಕ್ಷಯರೋಗ ದಿನಾಚರಣೆಯನ್ನು ಮಾರ್ಚ್ 24 ರಂದು ವಿಶ್ವಾದಾದ್ಯಂತ ಆಚರಿಸಲಾಗುತ್ತಿದೆ. ಹೀಗೆ ವಿಶ್ವ ಕ್ಷಯರೋಗ ದಿನಾಚರಣೆಯನ್ನು ಆಚರಿಸುವ ಉದ್ದೇಶ ಜನರಲ್ಲಿ ಸಾಂಕ್ರಾಮಿಕ ರೋಗವಾಗಿರುವ ಈ ರೋಗದ ಬಗ್ಗೆ ಅರಿವು ಮೂಡಿಸುವುದು ಹಾಗೂ ಪ್ರತಿವರ್ಷವೂ ಲಕ್ಷಾಂತರ ಜನರನ್ನು ಈ ರೋಗ ಬಲಿ ತೆಗೆದುಕೊಳ್ಳುವುದನ್ನು ಸೂಕ್ತ ಚಿಕಿತ್ಸೆಯಿಂದ ತಡೆಗಟ್ಟುವುದಾಗಿದೆ.

ಸತತ ಪ್ರಯತ್ನಗಳ, ಸೂಕ್ತ ಚಿಕಿತ್ಸೆಯ ನಡುವೆಯೂ, ಈಗಲೂ ಈ ರೋಗವನ್ನು ನಿಯಂತ್ರಣಕ್ಕೆ ತರಲಾಗದಿರುವುದು ದುರದೃಷ್ಟಕರ ಹಾಗೂ ವಿಷಾದನೀಯ. ಇದಕ್ಕೆ ಕಾರಣ ಕ್ಷಯರೋಗಿಗಳ ಅಸಹಕಾರ, ಅಂದರೆ ಕ್ಷಯವೆಂದು ಗುರುತಿಸಿ ನೀಡಿದ ಔಷಧವನ್ನು ವೈದ್ಯರು ನಿಗದಿಪಡಿಸಿದ ಅವಧಿಯವರೆವಿಗೂ ಸೇವಿಸದಿರುವುದು. ಅದಕ್ಕೆ ಕಾರಣ ಚಿಕಿತ್ಸೆ ದೀರ್ಘಾವಧಿಯಾಗಿರುವುದು. ಕನಿಷ್ಟ ಆರು ತಿಂಗಳು ಕ್ಷಯರೋಗದ ಮಾತ್ರೆಗಳನ್ನು ನುಂಗಬೇಕಾಗಿರುವುದು.

ಕ್ಷಯರೋಗವನ್ನು ಹತೋಟಿಗೆ ತರಲು ಸಾಧ್ಯವಾಗದಿರುವುದಕ್ಕೆ ಕಾರಣಗಳು ಜನರಲ್ಲಿರುವ ಅಜ್ಞಾನ, ಮೂಢನಂಬಿಕೆ, ಪರಿಣಿತ ವೈದ್ಯರಿಂದ ಚಿಕಿತ್ಸೆ ಪಡೆಯದೆ ನಾಟಿವೈದ್ಯರಿಂದ ಚಿಕಿತ್ಸೆ ಪಡೆಯುವುದು, ನಿರ್ಲಕ್ಷ್ಯ, ಸರಿಯಾದ ಮಾರ್ಗದರ್ಶನದ ಕೊರತೆ, ಹೀಗೆ ಹತ್ತಾರು ಕಾರಣಗಳು ಕ್ಷಯರೋಗ ನಿಯಂತ್ರಣ ಸಾಧ್ಯವಾಗದಿರುವುದಕ್ಕೆ ಕಾರಣಗಳು.



ಕ್ಷಯರೋಗ ನಿಯಂತ್ರಣಕ್ಕೆ ಸಮಾಜದ ಎಲ್ಲಾ ಸಂಘ ಸಂಸ್ಥೆಗಳ ಸಹಕಾರ ಅಗತ್ಯವಾಗಿ ಬೇಕಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಕ್ಷಯರೋಗ ಸಂಸ್ಥೆ ಬೆಂಗಳೂರು ಇತರ ಸಂಘ ಸಂಸ್ಥೆಗಳ ಸಹಕಾರ ಪಡೆದು ರಾಜ್ಯಾದ್ಯಂತ ಕ್ಷಯರೋಗದ ಬಗ್ಗೆ ವಿಚಾರ ಸಂಕಿರಣ, ತಿಳುವಳಿಕೆ, ಆರೋಗ್ಯ ಶಿಕ್ಷಣವನ್ನು ನೀಡುತ್ತಿದೆ. ಸರ್ಕಾರದ ವತಿಯಿಂದ ರಾಜ್ಯಾದ್ಯಂತ ಎಲ್ಲಾ ಆಸ್ಪತ್ರೆಗಳಲ್ಲೂ, ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತ ಚಿಕಿತ್ಸೆಗೆ ವ್ಯವಸ್ಥೆ ಮಾಡಿದೆ. ಕ್ಷಯರೋಗದಿಂದ ಬಳಲುತ್ತಿರುವವರು ಈ ಅವಕಾಶವನ್ನು ಉಪಯೋಗಿಸಿಕೊಂಡು ಪೂರ್ಣಾವಧಿ ಚಿಕಿತ್ಸೆ ಪಡೆದು ತಾವು ರೋಗ ಮುಕ್ತರಾಗಿ ಜನರಿಗೆ ಕ್ಷಯರೋಗವನ್ನು ಹರಡದಂತೆ ಸಹಕರಿಸಬೇಕು ಹಾಗೂ ಸಮಾಜದಿಂದ ಕ್ಷಯರೋಗವನ್ನು ಕಿತ್ತೊಗೆಯಲು ಸಹಕಾರ ನೀಡಬೇಕು.

**ಕ್ಷಯರೋಗದ ಬಗ್ಗೆ ಪ್ರತಿಯೊಬ್ಬರೂ ತಿಳಿದಿರಬೇಕಾದ ಸಂಗತಿ:**

- ಕ್ಷಯ ಒಂದು ಸಾಂಕ್ರಾಮಿಕ ರೋಗ.
- ಈ ರೋಗಕ್ಕೆ ಕಾರಣ ಮೈಕೋಬ್ಯಾಕ್ಟೀರಿಯ ಎಂಬ ರೋಗಾಣಗಳು.
- ಕ್ಷಯರೋಗದಿಂದ ಬಳಲುವ ವ್ಯಕ್ತಿ ಸೀನಿದಾಗ, ಕೆಮ್ಮಿದಾಗ, ಈ ರೋಗಾಣುಗಳು ಹೊರಬಂದು ಗಾಳಿಯಲ್ಲಿ ಸೇರಿ ರೋಗನಿರೋಧಕ ಶಕ್ತಿ ಕುಂಠಿತವಾಗಿರುವ , ಅಂದರೆ ದುರ್ಬಲರು, ಅಪೌಷ್ಟಿಕತೆಯಿಂದ ಬಳಲುತ್ತಿರುವ ವ್ಯಕ್ತಿಯನ್ನು ಸೇರಿ ರೋಗ ಕಾಣಿಸುತ್ತದೆ.

**ಕ್ಷಯರೋಗದ ಲಕ್ಷಣಗಳು**

- ಸತತವಾಗಿ ಕೆಮ್ಮು, ಕಫ ಬೀಳುವುದು
- ಕಫದಲ್ಲಿ ರಕ್ತ ಬೀಳುವುದು
- ಎದೆ ನೋವು
- ಹಸಿವಾಗದಿರುವುದು, ಸುಸ್ತು ನಿರಾಸಕ್ತಿ
- ತೂಕ ಕಳೆದುಕೊಳ್ಳುವುದು.

**ಸಾರ್ವಜನಿಕರ ಪಾತ್ರ**

ಸಾರ್ವಜನಿಕರು, ಸಮಾಜದ ಮುಖಂಡರು, ಸಂಘ ಸಂಸ್ಥೆಗಳು, ಮೇಲೆ ತಿಳಿಸಿದ ರೋಗ ಲಕ್ಷಣಗಳುಳ್ಳ (ಯಾವುದಾದರೂ ಒಂದು ಲಕ್ಷಣವಿದ್ದರೂ) ವ್ಯಕ್ತಿ ಕಂಡುಬಂದರೆ ಅಂತಹ ವ್ಯಕ್ತಿಗೆ ತಿಳಿಯ ಹೇಳಿ ಹತ್ತಿರದ ಪಾಥಮಿಕ ಕೇಂದ್ರಕ್ಕಾಗಲಿ, ಆಸ್ಪತ್ರೆಗಾಗಲಿ ಹೋಗಲು ತಿಳಿಸಿ ಹೇಳುವುದು ಅಥವ ತಾವೇ ಕರೆದೊಯ್ದು ವೈದ್ಯರ ಗಮನಕ್ಕೆ ತರುವುದು ಮಾಡಿದಲ್ಲಿ ಕ್ಷಯರೋಗದ ತಡೆಗೆ ಸಹಾಯ ಹಸ್ತ ನೀಡಿದಂತಾಗುತ್ತದೆ

**ಈಗ ಮುಂದಿರುವ ಗುರಿ**

ಕ್ಷಯರೋಗಕ್ಕೆ 2025 ರ ವೇಳೆಗೆ ಪೂರ್ಣ ತಡೆಹಾಕುವುದು ಮತ್ತು 2030 ರ ವೇಳೆಗೆ ಕ್ಷಯರೋಗವನ್ನು ನಿರ್ಮೂಲನ ಮಾಡುವುದಾಗಿದೆ. ಈ ಮಹತ್ತರ ಕಾರ್ಯಕ್ಕೆ ಸರ್ವರ ಸಹಕಾರ ಅತ್ಯಗತ್ಯ.

# ವಿಶ್ವ ಧೂಮಪಾನ ವಿರೋಧಿ ದಿನ

ಡಾ. ಗುರಲಿಂಗಪ್ಪ ಅಂಕದ



- ವಿಶ್ವದಾದ್ಯಂತ ತಡೆಗಟ್ಟಬಹುದಾದ ಕಾಯಿಲೆ ಮತ್ತು ಮರಣಗಳ ಕಾರಣಗಳಲ್ಲಿ ತಂಬಾಕು ಸೇವನೆಯು ಏಕೈಕ ಪ್ರಮುಖ ಕಾರಣವಾಗಿದೆ.
- ಪ್ರತೀ ವರ್ಷ ವಿಶ್ವದಾದ್ಯಂತ 55 ಲಕ್ಷಕ್ಕೂ ಹೆಚ್ಚು ಜನರು ತಂಬಾಕು ಸೇವನೆಯಿಂದ ಸಾಯುತ್ತಿದ್ದಾರೆ.
- ಪ್ರತೀ ವರ್ಷ ಭಾರತದಲ್ಲಿ 10 ಲಕ್ಷ ಜನರು ತಂಬಾಕು ಸೇವನೆಯಿಂದ ಸಾಯುತ್ತಿದ್ದಾರೆ.
- ಇದು ಏಡ್ಸ್, ಕ್ಷಯ ಹಾಗೂ ಮಲೇರಿಯಾ ಈ ಮೂರು ರೋಗಗಳಿಂದ ಒಟ್ಟಾರೆ0ಯಾಗಿ ಸಾಯುವ ಜನರಿಗಿಂತ ಹೆಚ್ಚಿನ ಸಂಖ್ಯೆಯಾಗಿದೆ.
- ತಂಬಾಕಿನಿಂದ ಸಾವನ್ನಪ್ಪುವವರ ಪೈಕಿ ಶೇ.80 ರಷ್ಟು ಜನ ಗ್ರಾಮೀಣ ಭಾಗದವರು ಎಂಬುದು ಆಘಾತಕಾರಿ ಸಂಗತಿ.
- ಭಾರತದಲ್ಲಿ ಪುರುಷರು ಮತ್ತು ಮಹಿಳೆಯರಿಗೆ ತಂಬಾಕಿನಿಂದ ಬರುವ ಕ್ಯಾನ್ಸರ್‌ನ ಪ್ರಮಾಣ ಕ್ರಮವಾಗಿ ಶೇ. 56.4 ಮತ್ತು ಶೇ. 44.6 ಆಗಿದೆ.
- ಭಾರತದ ಪ್ರತೀ 100 ಕ್ಯಾನ್ಸರ್ ಪ್ರಕರಣಗಳಲ್ಲಿ 40 ತಂಬಾಕು ಸೇವನೆಗೆ ಸಂಬಂಧಿಸಿದ್ದಾಗಿವೆ.
- ಸುಮಾರು ಶೇ. 95 ರಷ್ಟು ಬಾಯಿ ಕ್ಯಾನ್ಸರ್‌ಗೆ ಕಾರಣ ತಂಬಾಕು ಸೇವನೆಯಾಗಿದೆ.
- ತಂಬಾಕು ಸೇವಿಸುವವರು ತಂಬಾಕು ಸೇವಿಸದವರಿಗಿಂತ 10 ವರ್ಷ ಹೆಚ್ಚು ವಯಸ್ಸಾದಂತೆ ಕಾಣುತ್ತಾರೆ.

**ಧೂ**ಮಪಾನ ನಿಷೇಧಿಸಿದೆ... ತಂಬಾಕು ಕೊಲ್ಲುತ್ತದೆ... ಎಂಬ ಸೂಚನಾ ಫಲಕಗಳನ್ನು ನಾವು ಪ್ರತಿನಿತ್ಯ ನೋಡುತ್ತೇವೆ. 'ತಂಬಾಕು ಸೇವನೆ ಆರೋಗ್ಯಕ್ಕೆ ಹಾನಿಕರ' ಎಂದು ಸಿಗರೇಟು, ಗುಟಕಾ ಮುಂತಾದ ತಂಬಾಕುಯುಕ್ತ ಪದಾರ್ಥಗಳ ಪಾಕೀಟಿನ ಮೇಲೆ ಓದುತ್ತೇವೆ ಜೊತೆಗೆ ಶ್ವಾಸಕೋಶಗಳ ಹಾಳಾದ ಚಿತ್ರ, ಚೇಳಿನ–ಅಸ್ಥಿಪಂಜರದ ಚಿತ್ರ ಹೀಗೆ ಹಲವಾರು ಭಯಾನಕ ಚಿತ್ರಗಳನ್ನೂ ಕಾಣುತ್ತೇವೆ. ಇದರ ಅರ್ಥ ತಂಬಾಕು ಸೇವನೆ ಚೇಳಿನ ವಿಷಕ್ಕಿಂತಲೂ ಹೆಚ್ಚು ವಿಷಕಾರಿ ಎಂದು ತಿಳಿದೂ ಜನರು ಇದಕ್ಕೆ ದಾಸರಾಗಿರುವುದು ನಿಜಕ್ಕೂ ವಿಷಾದನೀಯ.

ಇಂಗ್ಲೆಂಡಿನ ಪ್ರಮುಖರು 1984ರಲ್ಲಿ ಧೂಮಪಾನಕ್ಕೆ ವಿರೋಧ ವ್ಯಕ್ತಪಡಿಸಿ ಇದಕ್ಕಾಗಿ ರಾಷ್ಟ್ರೀಯ ಮಟ್ಟದಲ್ಲಿ ಮಾರ್ಚ್ ತಿಂಗಳ ಎರಡನೇ ಬುಧವಾರದಂದು "ಧೂಮಪಾನ ವಿರೋಧಿ ದಿನ"ವಾಗಿ ಆಚರಿಸಬೇಕೆಂದು ನಿರ್ಣಯಿಸಿದರು. ಧೂಮಪಾನದಿಂದ ತಮ್ಮ ಮತ್ತು ಇತರರ ಆರೋಗ್ಯ ಹಾಳು ಮಾಡುತ್ತಿರುವ ವಿಷಯ ಜನರಿಗೆ ತಿಳಿಸುವುದೇ ಇದರ ಮುಖ್ಯ ಉದ್ದೇಶವಾಗಿದೆ.

ಇನ್ನು ತಂಬಾಕು ಸಂಬಂಧಿ ಅಂಕಿಅಂಶಗಳನ್ನು ನೋಡಿದರೆ ನಿಜಕ್ಕೂ ಆಘಾತವಾಗುವುದು–

ಭಾರತದಲ್ಲಿ ತಂಬಾಕಿನ ಅನೇಕ ಉತ್ಪನ್ನಗಳು ಮಾರುಕಟ್ಟೆ0ಯಲ್ಲಿವೆ.

1) ಬೀಡಿ, ಸಿಗರೇಟ್, ಗುಟ್ಕಾ ಇವು ಧೂಮಪಾನ ರೂಪದಲ್ಲಿ ತಂಬಾಕು ಸೇವನೆಯ ವಿಧಗಳು. ಇವುಗಳಲ್ಲಿ 4 ಸಾವಿರಕ್ಕೂ ಹೆಚ್ಚು ರಾಸಾಯನಿಕಗಳು ಮತ್ತು 60 ಕ್ಯಾನ್ಸರ್‌ಕಾರಕ ವಸ್ತುಗಳಿವೆ. ಉದಾಹರಣೆಗೆ–ಅಮೋನಿಯಾ, ಅರ್ಸೆನಿಕ್, ಕಾರ್ಬನ್ ಮೊನಾಕ್ಸೈಡ್, ಹೈಡ್ರೋಜನ್, ನ್ಯಾಪ್ತಲಿನ್, ನಿಕೋಟಿನ್, ಟಾರ್ ಮುಂತಾದವು.

2) ಇನ್ನು ಧೂಮರಹಿತ ಉತ್ಪನ್ನಗಳಾದ ಅಗಿಯುವಂತಹ ಜರ್ದಾ, ಖೈನೀ, ಗುಟ್ಕಾ, ತಂಬಾಕುಯುಕ್ತ ಪಾನ್‌ಮಸಾಲಾ, ಮಾವಾ ಇತ್ಯಾದಿಗಳಲ್ಲಿ ನಿಕೋಟಿನ್, ಫಾರ್ಮಾಲ್ಡಿಹೈಡ್, ಮೆಂಥಾಲ್, ಕ್ಯಾಡ್ಮಿಯಮ್ ಮತ್ತು ಸತುಗಳಿರುತ್ತವೆ.

ಮೊದಮೊದಲು ಕೇವಲ ಶೋಕಿಗಾಗಿ ಸಿಗರೇಟ್, ಗುಟ್ಕಾ, ತಂಬಾಕು ಸೇವನೆ ಪ್ರಾರಂಭವಾಗಿ ನಂತರ ಅವು ಚಟವಾಗಿ ಪರಿಣಮಿಸಿ ಬಿಡಲು ಸಾಧ್ಯವೇ ಇಲ್ಲ ಎಂಬ ಹಂತಕ್ಕೆ ತಲುಪುವರು. ಅತಿಯಾಗಿ ತಂಬಾಕು ಸೇವಿಸುವವರು ಇತರರಿಗಿಂತ ಹೆಚ್ಚು ಚಹಾ, ಕಾಫಿ ಮದ್ಯ ಸೇವಿಸುತ್ತಾರೆ. ಇಂಥವರಿಗೆ ವ್ಯಾಯಾಮ ಮಾಡಲಾಗುವದಿಲ್ಲ, ಮಾಡಿದರೂ ಬೇಗ ಸುಸ್ತಾಗುತ್ತಾರೆ, ಉಸಿರಾಟದ ತೊಂದರೆ, ಓಡುವಾಗ ಆಟವಾಡುವಾಗ ಬಳಲುತ್ತಾರೆ. ಯುವಕರು ಮತ್ತು ಮಧ್ಯವಯಸ್ಕರು ಖಿನ್ನತೆಗೆ ತುತ್ತಾಗಿ ತಮ್ಮ ಜೀವನ ಹಾಳುಮಾಡಿಕೊಳ್ಳುತ್ತಿದ್ದಾರೆ. 'ಒಬ್ಬ ತಾಯಿ ಮಗುವಿಗೆ ಹಾಲುಣಿಸುವುದನ್ನು ನಿಲ್ಲಿಸಿದರೆ ಮಗು ಕೂಡಲೇ ಹೇಗೆ ಚಡಪಡಿಸುತ್ತದೋ ಹಾಗೆ ತಂಬಾಕು ಸೇವನೆ ನಿಲ್ಲಿಸಿದ ಮನುಷ್ಯ ಚಡಪಡಿಸುತ್ತಾನೆ'.

ಸಿಗರೇಟ್ ಸೇದುವುದರಿಂದ ಮತ್ತು ತಂಬಾಕು ಅಗಿಯುವದರಿಂದ ಏನೋ ಒಂಥರಾ ಖುಷಿ–ಕಿಕ್ ಕೊಟ್ಟು ಮೆದುಳು ಚುರುಕುಗೊಂಡಂತೆ ಭಾಸವಾಗುವುದು. ವಿಚಾರಶಕ್ತಿ ತುಂಬಾ ರಚನಾತ್ಮಕವಾಗಿ ಸಾಗುವುದು. ಇದರಿಂದ ಇನ್ನಷ್ಟು ಸೇವಿಸುವಂತೆ ಇದು ಪ್ರಚೋದಿಸುತ್ತದೆ. ಸಿಗರೇಟ್–ತಂಬಾಕು ಸೇವನೆಯ ನಂತರ ವ್ಯಕ್ತಿಯ ರಕ್ತದೊತ್ತಡ ಹಠಾತ್ತಾಗಿ ಸ್ವಲ್ಪ ಹೆಚ್ಚಾಗುವದು ಆದರೆ ದೇಹದ ಎಲ್ಲ ರಕ್ತನಾಳಗಳಲ್ಲಿರುವ ರಕ್ಷಣಾ ಪೂರೈಕೆಗೆ ಧಕ್ಕೆ ಬಂದಿರುತ್ತದೆ. ಇದರಿಂದ ವಿಶೇಷವಾಗಿ ಪಾದಗಳಿಗೆ ರಕ್ತದ ಹರಿವನ್ನು ಕಡಿಮೆ ಮಾಡಿ ಕಾಲಿನಲ್ಲಿ ಗ್ಯಾಂಗ್ರೀನ್(ಸ್ಮೋಕರ್ಸ್ ಗ್ಯಾಂಗ್ರೀನ್) ಆಗುವ ಸಾಧ್ಯತೆ ಹೆಚ್ಚಾಗುವದು. ರಕ್ತದಲ್ಲಿರುವ ಒಳ್ಳೆಯ ಕೊಬ್ಬಿನಾಂಶವನ್ನು ತಂಬಾಕು ಕಡಿಮೆ ಮಾಡುತ್ತದೆ. ಸಿಗರೇಟ್–ತಂಬಾಕು ಸೇವನೆ ಹೆಚ್ಚಾದಂತೆ ಹೃದಯದ ಕಾಯಿಲೆಗಳು, ಕೆಮ್ಮು, ಅಸ್ತಮಾ, ಕ್ಷಯ, ಲಕ್ವ ಮತ್ತು ಮುಖ್ಯವಾಗಿ ಕ್ಯಾನ್ಸರ್ ರೋಗಗಳ ಸಾಧ್ಯತೆ ಹೆಚ್ಚಾಗುವದು. ಸಾವು ಇತರರಿಗಿಂತ 2–4 ಪಟ್ಟು ಬೇಗನೆ ಸಂಭವಿಸುವದು. ಇನ್ನು ಮಹಿಳೆ0ಯರಲ್ಲಿ ಅಂಡಗಳ ಫಲವತ್ತತೆಯಲ್ಲಿ ಕ್ಷೀಣತೆ, ಗರ್ಭಪಾತ, ಕಡಿಮೆ ತೂಕದ ಶಿಶು ಜನನ, ಗರ್ಭಕಂಠದ ಕ್ಯಾನ್ಸರ್ ಕಂಡುಬರುತ್ತವೆ.

ತಂಬಾಕಿನಿಂದ ಮುಖ್ಯವಾಗಿ ಬಾಯಿ, ಗಂಟಲು, ಶ್ವಾಸಕೋಶ, ಅನ್ನನಾಳ, ಕರುಳು, ಮೂತ್ರಪಿಂಡ ಇವೇ ಮೊದಲಾದ ಅಂಗಗಳು ಕ್ಯಾನ್ಸರ್‌ಗೆ ತುತ್ತಾಗುತ್ತವೆ. ಸಾಮಾನ್ಯವಾಗಿ ಧೂಮಪಾನ ಮಾಡುವವರು ಹೆಚ್ಚಾಗಿ ಶ್ವಾಸಕೋಶದ ಕ್ಯಾನ್ಸರ್‌ಗೆ ತುತ್ತಾಗುತ್ತಾರೆ ಎಂಬ ಭೀತಿ ಜನರಲ್ಲಿದೆ. ಇದು ಸತ್ಯವಾದರೂ ಎಲ್ಲ ಧೂಮಪಾನಿಗಳೂ ಶ್ವಾಸಕೋಶದ ಕ್ಯಾನ್ಸರ್‌ಗೆ ತುತ್ತಾಗುತ್ತಾರೆ ಎಂದಲ್ಲ. ಸಂಶೋಧನೆಗಳ ಪ್ರಕಾರ ಸಿಗರೇಟ್ ಸೇದುವವರಿಗೆ ಈ ವ್ಯಾಧಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವುದು ಗೊತ್ತಾಗಿದೆ. ನಾನು ಸಿಗರೇಟ್ ಸೇದುವದಿಲ್ಲ ಎಂದು ನಿಶ್ಚಿಂತರಾದರೆ ಸಾಲದು! ಕುಟುಂಬದಲ್ಲಿರುವ ಒಬ್ಬ ಧೂಮಪಾನಿಯಿಂದ ಇತರ ಸದಸ್ಯರಿಗೂ ತೊಂದರೆ ತಪ್ಪಿದ್ದಲ್ಲ. ಪ್ರತೀ ದಿನ 2 ಪ್ಯಾಕ್ ಧೂಮಪಾನ ಮಾಡುವ ವ್ಯಕ್ತಿಯೊಂದಿಗೆ ಜೀವಿಸುವ ವ್ಯಕ್ತಿಯೂ ಪರೋಕ್ಷವಾಗಿ ದಿನಕ್ಕೆ 3 ಸಿಗರೇಟ್ ಸೇದಿದಂತಾಗುತ್ತದೆ. ಪರೋಕ್ಷ ಧೂಮಪಾನ ಮಾಡಿದವರ ಮೂತ್ರ ಪರೀಕ್ಷೆಯಿಂದ ಅವರ ಮೂತ್ರದಲ್ಲಿ ನಿಕೋಟಿನ್ ಅಂಶ ಕಂಡುಬಂದಿದೆ. ಈ ಪರೋಕ್ಷ ಧೂಮಪಾನಿಗಳಿಗೆ 'ಪ್ಯಾಸೀವ್ ಸ್ಮೋಕರ್ಸ್' ಎನ್ನುವರು.

ಜನಸಾಮಾನ್ಯರನ್ನು ತಂಬಾಕಿನ ದುಷ್ಪರಿಣಾಮಗಳಿಂದ ರಕ್ಷಿಸಲು ಭಾರತ ಸರ್ಕಾರವು ಒಂದು ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾಯ್ದೆಯನ್ನು ಜಾರಿಗೊಳಿಸಿದೆ. ಈ ಕಾಯ್ದೆಯಡಿ ಕೆಳಕಂಡವು ಅಪರಾಧವಾಗುತ್ತವೆ–

ಸಾರ್ವಜನಿಕ ಪ್ರದೇಶ ಹಾಗು ಕೆಲಸ ಮಾಡುವ ಸ್ಥಳಗಳಲ್ಲಿ



> **ತಂಬಾಕು ಸೇವನೆ ಬಿಡಲು ಸಿದ್ಧವಿರುವವರಿಗೆ ತಂಬಾಕಿನಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳು, ಸಂಸಾರದ ಆರ್ಥಿಕ ಪರಿಸ್ಥಿತಿ ಹದಗೆಡುವ ಬಗ್ಗೆ ತಿಳಿಹೇಳಲಾಗುವದು ಮತ್ತು ಅಗತ್ಯವಿದ್ದರೆ ಮನೋವೈದ್ಯರಿಂದ ಔಷಧೋಪಚಾರವನ್ನೂ ಮಾಡಲಾಗುವುದು. ತಂಬಾಕು–ಸಿಗರೇಟ್ ಬಿಡಲಿಚ್ಛಿಸುವವರು ಈ ತಂಬಾಕು ನಿ0ುಂತ್ರಣ ಘಟಕದ ಸದುಪ0ುೋಗ ಪಡೆದುಕೊಳ್ಳಬಹುದು.**

ಧೂಮಪಾನ ಮಾಡುವದು, ತಂಬಾಕು ಉತ್ಪನ್ನಗಳ ಜಾಹೀರಾತು ನೀಡುವದು, 18 ವರ್ಷದೊಳಗಿನ ಮಕ್ಕಳಿಗೆ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವದು, ಶಾಲಾ ಕಾಲೇಜುಗಳ 100 ಅಡಿಗಳ ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವದು, ತಂಬಾಕು ಉತ್ಪನ್ನಗಳ ಮೇಲೆ ಚಿತ್ರಗಳಿಂದ ಕೂಡಿದ ಎಚ್ಚರಿಕೆ0ುನ್ನು ಹಾಕದೇ ಇರುವುದು.

**ಧೂಮಪಾನ ತ್ಯಜಿಸುವುದರಿಂದ ಆಗುವ ಲಾಭಗಳು–**

ಧೂಮಪಾನ ಬಿಟ್ಟ 2 ಗಂಟೆಗಳ ನಂತರ–ದೇಹದಿಂದ ನಿಕೋಟಿನ್ ಅಂಶ ಮರೆಯಾಗುತ್ತದೆ, 12 ಗಂಟೆಗಳ ನಂತರ–ಕಾರ್ಬನ್ ಮೊನಾಕ್ಸೈಡ್ ದೇಹದಿಂದ ಮರೆ0ುಾಗಿ ಶ್ವಾಸಕೋಶದ ಚಟುವಟಿಕೆ ಹೆಚ್ಚಾಗುತ್ತದೆ, 2 ತಿಂಗಳ ನಂತರ–ಶ್ವಾಸಕೋಶ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಅಂಗಾಂಗಗಳಿಗೆ ರಕ್ತ ಚಲನೆ ವೃದ್ಧಿಸುತ್ತದೆ, 12 ತಿಂಗಳ ನಂತರ–ಧೂಮಪಾನ ಮುಂದುವರೆಸಿದ ವ್ಯಕ್ತಿಗೆ ಉಂಟಾಗುವ ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗಳ ಅಪಾಯ ಅರ್ಧದಷ್ಟು ಕಡಿಮೆಯಾಗುತ್ತವೆ, 10 ವರ್ಷಗಳ ನಂತರ– ಧೂಮಪಾನ ಮುಂದುವರೆಸಿದ ವ್ಯಕ್ತಿಗೆ ಉಂಟಾಗುವ ಶ್ವಾಸಕೋಶದ ಕ್ಯಾನ್ಸರ್‌ನ ಅಪಾಯ ಅರ್ಧದಷ್ಟು ಕಡಿಮೆಯಾಗುತ್ತವೆ, 15 ವರ್ಷಗಳ ನಂತರ–ಧೂಮಪಾನ ಮಾಡದೇ ಇರುವ ವ್ಯಕ್ತಿಗೆ ಇರುವಷ್ಟೇ ಹೃದಯಾಘಾತ ಮತ್ತು ಪಾರ್ಶ್ವವಾಯು ಅಪಾಯ ಇರುತ್ತದೆ.

ತಂಬಾಕು ನಿರ್ಮೂಲನೆ ಖಂಡಿತ ಸಾಧ್ಯ. ವ್ಯಸನಿಗಳಿಗೆ ಬೇಕಾಗಿರುವುದು ಮನೋ ದೃಢತೆ, ಅಚಲ ನಿರ್ಧಾರ ಹಾಗು ಮನೋವೈದ್ಯರ ಸಹಾಯ ಹಸ್ತ. ಶೇ.70–80 ಜನರು ತಂಬಾಕು ಸಿಗರೇಟ್ ಸೇವನೆ ಬಿಡಲು ಪ್ರಯತ್ನಿಸುತ್ತಾರೆ ಆದರೆ ವೈದ್ಯರ ಮತ್ತು ಆಪ್ತಸಮಾಲೋಚಕರ ಮಾರ್ಗದರ್ಶನವಿಲ್ಲದೇ ಅವರ ಪ್ರಯತ್ನ ವಿಫಲವಾಗುವದು. ಇದಕ್ಕಾಗಿ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿ ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲಿ 'ಜಿಲ್ಲಾ ತಂಬಾಕು ನಿಯಂತ್ರಣ ಘಟಕ' ಸ್ಥಾಪಿಸಲಾಗಿದೆ. ಇಲ್ಲಿ ತಂಬಾಕು ಸೇವನೆ ಬಿಡಲು ಸಿದ್ಧವಿರುವವರಿಗೆ ತಂಬಾಕಿನಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳು, ಸಂಸಾರದ ಆರ್ಥಿಕ ಪರಿಸ್ಥಿತಿ ಹದಗೆಡುವ ಬಗ್ಗೆ ತಿಳಿಹೇಳಲಾಗುವದು ಮತ್ತು ಅಗತ್ಯವಿದ್ದರೆ ಮನೋವೈದ್ಯರಿಂದ ಔಷಧೋಪಚಾರವನ್ನೂ ಮಾಡಲಾಗುವುದು. ತಂಬಾಕು–ಸಿಗರೇಟ್ ಬಿಡಲಿಚ್ಛಿಸುವವರು ಈ ತಂಬಾಕು ನಿ0ುಂತ್ರಣ ಘಟಕದ ಸದುಪಯೋಗ ಪಡೆದುಕೊಳ್ಳಬಹುದು.

ಇನ್ನು ಮಾರುಕಟ್ಟೆಯಲ್ಲಿ ಸಿಗುವ ನಿಕೋಟಿನ್ ಗಮ್, ಮಾತ್ರೆಗಳು, ಪ್ಯಾಚ್‌ಗಳೂ ನಿಮಗೆ ಸಹಾ0ುು ಮಾಡಬಲ್ಲವು. ವೈದ್ಯರ ಸಲಹೆ, ಮನೋವಿಶ್ಲೇಷಣೆ, ಖಿನ್ನತೆ ನಿವಾರಣಾ ಔಷಧಿಗಳು ನಿಮ್ಮ ಮನಸ್ಸನ್ನು ಇನ್ನಷ್ಟು ಗಟ್ಟಿಗೊಳಿಸುತ್ತವೆ. ಇದಕ್ಕೆ ನೀವು ಮಾಡಬೇಕಾದದ್ದು ದೃಢನಿರ್ಧಾರ, ಯಾವುದೇ ಬಗೆಯ ತಂಬಾಕು, ಲೈಟರ್, ಬೆಂಕಿ ಪೊಟ್ಟಣ, ಆ್ಯಶ್ ಟ್ರೇಗಳನ್ನು ನಾಶಪಡಿಸಿರಿ ಇನ್ನು ಅವುಗಳ ಅವಶ್ಯಕತೆ ನಿಮಗಿಲ್ಲ. ನಿಮಗೆ ಧೂಮಪಾನ ಮಾಡಲು ಪ್ರಚೋದಿಸುವ ಸಂಗತಿಗಳನ್ನು (ಸಿಗರೇಟ್ ಅಂಗಡಿ, ಧೂಮಪಾನ ಮಾಡುವವರನ್ನು ನೋಡುವದು) ಗುರುತಿಸಿ ಅವುಗಳಿಂದ ದೂರವಿರಿ.

ಇಂದಿನ ದಿನಗಳಲ್ಲಿ ಮಕ್ಕಳು ತಮ್ಮ 14 ನೇ ವಯಸ್ಸಿಗೇ ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಆದ್ದರಿಂದ ಪೋಷಕರು ಮಕ್ಕಳೊಂದಿಗೆ ಮುಕ್ತವಾಗಿ ತಂಬಾಕಿನ ದುಷ್ಪರಿಣಾಮಗಳನ್ನು ಚರ್ಚಿಸಬೇಕು, ಮಾಧ್ಯಮ ಜಾಹಿರಾತುಗಳಿಗೆ ಮಕ್ಕಳು ಬೇಗನೆ ಆಕರ್ಷಿತರಾಗುತ್ತಾರೆ. ಆದ್ದರಿಂದ ಅದರ ಸತ್ಯಾಂಶಗಳನ್ನು ಪೋಷಕರೇ ನೇರವಾಗಿ ತಿಳಿಸಿ ಹೇಳಬೇಕು.

ಈ ಧೂಮಪಾನಿಗಳು ತಮ್ಮ ಜೊತೆಗೆ ಇತರರ ಆರೋಗ್ಯವನ್ನೂ ಹಾಳುಮಾಡುತ್ತಿದ್ದಾರೆ. ಜನನಿಬಿಡ ಪ್ರದೇಶಗಳಾದ ಬಸ್‌ನಿಲ್ದಾಣ, ಚಿತ್ರಮಂದಿರ, ಉದ್ಯಾನ, ಆಸ್ಪತ್ರೆ, ಶಾಲಾ ಕಾಲೇಜ್ ಆವರಣದಲ್ಲಿ ಇವರು ನಿರಾತಂಕವಾಗಿ ಧೂಮಪಾನ ಮಾಡುತ್ತಿದ್ದಾರೆ. ಸರ್ಕಾರ 'ಧೂಮಪಾನ ನಿಷೇಧಿಸಿದೆ', 'ಧೂಮಪಾನ ದಂಡಕ್ಕೆ ಕಾರಣ' ಎಂತೆಲ್ಲ ಸೂಚನಾ ಫಲಕಗಳನ್ನು ಹಾಕಿದರೂ ಪ್ರಯೋಜನವಾಗಿಲ್ಲ ಕಾರಣ ಜನಸಾಮಾನ್ಯರಾದ ನಾವುಗಳು ಕನಿಷ್ಠಪಕ್ಷ 'ಇಲ್ಲಿ ಧೂಮಪಾನ ಮಾಡಬೇಡಿ' ಎಂದು ವಿನಯಪೂರ್ವಕವಾಗಿ ಒಂದು ಮಾತನ್ನಾದರೂ ಹೇಳುವುದರಿಂದ ನೂರರಲ್ಲಿ ಒಬ್ಬರಾದರೂ ಸಾರ್ವಜನಿಕ ಪ್ರದೇಶಗಳಲ್ಲಿ ಧೂಮಪಾನ ಮಾಡುವುದನ್ನು ನಿಲ್ಲಿಸಿದರೆ ಅದು ಈ ಸಮಾಜಕ್ಕೆ ನಿಮ್ಮ ಕೊಡುಗೆಯೇ ಸರಿ.

**ಕೊನೆಯದಾಗಿ–**

- ಎಲ್ಲ ಬಗೆ0ುು ತಂಬಾಕು ಸೇವನೆ ಅಪಾ0ುುಕಾರಿ.
- ತಂಬಾಕು ಸೇವನೆಯಿಂದ ಆರೋಗ್ಯ ಮತ್ತು ಕುಟುಂಬದ ಆರ್ಥಿಕ ಪರಿಸ್ಥಿತಿ0ುು ಮೇಲೆ ತುಂಬಾ ಪರಿಣಾಮ ಬೀರುತ್ತದೆ.
- ನಾನು ಸುಡುತ್ತಿರುವ ಸಿಗರೇಟ್ ನನ್ನನ್ನೂ ನನ್ನ ಸುತ್ತಲ ಪ್ರಪಂಚವನ್ನೂ ಒಟ್ಟಿಗೆ ಸುಡುತ್ತದೆ, ಎಂಬ ಪುಟ್ಟದೊಂದು ಅರಿವು ಧೂಮಪಾನಿಗೆ ಇದ್ದರೆ ಸಾಕು.

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Lavanya Mudrana, #19, Vidyapeeta Circle, Banashankari 1st Stage, Bangalore - 560 050